# ಹೊಸ ಜಿಜ್ಞಾಸುಗಳ ಪ್ರಶ್ನೆಗಳಿಗೆ ಉತ್ತರಗಳು ಮತ್ತು ಮನಸ್ಸಿಗೆ ಉಪದೇಶ

(ಅಧ್ಯಾತ್ಮಪ್ರಕಾಶ ಪತ್ರಿಕೆಯಲ್ಲಿ ಶ್ರೀಶ್ರೀಗಳು ಬರೆದು
ಪ್ರಕಟಿಸಿದ್ದ 66 ಲೇಖನಗಳ ಸಂಗ್ರಹ)



ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಅಧ್ಯಾತ್ಮಪ್ರಕಾಶ ಕಾರ್ಯಾಲಯ
ಹೊಳೆನರಸೀಪುರ - 573 211
ದೂರವಾಣಿ : 08175 273820

# ಶ್ರೀಶ್ರೀಗಳವರ ಕೃತಿಗಳು

## (ಅಧ್ಯಾತ್ಮಪ್ರಕಾಶ ಪತ್ರಿಕೆಯಿಂದ ಆಯ್ದ ಲೇಖನಗಳ ಸಂಗ್ರಹ)

ಶ್ರೀ ಶ್ರೀಗಳವರು ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯನ್ನು 1923 ಮಾರ್ಚ್‌ನಲ್ಲಿ ಪ್ರಾರಂಭಿಸಿ ತಾವು ಬ್ರಹ್ಮೀಭೂತರಾಗುವವರೆಗೂ (5.8.75) ತಾವೇ ಪ್ರಧಾನ ಸಂಪಾದಕರಾಗಿ ಮುನ್ನಡೆಸಿದರು. ಕಥೆ, ಸಂಭಾಷಣೆ, ಪರಿಶೀಲನೆ, ಜಿಜ್ಞಾಸೆ, ಪರಾಮರ್ಶೆ, ಸಂಶೋಧನೆ ಎಂಬಂತೆ ವಿವಿಧ ವಿಷಯಗಳನ್ನು ಕುರಿತು ಬರೆದ ಲೇಖನಗಳು ಬೇರೆ ಬೇರೆ ಹಂತದ ಜಿಜ್ಞಾಸುಗಳ ಮನೋಧರ್ಮಕ್ಕೆ ತಕ್ಕಂತೆ ಇರುತ್ತಿದ್ದವು. ಜನಸಾಮಾನ್ಯರಿಗೆ 1-2 ಪುಟಗಳಲ್ಲಿ ವೇದಾಂತದಲ್ಲಿ ಸಾಕಷ್ಟು ಪ್ರವೇಶ ಪಡೆದವರಿಗೆ ಹೆಚ್ಚು ವಿಸ್ತಾರವಾಗಿಯೂ ಬರೆಯುತ್ತಿದ್ದರು. ಈಗ ಹಳೆಯ ಸಂಪುಟಗಳು ದೊರೆಯುತ್ತಿಲ್ಲ. ಅನೇಕ ಭಕ್ತರ ಅಪೇಕ್ಷೆಯಂತೆ ಗ್ರಂಥರೂಪದಲ್ಲಿ ಹೊಸತಂದಿರುವ ಕೆಲವು ಪುಸ್ತಕಗಳ ಕಿರುಪರಿಚಯ ಇಲ್ಲಿದೆ.

### 1. ಋಗ್ವೇದಿಯ ಪುರುಷಸೂಕ್ತ (ಮಂತ್ರಾರ್ಥ ವಿವೇಚನೆ)

ಅ.ಪ್ರ . ಪತ್ರಿಕೆಯ 24ನೆ ಸಂಪುಟದ (ಸೆಪ್ಟೆಂಬರ್ 1954ರಿಂದ ಆಗಸ್ಟ್ 1955) 12 ಲೇಖನಗಳ ಸಂಕಲನ. ಪೂಜೆ ಮಾಡುವ ಪ್ರತಿಯೊಬ್ಬ ಆಸ್ತಿಕನಿಗೂ ತುಂಬ ಉಪಕಾರಿಯಾಗಿದೆ. ನಿಜವಾದ ಅರ್ಥವು ತಾತ್ವಿಕವಾಗಿ ಹೇಗೆ ವಿಸ್ತೃತವಾಗಿದೆ ಮತ್ತು ಕೇವಲ ಕರ್ಮಪರವಾಗಿರದೆ, ಭಕ್ತಿ , ಉಪಾಸನೆ, ಜ್ಞಾನಪರವಾಗಿದೆಯೆಂಬುದನ್ನು ಮಾರ್ಮಿಕವಾಗಿ ಹೃದಯಕ್ಕೆ ತಾಕುವ ಹಾಗೆ ಶ್ರೀ ಶ್ರೀಗಳವರು ಪ್ರತಿಪಾದಿಸಿದ್ದಾರೆ. ಎಲ್ಲ ವೇದದವರಿಗೂ ಮತ್ತು ಆಸ್ತಿಕ ಮಹಾಶಯರಿಗೂ ಉಪಯುಕ್ತವಾದ ಗ್ರಂಥ.

(ಎರಡನೆಯ ಮುದ್ರಣ, 2011, ಪು. 115, ಬೆಲೆ. 30 ರೂ.)

### 2. ವೇದಾಂತ ಸಂದೇಶಗಳು : ಸಂಪುಟ 1 (ಪರಮಾರ್ಥ ಚಿಂತನೆ)

1946 ಸೆಪ್ಟೆಂಬರ್‌ನಿಂದ 1949 ಆಗಸ್ಟ್‌ರವರೆಗೆ ''ಈ ತಿಂಗಳ ಸಂದೇಶ'' ಎಂಬ ಶೀರ್ಷಿಕೆಯಲ್ಲಿ ಶ್ರೀ ಶ್ರೀಗಳವರು ಬರೆದು ಅ. ಪ್ರ. ಮಾಸಪತ್ರಿಕೆಯಲ್ಲಿ ಪ್ರಕಟಿಸಿದ್ದ 36 ಲೇಖನಗಳ ಸಂಗ್ರಹ. ''ಭಗವಂತನಿಗೆ ಯಾವ ಹೆಸರು, ಪರಮಾತ್ಮನನ್ನು ಎಲ್ಲಿ ಕಾಣಬೇಕು, ಸ್ತೋತ್ರ , ಪ್ರಾರ್ಥನೆಗಳನ್ನು ಹೇಗೆ ಮಾಡಬೇಕು, ದುಃಖ ಕಷ್ಟ ಪರಿಹಾರಕ್ಕೆ ಭಗವಂತನನ್ನೇ ಶರಣು ಹೊಂದಬೇಕು'' ಎಂಬಿವೇ ಮುಂತಾದ ಮಹತ್ಪೂರ್ಣವಾದ ವಿಚಾರಗಳಿಂದ ತುಂಬಿ, ತತ್ತ್ವಜಿಜ್ಞಾಸುಗಳಿಗೆ ದಾರಿದೀಪದಂತಿದೆ. ಸಂಸ್ಕೃತ ಬಾರದವರಿಗೂ, ಸರಿಯಾದ ಗುರುಗಳು ದೊರಕದವರಿಗೂ ಈ ಗ್ರಂಥವು ಮಾರ್ಗದರ್ಶನವಾಗಿದೆ.

(ಎರಡನೆಯ ಮುದ್ರಣ, 2011, ಪು. 218, ಬೆಲೆ. 50 ರೂ.)

### 3. ವೇದಾಂತ ಸಂದೇಶಗಳು : ಸಂಪುಟ 2 (ಉಪನಿಷತ್ ಸಿರಿ)

ಬೇರೆ ಬೇರೆ ಉಪನಿಷತ್ತುಗಳ ವಾಕ್ಯಗಳನ್ನು ಸಂಚಿಕೆಗೊಂದರಂತೆ ಅ. ಪ್ರ. ಪತ್ರಿಕೆಯಲ್ಲಿ ಸಂಪುಟ 8, 9, 21, 26, 27ರಲ್ಲಿ ಪ್ರಕಟಿಸಿದ್ದ 52 ಲೇಖನಗಳ ಸಂಗ್ರಹ. ಮೊದಲು ದಶಶಾಂತಿ ಮಂತ್ರದ ಅರ್ಥ ಮತ್ತು ವಿವರಣೆ, ಅನಂತರ (1) ಇರಿವಿನ ಅರಿವು (2) ಆನಂದ ಸ್ವರೂಪವಾದ ಆತ್ಮನ ವಿಚಾರ (3) ಅಧ್ಯಾತ್ಮಸಾಧನಗಳು (4) ಜ್ಞಾನಸಾಧನೆಗಳು ಮತ್ತು (5) ಸಾಧನ ಕ್ರಮ ಎಂಬ ಐದು ಅಧ್ಯಾಯಗಳಲ್ಲಿ ಲೇಖನಗಳನ್ನು ಅಳವಡಿಸಿದೆ. ಧ್ಯಾನಯೋಗವನ್ನು ಹೇಗೆ ಮಾಡಬೇಕು ಮತ್ತು ಉಪಾಸನಾ ಕ್ರಮವನ್ನೂ ಶಾಸ್ತ್ರೀಯ ರೀತಿಯಲ್ಲಿ ತಿಳಿಸಿದೆ.

(ಎರಡನೆಯ ಮುದ್ರಣ, 2012, ಪು.247, ಬೆಲೆ. 60 ರೂ.)

### 4. ವೇದಾಂತ ಸಂದೇಶಗಳು : ಸಂಪುಟ 3 (ಅಧ್ಯಾತ್ಮ ಬೆಳಕು)

ಅ.ಪ್ರ . ಪತ್ರಿಕೆಯಲ್ಲಿ 1923ರಲ್ಲಿ ಪ್ರಾರಂಭವಾಗಿ 1974ರವರೆಗೂ ಕೆಲವೊಮ್ಮೆ ಪ್ರತಿ ತಿಂಗಳೂ ಮತ್ತು ಕೆಲವು ಒಂದೆರಡು ವರ್ಷಗಳ ಅಂತರದಲ್ಲೂ ಶ್ರೀ ಶ್ರೀಗಳವರು ಬರೆದು ಪ್ರಕಟಿಸಿದ್ದ ಸುಮಾರು 210 ಲೇಖನಗಳ ಸಂಗ್ರಹ. ಅರ್ಧ ಪುಟದಿಂದ ಹಿಡಿದು ಮೂರು ನಾಲ್ಕು ಪುಟಗಳ ಲೇಖನಗಳನ್ನೊಳಗೊಂಡಿವೆ. ಸ್ಥೂಲವಾಗಿ (1) ಅಧ್ಯಾತ್ಮ ವಿದ್ಯೆ (2) ಅಧ್ಯಾತ್ಮದ ಮೊದಲ ಸೋಪಾನ (3) ಅಧ್ಯಾತ್ಮಸಾಧನಗಳು (4) ಅಧ್ಯಾತ್ಮಪ್ರಕಾಶ (5) ಅಧ್ಯಾತ್ಮ ಚಿಂತನೆ (6) ಅಧ್ಯಾತ್ಮಜ್ಞಾನ ಎಂಬ ಆರು ಅಧ್ಯಾಯಗಳಾಗಿ ವರ್ಗೀಕರಿಸಿ ಎಲ್ಲಾ ಲೇಖನಗಳನ್ನೂ ಅಳವಡಿಸಿದೆ.

(ರಕ್ಷಾಕವಚದ ಮರು ಹಾಳೆಯಲ್ಲಿ ಮುಂದುವರೆದಿದೆ).

ಅಧ್ಯಾತ್ಮ ಗ್ರಂಥಾವಳಿ

# ಹೊಸ ಜಿಜ್ಞಾಸುಗಳ ಪ್ರಶ್ನೆಗಳಿಗೆ ಉತ್ತರಗಳು ಮತ್ತು ಮನಸ್ಸಿಗೆ ಉಪದೇಶ

(ಅಧ್ಯಾತ್ಮಪ್ರಕಾಶ ಪತ್ರಿಕೆಯಲ್ಲಿ ಶ್ರೀಶ್ರೀಗಳು ಬರೆದು ಪ್ರಕಟಿಸಿದ್ದ 66 ಲೇಖನಗಳ ಸಂಗ್ರಹ)

ಸಂಗ್ರಹಕಾರರು

ಅಧ್ಯಾತ್ಮಪ್ರಕಾಶಕಾರ್ಯಾಲಯ

ಕ್ರಮಾಂಕ : 257

ಅಧ್ಯಾತ್ಮ ಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ - 573 211

ದೂರವಾಣಿ: 08175-273820

www.adhyatmaprakasha.org.

email: secretary@adhyatmaprakasha.org

ಬೆಂಗಳೂರು ಶಾಖೆ :

ನಂ. 68, (ಹೊಸ ನಂ. 6), ಎ.ಪಿ.ಕೆ. ರಸ್ತೆ, 2ನೇ ಬ್ಲಾಕ್,

ತ್ಯಾಗರಾಜನಗರ, ಬೆಂಗಳೂರು - 28 ದೂ : 2676 5548

email: shankara.bhaskara@gmail.com

**HOSA JIGNASUGALA PRASHNEGALIGE UTTARAGALU & MANASSIGE UPADESHA:** Articles Written by **Sri Sri Sachidanandendra Saraswathi Swamiji, of** Holenarasipur; Compiled & Published by Adhyatma Prakasha Karyalaya, Holenarasipur - 573 211, India , Phone : 08175-273820

website www.adhyatmaprakasha.org.
email: adhyatmaprakasha@gmail.com

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು

All Rights Reserved

| | | |
|---|---|---|
| ಮೊದಲನೆಯ ಮುದ್ರಣ | : | **2014** |
| ಪ್ರತಿಗಳು : | : | **2000** |
| ಮುದ್ರಣ ಕಾಗದ | : | **70 GSM NS Maplitho** |
| ಪುಟಗಳು | : | **12+72=84** |

ಬೆಲೆ : ರೂ. 30/-

**ಪ್ರತಿಗಳು ದೊರೆಯುವ ಸ್ಥಳ :**
**ಅಧ್ಯಾತ್ಮಪ್ರಕಾಶಕಾರ್ಯಾಲಯ**
**ತ್ಯಾಗರಾಜನಗರ, ಬೆಂಗಳೂರು - 560 028**
**ದೂ : 080-26765548**
email: shankara.bhaskara@gmail.com

**ಅಕ್ಷರ ಜೋಡಣೆ ಮತ್ತು ಮುದ್ರಣ ಸ್ಥಾನ:**
ಶ್ರೀರಾಮ ಪ್ರಿಂಟರ್ಸ್
ನಂ.25, 15ನೇ ಕ್ರಾಸ್,
ಶ್ರೀನಿಧಿ ಲೇಔಟ್, ಬೆಂಗಳೂರು - 560 062
ದೂ.: 98453 46197

ಸದ್ಗುರುಭ್ಯೋ ನಮಃ

# ಪ್ರಕಾಶಕರ ಬಿನ್ನಹ

ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು 'ಅಧ್ಯಾತ್ಮಪ್ರಕಾಶ' ಮಾಸಪತ್ರಿಕೆಯನ್ನು 1923ನೆಯ ಮಾರ್ಚಿತಿಂಗಳಿನಲ್ಲಿ ಪ್ರಾರಂಭಿಸಿ, ತಾವು ಬ್ರಹ್ಮೀಭೂತರಾಗುವವರೆಗೂ ಅಂದರೆ 5-8-1975ರವರೆಗೂ ತಾವೇ ಪ್ರಧಾನ ಸಂಪಾದಕರಾಗಿ ಮುನ್ನಡೆಸಿದರು. ಕಥೆ, ಸಂಭಾಷಣೆ, ಪರಿಶೀಲನೆ, ಜಿಜ್ಞಾಸೆ, ಪರಾಮರ್ಶೆ, ಸಂಶೋಧನೆ, ವಿವರಣೆ, ನಿರೂಪಣೆ ಎಂಬಂತೆ ಸ್ವಾಮಿಗಳವರು ವಿವಿಧ ವಿಷಯಗಳನ್ನು ಕುರಿತು ಬರೆದ ಲೇಖನಗಳು ಬೇರೆ ಬೇರೆ ಹಂತದ ಜಿಜ್ಞಾಸುಗಳ ಮನೋಧರ್ಮಕ್ಕೆ ತಕ್ಕಂತೆ ಇರುತ್ತಿದ್ದುವು. ಜನಸಾಮಾನ್ಯರಿಗೆ 1-2 ಪುಟಗಳಲ್ಲಿಯೂ, ವೇದಾಂತದಲ್ಲಿ ಸಾಕಷ್ಟು ಪ್ರವೇಶಪಡೆದವರಿಗೆ ಹೆಚ್ಚು ವಿಸ್ತಾರವಾಗಿಯೂ ಅವರು ಬರೆಯುತ್ತಿದ್ದರು.

ಸ್ವಾಮಿಗಳವರು ಪತ್ರಿಕೆಯ ಸಂಚಿಕೆಗಳಲ್ಲಿ ಬರೆದಿರುವ ಲೇಖನಗಳ ಸಂಖ್ಯೆ ಅಪಾರವಾಗಿದೆ. ಅನೇಕ ಭಕ್ತಾದಿಗಳ ಅಪೇಕ್ಷೆಯಂತೆ ಕಾರ್ಯಾಲಯದ ಕಮಿಟಿಯವರು, ಐದಾರು ವರ್ಷಗಳ ಹಿಂದೆಯೇ ಆ ಲೇಖನಗಳನ್ನೆಲ್ಲ ಹುಡುಕಿ ತೆಗೆದು ಒಟ್ಟುಗೂಡಿಸಿದರು. ಆಗ ಅವುಗಳ ಪ್ರಮಾಣ ಐದಾರು ಸಾವಿರ ಪುಟಗಳಷ್ಟು ವಿಶಾಲವಾಗಿದೆಯೆಂಬುದು ಗಮನಕ್ಕೆ ಬಂದಿತು. ಆ ಗುಂಪಿನಲ್ಲಿ ಉಪಯುಕ್ತವಾದ ಲೇಖನಗಳನ್ನು ವಿಂಗಡಿಸಿ, ವಿಷಯಾನುಕ್ರಮವಾಗಿ ಒಟ್ಟುಗೂಡಿಸಿ, 300-400 ಪುಟಗಳಂತೆ, 8-10 ಸಂಪುಟಗಳಲ್ಲಿ ಹೊರತರಲು ತೀರ್ಮಾನಿಸಿದರು.

ಈ ಕೃತಿಶ್ರೇಣಿಯಲ್ಲಿ ವಿದ್ವಾಂಸರುಗಳ ಸಹಾಯದಿಂದ ಇಲ್ಲಿಯವರೆಗೆ ಈ ಕೆಳಕಂಡಂತೆ ಒಟ್ಟು ಐದು ಸಂಪುಟಗಳು ಹೊರಬಂದಿವೆ. **'ವೇದಾಂತ ಸಂದೇಶಗಳು'** ಎಂಬುದು ಪ್ರಧಾನ ಶೀರ್ಷಿಕೆಯಾಗಿದೆ.

1. ಸಂಪುಟ -1: ಪರಮಾರ್ಥ ಚಿಂತನೆ : ಪು. 218
2. ಸಂಪುಟ -2: ಉಪನಿಷತ್ತುಗಳ ಸಿರಿ: ಪು. 247
3. ಸಂಪುಟ -3: ಅಧ್ಯಾತ್ಮಬೆಳಕು:ಪು. 356
4. ಸಂಪುಟ -4: ಅಧ್ಯಾತ್ಮದ ಔನ್ನತ್ಯದೆಡೆಗೆ:334
5. ಸಂಪುಟ -5: ಶಂಕರರ ಪತ್ರಗಳು-ಹಿತವಚನಗಳು:ಪು.583

ಈ ಐದೂ ಸಂಪುಟಗಳು ಜನಪ್ರಿಯವಾಗಿದ್ದು, ಕಾರ್ಯಾಲಯದಲ್ಲಿ ಸುಲಭದರದಲ್ಲಿ ದೊರಕುತ್ತವೆ.

ಶ್ರೀಶ್ರೀಗಳವರು 1950 ಸೆಪ್ಟಂಬರ್ (ಸಂಪುಟ 20) ನಿಂದ 1956ನೇ ಮೇ (ಸಂಪುಟ 25)ವರೆಗೆ **'ಹೊಸ ಜಿಜ್ಞಾಸುಗಳ ಪ್ರಶ್ನೆಗಳಿಗೆ ಉತ್ತರಗಳು'** ಎಂಬ ಶೀರ್ಷಿಕೆಯಲ್ಲಿ 54 ಲೇಖನಗಳನ್ನು ಪ್ರಶ್ನೋತ್ತರ ರೂಪದಲ್ಲಿ 1-2 ಪುಟಗಳಂತೆ ಪ್ರಕಟಿಸಿದ್ದರು. ಅಂತೆಯೇ 1956ನೆಯ ಸೆಪ್ಟಂಬರ್‌ನಿಂದ 1957ನೆಯ ಆಗಸ್ಟ್‌ವರೆಗೆ (ಸಂ.26) **'ಮನಸ್ಸಿಗೆ ಉಪದೇಶ'** ಎಂಬ 12 ಲೇಖನಗಳನ್ನು ಪ್ರಕಟಿಸಿದ್ದರು. ಈ ಎರಡನ್ನೂ ಒಟ್ಟುಗೂಡಿಸಿ ಒಂದು ಗ್ರಂಥರೂಪದಲ್ಲಿ, ಅದೇ ಹೆಸರಿನಲ್ಲಿ, **ಮೊದಲನೆಯ** ಬಾರಿಗೆ ಈಗ ಹೊರತರಲಾಗಿದೆ.

ಇಲ್ಲಿ ಜಿಜ್ಞಾಸುಗಳು ಕೇಳಿರುವ ಪ್ರಶ್ನೆಗಳು ಮತ್ತು ಸ್ವಾಮಿಗಳವರು ನೀಡಿರುವ ಉತ್ತರಗಳು ಭೂತಕಾಲಕ್ಕೆ ಸಂಬಂಧಿಸಿದ್ದರೂ ಅವುಗಳ ಪ್ರಸ್ತುತತೆಗೆ ಎಳ್ಳಷ್ಟೂ ಲೋಪ ಬಂದಿಲ್ಲ. ಅವೇ ಪ್ರಶ್ನೆಗಳು ವರ್ತಮಾನಕಾಲದಲ್ಲಿಯೂ ಜಿಜ್ಞಾಸುಗಳ ಮನಸ್ಸಿನಲ್ಲಿ ಹುಟ್ಟುತ್ತಲೇ ಇರುತ್ತವೆ. ಭವಿಷ್ಯತ್ಕಾಲದಲ್ಲಿಯೂ ಹುಟ್ಟುವ ಸಂಭವವು ಇದ್ದೇ ಇದೆ. ಆದ್ದರಿಂದ ಗುರುಗಳು ಕೊಟ್ಟಿರುವ ಉತ್ತರಗಳು ತ್ರಿಕಾಲಾಬಾಧಿತ ಸತ್ಯಸಂಗತಿಗಳು ಎಂದು ಹೇಳಿದರೆ ಉತ್ಪ್ರೇಕ್ಷೆಯಲ್ಲ.

ಶ್ರೀ ಸಚ್ಚಿದಾನಂದೇಂದ್ರಸರಸ್ವತಿಸ್ವಾಮಿಗಳವರಿಗೆ ಉಪನಿಷತ್ತುಗಳು, ಭಗವದ್ಗೀತೆ, ಬ್ರಹ್ಮಸೂತ್ರಗಳು ಎಂಬ ಪ್ರಸ್ಥಾನತ್ರಯಗಳು ಪ್ರಾಣವಾಗಿದ್ದುವು. ಅವುಗಳಿಗೆ ಶಂಕರರು ಬರೆದ ಭಾಷ್ಯಗಳಂತೂ ಪಂಚಪ್ರಾಣವಾಗಿದ್ದುವು. ಸ್ವಾಮಿಗಳವರು ಇಲ್ಲಿ ನೀಡಿರುವ ಉತ್ತರಗಳನ್ನು 'ಮನಸ್ಸಿಗೆ ಉಪದೇಶ'ವನ್ನು ಅವಲೋಕಿಸುತ್ತಿದ್ದರೆ, ಪ್ರಸ್ಥಾನತ್ರಯಗಳ ಸಾರರೂಪವಾದ ಮಾತುಗಳೇ ಹಲವು ಕಡೆ ತಮ್ಮ ಇಣುಕುನೋಟವನ್ನು ಬೀರಿರುವುದು ಓದುಗರ ಗಮನಕ್ಕೆ ಬಾರದಿರುವುದಿಲ್ಲ. ಸ್ವಾಮಿಗಳವರ ಅಗಾಧವಾದ ಪಾಂಡಿತ್ಯ, ಉತ್ತರಕೊಡುವಲ್ಲಿ ಎಚ್ಚರ, ಚಾತುರ್ಯ, ಜಾಗರೂಕತೆ ಮೊದಲಾದ ಎಲ್ಲವೂ ಪ್ರಶಂಸೆ ಮಾಡಬೇಕಾದ ವಿಚಾರಗಳಾಗಿವೆ. ಸಚ್ಚಿದಾನಂದೇಂದ್ರಸ್ವಾಮಿಗಳವರು ಜಿಜ್ಞಾಸುಗಳನ್ನೆಲ್ಲ ತಮ್ಮ ಕಣ್ಣೆದುರಿಗೇ ಕೂರಿಸಿಕೊಂಡು ಒಬ್ಬೊಬ್ಬರ ಪ್ರಶ್ನೆಗೂ ಉತ್ತರ ಹೇಳುತ್ತಿದ್ದಾರೆ ಎಂಬಂತೆ ಇಲ್ಲಿನ ವಿಚಾರಗಳ ಶೈಲಿಯಲ್ಲಿ ಜೀವಂತಿಕೆ ತುಂಬಿತುಳುಕುತ್ತಿದೆ. **'ಮನಸ್ಸಿಗೆ ಉಪದೇಶ'**ವನ್ನಂತೂ ಕೊನೆಯುಸಿರು ಇರುವವರೆಗೂ ಮೆಲುಕುಹಾಕುತ್ತಲೇ ಇರಬೇಕು ಎನ್ನಿಸುವಂತಿದೆ.

ಈ ಕಾರ್ಯಾಲಯದ ಹಿತೈಷಿಗಳೂ, ಅಧ್ಯಾತ್ಮ ಪ್ರಕಾಶ ಪತ್ರಿಕೆಗೆ ಪ್ರತಿತಿಂಗಳೂ ನೀತಿಬೋಧಕವಾದ ಲೇಖನಗಳನ್ನು ಬರೆಯುತ್ತಿರುವ ಗುರುಭಕ್ತರೂ, ವಾಗ್ಮಿಗಳೂ,

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಈಚೆಗೆ ನಿವೃತ್ತರಾಗಿರುವ ಡಾ|| ಕೆ. ಅನಂತರಾಮುರವರು ಸ್ವಾಮಿಗಳ ಮತ್ತು ಕಾರ್ಯಾಲಯದ ಬಗ್ಗೆ ಬರೆದಿರುವ ಅರ್ಥಪೂರ್ಣವಾದ **'ನುಡಿನಮನ'** ಲೇಖನವು ಪುಸ್ತಕದ ಘನತೆಯನ್ನು ಹೆಚ್ಚಿಸಿದೆ. ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕವಾದ ವಂದನೆಗಳು.

ಶಾಂಕರವೇದಾಂತ ಪ್ರಕ್ರಿಯೆಯ ಅಸಾಧಾರಣ ರೂಪವನ್ನು ತಿಳಿದುಕೊಳ್ಳ ಬೇಕೆನ್ನುವವರಿಗೆ ಸಹಾಯವಾಗಲೆಂದು ಶ್ರೀ ಶ್ರೀಗಳವರೇ ಸಂಪುಟ 17ರಿಂದ 20ರ ವರೆಗೆ (1947-1950) **''ಶಂಕರ ವೇದಾಂತ ನಿಘಂಟು''** ಎಂಬ ಶೀರ್ಷಿಕೆಯಲ್ಲಿ 41 ಲೇಖನಗಳನ್ನು ಅಕಾರಾದಿ ಶಬ್ದಾನುಕ್ರಮಣಿಕೆಯಲ್ಲಿ ಬರೆದು ಪ್ರಕಟಿಸಿದ್ದರು. ಅವುಗಳನ್ನೆಲ್ಲಾ ಒಟ್ಟುಗೂಡಿಸಿ ಗ್ರಂಥರೂಪದಲ್ಲಿ ಇದೇ ಸಂದರ್ಭದಲ್ಲಿ ಹೊರ ತರಲಾಗಿದೆ. ಈ ಎರಡು ಗ್ರಂಥಗಳಿಗೂ ಸೇರಿಸಿ ಉದಾರವಾಗಿ ಧನಸಹಾಯ ಮಾಡಿರುವ ಹೆಸರುಗಳ ವಿವರಗಳನ್ನು ಮುಂದೆ ಕೊಡಲಾಗಿದೆ.

ಕರಡು ಪ್ರತಿಗಳನ್ನು ತಿದ್ದಿ ಮುದ್ರಣಕ್ಕೆ ಸರಿಪಡಿಸಿಕೊಟ್ಟ ವೇ|| ಬ್ರ|| ಶ್ರೀ ಲಕ್ಷ್ಮೀಶಭಟ್ಟರಿಗೂ, ಅಂದವಾಗಿ ಅಕ್ಷರಜೋಡಣೆ ಮತ್ತು ಮುದ್ರಣವನ್ನು ಮಾಡಿಕೊಟ್ಟಿರುವ ಶ್ರೀರಾಮಪ್ರಿಂಟರ್ಸ್ ಮಾಲೀಕರಾದ ಶ್ರೀ ಸತ್ಯನಾರಾಯಣ ರವರಿಗೂ, ಉದಾರವಾಗಿ ಧನಸಹಾಯ ಮಾಡಿದ ಎಲ್ಲಾ ಭಕ್ತವೃಂದದವರಿಗೂ ಕಾರ್ಯಾಲಯವು ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತದೆ.

ಎಂದಿನಂತೆ ಮಹಾಜನರು ಈ ಗ್ರಂಥವನ್ನು ಆದರದಿಂದ ಬರಮಾಡಿಕೊಂಡು, ಅಧ್ಯಯನಮಾಡಿ, ಹೆಚ್ಚಿನ ಪ್ರಯೋಜನವನ್ನು ಪಡೆದುಕೊಳ್ಳಲಿ, ಗ್ರಂಥಪ್ರಕಟನಾ ಕಾರ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಲಿ ಎಂಬುದಾಗಿ ಭಗವಂತನನ್ನು ಪ್ರಾರ್ಥಿಸುತ್ತೇವೆ.

ಜಯನಾಮ ಸಂವತ್ಸರದ
ಆಷಾಢ ಬಹುಳ ತ್ರಯೋದಶಿ
ಗುರುವಾರ : ತಾ|| **24-7-2014**

**ಪ್ರಕಾಶಕರು**

# ನುಡಿನಮನ

ಹಾಸನಜಿಲ್ಲೆಯ ಹೊಳೆನರಸೀಪುರದ 'ಅಧ್ಯಾತ್ಮಪ್ರಕಾಶ ಕಾರ್ಯಾಲಯ'ದ ಸಂಸ್ಥಾಪಕರೂ ಶಂಕರವೇದಾಂತ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅಪೂರ್ವವಾದ ಗ್ರಂಥಗಳನ್ನು ರಚಿಸಿ ನೀಡಿದವರೂ ಆದ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳ ''ಹೊಸ ಜಿಜ್ಞಾಸುಗಳ ಪ್ರಶ್ನೆಗಳಿಗೆ ಉತ್ತರಗಳು ಮತ್ತು ಮನಸ್ಸಿಗೆ ಉಪದೇಶ'' ಎಂಬೀ ಗ್ರಂಥಕ್ಕೆ ''ನುಡಿನಮನ''ವೊಂದನ್ನು ಬರೆಯುವದು ನನಗೆ ಪರಮಾನಂದವನ್ನುಂಟುಮಾಡಿದೆ.

ಶ್ರೀ ಸಚ್ಚಿದಾನಂದೇಂದ್ರ ಗುರುಗಳೇ ಪ್ರಾರಂಭಿಸಿದ ''ಅಧ್ಯಾತ್ಮಪ್ರಕಾಶ'' ವೆಂಬ ಮಾಸಪತ್ರಿಕೆಗೆ ಸತ್ಯವನ್ನರಿಯಬೇಕೆಂದು ಬಯಸಿದ ಸಜ್ಜನರು, ಆಗಾಗ ಕೆಲವು ಪ್ರಶ್ನೆಗಳನ್ನು ಬರೆದು ಕಳುಹಿಸುತ್ತಿದ್ದರು. ಆ ಪ್ರಶ್ನೆಗಳನ್ನು ಕ್ರೋಡೀಕರಿಸಿಕೊಂಡು, ಉತ್ತರಗಳನ್ನು ಬರೆದು ಮುಂದುಮುಂದಿನ ಸಂಚಿಕೆಗಳಲ್ಲಿ ಸದ್ಗುರುಗಳೇ ಪ್ರಕಟಿಸುತ್ತಿದ್ದರು. ಈ ಪ್ರಶ್ನೋತ್ತರಮಾಲಿಕೆ 1950ರಿಂದ 1956ರವರೆಗೆ ಸಾಗಿಬಂದಿರು ವಷ್ಟನ್ನು ಆ ಸಂಚಿಕೆಗಳಿಂದ ಎತ್ತಿಕೊಂಡು ಇಲ್ಲಿ ಗ್ರಂಥರೂಪವನ್ನು ಕೊಡಲಾಗಿದೆ. ಅದರ ಜೊತೆಗೆ ಸದ್ಗುರುಗಳು ಆ ಪತ್ರಿಕೆಯಲ್ಲಿಯೇ ''ಮನಸ್ಸಿಗೆ ಉಪದೇಶ'' ಎಂಬ ಶೀರ್ಷಿಕೆಯಲ್ಲಿ ಬರೆದಿದ್ದ ಹಿತೋಪದೇಶವನ್ನು ಕೂಡ ಈ ಗ್ರಂಥದ ದ್ವಿತೀಯ ಭಾಗವೆಂಬಂತೆ ಜೋಡಿಸಲಾಗಿದೆ. ಈ ಕೃತಿಯ ಎರಡೂ ಭಾಗಗಳು ಪರಸ್ಪರ ಪೂರಕವಾಗಿದ್ದು, ತತ್ತ್ವಜಿಜ್ಞಾಸುಗಳಿಗೆ ತೃಪ್ತಿಯನ್ನುಂಟು ಮಾಡುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ.

''ಸದ್ವಿಚಾರಗಳನ್ನು ಅರಿಯಬೇಕೆಂದು ತವಕಿಸುವವನು ಯಾರೋ ಅವನೇ ಜಿಜ್ಞಾಸು'' ಎಂಬುದು 'ಜಿಜ್ಞಾಸು' ಪದಕ್ಕಿರುವ ನಿಷ್ಪತ್ತಿ. ಇಲ್ಲಿ ಜಿಜ್ಞಾಸುಗಳು ಕೇಳಿರುವ ಪ್ರಶ್ನೆಗಳು ಅತ್ಯಂತ ವೈವಿಧ್ಯಪೂರ್ಣವಾಗಿವೆ. ದೇವರು ಇದ್ದಾನೆಂದಮೇಲೆ ಅವನೇಕೆ ಕಣ್ಣಿಗೆ ಕಾಣುವುದಿಲ್ಲ; ದೇವರನ್ನು ಪ್ರತ್ಯಕ್ಷವಾಗಿ ಕಂಡವರು ಯಾರಾದರೂ ಇದ್ದಾರೆಯೆ; ಕಾಣದಿರುವ ದೇವರನ್ನು ನಂಬಿ ನಮಗೇನಾಗಬೇಕು; ಅವನಿಲ್ಲದೆ ನಮ್ಮ ದಿನನಿತ್ಯದ ವ್ಯವಹಾರಗಳು ನಡೆಯುವುದಿಲ್ಲವೆ; ದೇವರ ಧ್ಯಾನಕ್ಕೆ ಬಿಡುವೆಂಬುದೇ ಇಲ್ಲದವರು ಏನು ಮಾಡಬೇಕು- ಎಂಬಂತೆ ಕೇಳಿರುವ ಪ್ರಶ್ನೆಗಳಿಗೆ ಸಚ್ಚಿದಾನಂದೇಂದ್ರ ಗುರುಗಳು ಅತ್ಯಂತ ಚುರುಕಾದ, ಬೋಧಪ್ರದವಾದ, ಸಾರಪೂರ್ಣವಾದ, ಸಂಕ್ಷಿಪ್ತವಾದ ಉತ್ತರಗಳನ್ನು ಕೊಟ್ಟಿದ್ದಾರೆ. ಗುರುಗಳು ಸ್ಥಿತಪ್ರಜ್ಞರಾಗಿ, ಸಮಾಹಿತಚಿತ್ತ ರಾಗಿ ನೀಡಿರುವ ಉತ್ತರಗಳನ್ನು ಓದುತ್ತಿದ್ದರೆ ''ಈ ಪ್ರಶ್ನೆಗೆ ಸ್ವಾಮಿಗಳು ಕೊಟ್ಟಿರುವ ಉತ್ತರ ತುಂಬಾ ಸಮಂಜಸವಾಗಿದೆ'' ಎನ್ನಿಸದೆ ಇರುವುದಿಲ್ಲ.

ಪ್ರಶ್ನೆಗಳನ್ನು ಕೇಳಿರುವ ಜಿಜ್ಞಾಸುಗಳ ಗುಂಪಿನಲ್ಲಿ ಬ್ರಹ್ಮಚಾರಿಗಳು,

ವಿದ್ಯಾರ್ಥಿಗಳು, ಕೌಟುಂಬಿಕ ಕಲಹಗಳಲ್ಲಿ ನಲುಗುತ್ತಿರುವ ಗೃಹಸ್ಥರು, ಗೃಹಿಣಿಯರು, ವಿಧವೆಯರು, ರೋಗಬಾಧೆಯಿಂದ ಸಂಕಟಪಡುತ್ತಿರುವವರು, ದರ್ಜಿ- ಅಕ್ಕಸಾಲಿಗ- ನಾಟಕ ಕಲಾವಿದ- ಸರ್ಕಾರಿ ನೌಕರ ಮುಂತಾದವರು, ತುಂಬ ವಯಸ್ಸಾದರೂ ಮದುವೆಯಾಗದೆ ಉಳಿದುಹೋದವರು, ಕಠಿಣವಾದ ಬಡತನದಲ್ಲಿ ನರಳುತ್ತಿರುವವರು, ಸಾಧನೆ ಮಾಡಬೇಕೆಂಬ ಹಂಬಲವುಳ್ಳವರು, ಆಸ್ತಿಕರು, ನಾಸ್ತಿಕರು, 'ಏನು ಉತ್ತರ ಹೇಳುತ್ತಾರೋ ನೋಡೋಣ' ಎಂದು ಕೇವಲ ಕುತೂಹಲವನ್ನೇ ಮುಂದುಮಾಡಿಕೊಂಡವರು- ಮುಂತಾದ ಎಲ್ಲರೂ ಇದ್ದಾರೆ. ಗುರುಗಳಾದರೋ ಒಬ್ಬ ಮನೋವಿಜ್ಞಾನಿಯಂತೆ ಕೆಲಸ ಮಾಡುತ್ತ , ಅವರವರ ಮನೋಧರ್ಮಕ್ಕೊಪ್ಪುವ ಸದುತ್ತರಗಳನ್ನೇ ನೀಡಿದ್ದಾರೆ.

ಕೆಲವು ಪ್ರಶ್ನೆಗಳಂತೂ ವಿಚಿತ್ರವೆನಿಸುತ್ತವೆ. ದೇವಸ್ಥಾನಕ್ಕೆ ಹೋಗಿ ನರಸಿಂಹ ಸ್ವಾಮಿಯ ದರ್ಶನ ಮಾಡಿದರೆ ಸ್ವಲ್ಪಮಟ್ಟಿಗೆ ಶಾಂತಿ ದೊರೆಯುತ್ತದೆ; ಆದರೆ ಮನೆಯಲ್ಲಿ ದೇವರಪೂಜೆ ಮಾಡಿದಾಗಲೆಲ್ಲ ಆರೋಗ್ಯ ಕೆಡುತ್ತದಲ್ಲ ಏಕೆ? ನಾನು ಮುಂಗೋಪಿ, ಅದಕ್ಕೇನು ಮಾಡಲಿ; ಅಧ್ಯಾತ್ಮ ವಿಚಾರದಲ್ಲಿ ಅಭಿರುಚಿ ಹುಟ್ಟಲು ಏನು ಮಾಡಬೇಕು; ಪುರಾಣ ಕೇಳಲು ಹೋಗುತ್ತಿದ್ದೇನೆ, ಆದರೆ ಅದರಿಂದ ನನ್ನ ನಡೆವಳಿಕೆಯ ಮೇಲೆ ಯಾವುದೇ ಪರಿಣಾಮವಾಗಿಲ್ಲವಲ್ಲ, ಏನು ಮಾಡುವುದು; ದೇವರು ಎಲ್ಲೆಲ್ಲಿಯೂ ಇರುವಾಗ ದೇವಸ್ಥಾನಕ್ಕೆ ಏಕೆ ಹೋಗಬೇಕು, ಮನೆಯಲ್ಲಿಯೇ ಪ್ರಾರ್ಥಿಸಿದರಾಗದೆ; ಮನೆಯಲ್ಲಿ ಅಂತಃಕಲಹಗಳು ಹೆಚ್ಚಾಗಿ ಬಿಟ್ಟಿವೆ, ಅದಕ್ಕೇನು ಪರಿಹಾರ- ಎಂಬಂತೆ ವಿಚಿತ್ರ ಪ್ರಶ್ನೆಗಳ ಸುರಿಮಳೆಯೇ ಇಲ್ಲಿದೆ. ಗುರುಗಳು ಮಾತ್ರ ಸ್ವಲ್ಪವೂ ಬೇಸರಿಸದೆ, ತಾಳ್ಮೆಗೆಡದೆ, ಸಂದರ್ಭೋಚಿತವಾದ ಉತ್ತರಗಳನ್ನು ಕೊಟ್ಟು ಜಿಜ್ಞಾಸುಗಳನ್ನು ತೃಪ್ತಿಪಡಿಸಿದ್ದಾರೆ.

ನಾನು ತತ್ತ್ವವಿಚಾರಕ್ಕೆ ಮನಸ್ಸು ಕೊಟ್ಟಂದಿನಿಂದ ನನ್ನ ಬಂಧುಗಳು ಒಬ್ಬೊಬ್ಬರಾಗಿ ನನ್ನಿಂದ ದೂರ ಹೋಗುತ್ತಿದ್ದಾರಲ್ಲಾ ಏನು ಮಾಡುವುದು; ನಾನು ಕನಸಿನಲ್ಲಿ ಒಬ್ಬ ಸಾಧುಗಳನ್ನು ಕಂಡೆ, ಅದು ಶುಭಸೂಚನೆಯೆ; ಭಿಕ್ಷುಕರಕಾಟವು ಅತಿಯಾಗಿಬಿಟ್ಟಿದೆ, ಏನು ಮಾಡುವುದು; ಸಿನೆಮಾನೋಡುವುದು ಸರಿಯೋ ತಪ್ಪೋ; ಚಹಾಪಾನ, ಧೂಮಪಾನ, ಕೆಟ್ಟಮಾತಾಡುವುದು ಮುಂತಾದುವುಗಳಿಂದ ಪಾರಾಗುವುದು ಹೇಗೆ; ನಮ್ಮೂರಿನ ಕೆಲವರು ನಿತ್ಯ ದೇವರಪೂಜೆ ಮಾಡುತ್ತಾರಾದರೂ ಜಗಳಗಂಟಿಗಳಾಗಿದ್ದಾರಲ್ಲಾ ಏನು ಮಾಡುವುದು- ಎಂಬಂತೆ ಕಗ್ಗಂಟಾದ ಪ್ರಶ್ನೆಗಳೂ ಇವೆ. ಗುರುಗಳು ಮಾತ್ರ ತಮ್ಮ ಯುಕ್ತಿಯುಕ್ತವಾದ ಉತ್ತರಗಳಿಂದ ಎಲ್ಲರ ಮನಸ್ಸಿನ ಗಂಟುಗಳನ್ನೂ ಬಿಚ್ಚಿ ಎಸೆದಿದ್ದಾರೆ.

ಜನ್ಮಾಂತರವುಂಟೇ; ಗುರುಪೂರ್ಣಿಮಿಯಂದು ಗುರುಗಳಿಗೆ ಏನನ್ನು ಅರ್ಪಿಸಬೇಕು; ಹೆಣ್ಣುಮಕ್ಕಳಿಗೂ ಅಧ್ಯಾತ್ಮ ಸಾಧನೆ ಸುಲಭಸಾಧ್ಯವೆ; ಸತ್ಸಂಗದಿಂದ ಆಗುವ

ಮುಖ್ಯವಾದ ಲಾಭ ಯಾವುದು, ತಪಸ್ಸು ಎದರೇನು? ಶಿವನೇ ಧ್ಯಾನಸ್ಥನಾಗಿ ಕುಳಿತು ಯಾರನ್ನು ಧ್ಯಾನಿಸುತ್ತಾನೆ; ಒಂದು ದೇಹದಿಂದ ಹೊರಬರುವುದಕ್ಕೆ ಆತ್ಮನಿಗೆ ಅಷ್ಟು ಕಷ್ಟವಾಗುವುದೇತಕ್ಕೆ; ವೇದೋಕ್ತ ಕರ್ಮಗಳನ್ನು ಮಾಡದ ಬ್ರಾಹ್ಮಣರು, ಭಗವನ್ನಾಮ ಸಂಕೀರ್ತನೆ ಮಾಡಿದರೆ ಸಾಕೆ- ಎಂಬಂತೆ ಮೂಡಿಬಂದಿರುವ ಪ್ರಶ್ನೆಗಳಂತೂ - ಯಾರಿಗಾದರೂ ಸರಿಯೆ- ಉತ್ತರ ತಿಳಿಯಲು ಅತ್ಯಂತ ಯೋಗ್ಯವಾಗಿವೆ. ಗುರುಗಳು ಕೊಟ್ಟಿರುವ ಉತ್ತರಗಳ ವೈಭವವನ್ನು ಓದಿಯೇ ಆನಂದಿಸಬೇಕು.

ಒಂದೆರಡು ಸ್ವಾರಸ್ಯಕರ ಪ್ರಶ್ನೋತ್ತರಗಳನ್ನು ಜೋಡಿಸಿಕೊಂಡು ಮೆಲುಕು ಹಾಕಬಹುದು: **ಪ್ರಶ್ನೆ:** ನಾನಿರುವ ನಗರದಲ್ಲಿ ದಿನದಿನವೂ ಅಧ್ಯಾತ್ಮವಿಚಾರದ ಉಪನ್ಯಾಸಗಳು ಆಗುತ್ತಲೇ ಇರುತ್ತವೆ. ಆದರೆ ಒಬ್ಬೊಬ್ಬರು ಒಂದೊಂದು ಬಗೆಯಲ್ಲಿ ತತ್ತ್ವವನ್ನು ತಿಳಿಸುತ್ತಾರೆ. ನಾನು ಯಾವವನ್ನು ಇವುಗಳಲ್ಲಿ ಆರಿಸಿಕೊಳ್ಳಲಿ! **ಉತ್ತರ:** ಕೆಲವು ದಿನ ಇಂಥ ಉಪನ್ಯಾಸಗಳನ್ನು ಕೇಳುವದರಿಂದ ಕುತೂಹಲ ನಿವೃತ್ತಿ ಯಾಗಬಹುದು. ಆದರೆ ನಮ್ಮ ಸಾಧನಕ್ಕೆ ಸದ್ಗುರುವಾದವರೊಬ್ಬರ ಸದುಪದೇಶವು ಬೇಕು. ಹೊಸದಾಗಿ ಗರಡಿಯ ಸಾಧನೆ ಮಾಡುವವರಿಗೆ ಜಟ್ಟಿಗಳ ಕಾಳಗವನ್ನು ನೋಡಿದ ಮಾತ್ರದಿಂದ ಯಾವ ಪ್ರಯೋಜನವಾದೀತು. **ಪ್ರಶ್ನೆ:** ತಿರುಕರ ಕಾಟವು ಹೆಚ್ಚಾಗಿರುವಾಗ ಹೇಗೆ ವರ್ತಿಸಬೇಕು? ಅವರಿಗೆ ಏನಾದರೂ ಕೊಟ್ಟರೆ ಕಾಟವು ಹೆಚ್ಚಾಗುತ್ತದೆ; ಕೊಡದೆ ಇದ್ದರೆ ಮನಸ್ಸು ಕಠಿಣವಾಗಿ ಅಧ್ಯಾತ್ಮ ಸಾಧನಕ್ಕೆ ಅಡ್ಡಿಯಾಗುತ್ತದೆ! **ಉತ್ತರ:** ಕೈಯಲ್ಲಿದ್ದ ಅಲ್ಪಸ್ವಲ್ಪವನ್ನು ಅವಶ್ಯವಾಗಿ ಕೊಡುವುದೇ ಒಳ್ಳೆಯದು. ಈಶ್ವರನ ಅನುಗ್ರಹವನ್ನು ನೆನಪಿಗೆ ತಂದುಕೊಂಡಂತಾಗುತ್ತದೆ. ಕೊಡುವುದಕ್ಕೆ ಏನೂ ಇಲ್ಲದಿದ್ದರೆ ಅಥವಾ ಅವಕಾಶವಿಲ್ಲದಿದ್ದರೆ, ಮೃದುವಾದ ಮಾತುಗಳನ್ನಾದರೂ ಆಡಬೇಕು. ಭಗವಂತನನ್ನು ಅವಶ್ಯವಾಗಿ ಆಗ ಸ್ಮರಿಸಿ ಕೊಳ್ಳಬೇಕು. **ಪ್ರಶ್ನೆ:** ಪರಮಾತ್ಮನು ಎಲ್ಲರ ಹೃದಯದಲ್ಲೂ ಇರುತ್ತಾನಂತೆ, ಆದರೂ ಒಬ್ಬೊಬ್ಬರ ಸ್ವಭಾವ ಒಂದೊಂದು ರೀತಿಯಾಗಿದೆಯಲ್ಲ! **ಉತ್ತರ:** ಎಲ್ಲೆಲ್ಲಿಯೂ ವಿದ್ಯುಚ್ಛಕ್ತಿಯಿದ್ದರೂ ಅದನ್ನು ಕ್ರಮವರಿತು ಉಪಯೋಗಿಸಿಕೊಂಡವರಿಗೇ ಅದರಿಂದಾಗುವ ಪ್ರಯೋಜನವು ದೊರೆಯುವುದು. ಈಶ್ವರನ ಸಂನ್ನಿಧಿಯ ಫಲವೂ ಹೀಗೆಯೇ. **ಪ್ರಶ್ನೆ:** ದಶಾವತಾರಗಳಲ್ಲಿ ವರಾಹಾವತಾರವೂ ಒಂದು. ಹೀಗಿರುವಲ್ಲಿ ಹಂದಿಯು ಅಶುಚಿಯಾದ ಪದಾರ್ಥವನ್ನು ಭಕ್ಷಿಸುತ್ತಿರುವುದೇಕೆ? **ಉತ್ತರ:** ಜೀವನು ನಿಜವಾಗಿ ಪರಮಾತ್ಮನಿಂದ ಸ್ವಲ್ಪವೂ ಭಿನ್ನವಲ್ಲದಿದ್ದರೂ ಅನಿತ್ಯವಾದ, ಅಶುಚಿಯಾದ, ಅಚೇತನ ವಸ್ತುಗಳಲ್ಲಿಯೇ ಮನಸ್ಸಿಟ್ಟಿರುವನೆಂಬುದಕ್ಕೆ ಇದೊಂದು ಒಳ್ಳೆಯ ನಿದರ್ಶನ.

ಹೀಗೆ ಈ ಪ್ರಶ್ನೋತ್ತರಗಳೆಲ್ಲ ಉಪಾದೇಯವೂ ಮನಮೋಹಕವೂ ಮನೋರಂಜಕವೂ ಆಗಿವೆ. ಈ ಪ್ರಶ್ನೋತ್ತರಗಳೆಲ್ಲ ನಡೆದು ಒಂದು ಸಂವತ್ಸರಚಕ್ರವೇ ಉರುಳಿ ಹೋಗಿದೆ. ಆದರೂ ಆ ಪ್ರಶ್ನೆಗಳೆಲ್ಲ ಹೊಚ್ಚ ಹೊಸತಾಗಿಯೇ ಇವೆ. ಏಕೆಂದರೆ

ಅಂದು ಜಿಜ್ಞಾಸುಗಳ ಅಂತರಂಗದಲ್ಲಿ ಹುಟ್ಟಿಕೊಂಡಿದ್ದ ಪ್ರಶ್ನೆಗಳು ಇಂದಿಗೂ ಹುಟ್ಟಿಕೊಳ್ಳುತ್ತಲೇ ಇರುತ್ತವೆ. ಹೀಗಾಗಿ ಇಲ್ಲಿನ ಪ್ರಶ್ನೋತ್ತರಗಳು ಸಮಕಾಲೀನ ಜಿಜ್ಞಾಸುಗಳನ್ನು ಕೂಡ ತೃಪ್ತಿಪಡಿಸುವಂತಿವೆ. ಇಲ್ಲಿನ ವಿಚಾರಗಳೆಲ್ಲ ಮನುಷ್ಯನ ತುದಿ ಮೊದಲಿಲ್ಲದ ಸುಖದುಃಖಗಳಿಗೆ ಸಂಬಂಧಿಸಿದಂತಿವೆ; ಅವನ ನೋವು ನಲಿವುಗಳಿಗೆ ಸಂಬಂಧಿಸಿದಂತಿವೆ, ಅವನ ದುಗುಡದುಮ್ಮಾನಗಳಿಗೆ ಸಂಬಂಧಿಸಿದಂತಿವೆ; ಅವನ ಮನಸ್ಸಿನ ದ್ವಂದ್ವಗಳಿಗೆ ಸಂಬಂಧಿಸಿದಂತಿವೆ; ಅವನ ಮನಸ್ಸಿನ ಚಂಚಲತೆಗೆ ಸಂಬಂಧಿಸಿದಂತಿವೆ; ಅವನ ಅರಿಷಡ್ವರ್ಗಗಳ ಉಲ್ಬಣಕ್ಕೆ ಸಂಬಂಧಿಸಿದಂತಿವೆ. ಆ ಕಾರಣದಿಂದಾಗಿ ಇಲ್ಲಿನ ಪ್ರಶ್ನೆಗಳಾಗಲಿ, ಉತ್ತರಗಳಾಗಲಿ ಗತಕಾಲದ್ದೆನಿಸುವ ಸಂಭವವೇ ಇಲ್ಲ. ಇನ್ನೊಂದು ಸಂವತ್ಸರಚಕ್ರ ಉರುಳಿಹೋದರೂ ಈ ಗ್ರಂಥದ ಪ್ರಸ್ತುತತೆಗೆ, ಉಪಯುಕ್ತತೆಗೆ ಕೊರತೆಯುಂಟಾಗುವುದಿಲ್ಲ.

ತಾವು ಏನನ್ನೂ ಆಚರಣೆಗೆ ತಂದುಕೊಳ್ಳದೆ ಇತರರನ್ನು ಕುರಿತು ''ಹಾಗೆ ಮಾಡಿ, ಹೀಗೆ ಮಾಡಿ, ಹಾಗೆ ನಿಂತುಕೊಳ್ಳಿ, ಹೀಗೆ ಕುಳಿತುಕೊಳ್ಳಿ'' ಎಂದು ಮಾಡುವ ಉಪದೇಶಕ್ಕೆ ''ಪರೋಪದೇಶಪಾಂಡಿತ್ಯ'' ಎಂದು ಹೆಸರು. ಭಕ್ತಿಭಂಡಾರಿ ಬಸವಣ್ಣನವರು ತಮ್ಮ ವಚನದಲ್ಲಿ ''ನಿಮ್ಮ ದೋಷಗಳನ್ನು ಮೊದಲು ಸರಿಪಡಿಸಿಕೊಳ್ಳಿ, ಆಮೇಲೆ ಲೋಕಕ್ಕೆ ಉಪದೇಶ ಮಾಡುತ್ತೀರಂತೆ'' ಎಂದು ಸೂಚಿಸಿದ್ದಾರೆ :

ಲೋಕದ ಡೊಂಕ ನೀವೇಕೆ ತಿದ್ದುವಿರಿ
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ನಮ್ಮ ಕೂಡಲಸಂಗಮದೇವ ॥

ಪಾಶ್ಚಾತ್ಯ ಚಿಂತಕನೊಬ್ಬನು ''ನಿನ್ನನ್ನು ನೀನು ತಿದ್ದಿಕೊಳ್ಳಪ್ಪಾ, ತನ್ಮೂಲಕ ಲೋಕದಲ್ಲಿ ಒಬ್ಬ ಮೂರ್ಖನು ಕಡಿಮೆಯಾದ ಎಂದು ತಿಳಿದುಕೊಳ್ಳಪ್ಪ'' ಎಂಬ ಅರ್ಥ ಬರುವ ಮಾತುಗಳನ್ನಾಡಿದ್ದಾನೆ. ಈ ಹಿನ್ನೆಲೆಯಲ್ಲಿ ಆತ್ಮಾವಲೋಕನ ಮಾಡಿ ಕೊಳ್ಳುತ್ತ ನಮ್ಮ ದೋಷಗಳನ್ನು ನಾವು ಸರಿಪಡಿಸಿಕೊಳ್ಳುವುದು ಮೇಲು ಎಂಬ ಆಶಯದಿಂದ **''ಮನಸ್ಸಿಗೆ ಉಪದೇಶ''**ವನ್ನು ಸದ್ಗುರುಗಳು ರಚಿಸಿದ್ದಾರೆ. ಶಾಂತಿಮಯವಾದ ಜೀವನವನ್ನು ನಡೆಸಬೇಕೆಂದು ಇಚ್ಛಿಸುವವರಿಗಾಗಲಿ, ವೇದಾಂತಶ್ರವಣಕ್ಕೆ ಯೋಗ್ಯರಾಗಿ, ಸಾಧನೆಯಲ್ಲಿ ತೊಡಗಬೇಕೆಂದು ಬಯಸುವವರಿಗಾಗಲಿ ಈ ''ಮನಸ್ಸಿಗೆ ಉಪದೇಶ''ದ ಮಾತುಗಳು ಅತ್ಯಮೂಲ್ಯವಾಗಿವೆ. ''ಜೀವನವು ಪರಿಪೂರ್ಣವಾಗಬೇಕಾದರೆ ನಮ್ಮ ಶರೀರ, ಇಂದ್ರಿಯಗಳು, ಮನಸ್ಸು, ಬುದ್ಧಿ- ಎಲ್ಲವನ್ನೂ ಸರಿಯಾಗಿ ಉಪಯೋಗಿಸುವುದು ಅವಶ್ಯ . ಇದರಂತೆ ನಮ್ಮ ಜೀವನದ ಅಧ್ಯಾತ್ಮಭಾಗವೂ ಸಫಲವಾಗಬೇಕು''ಎಂಬ

ಮಾತು ''ಈಶ್ವರನಿದ್ದಾನೆಂದು ನಂಬದಿದ್ದರೆ ಏನು ಹಾನಿ'' ಎಂಬ ಪ್ರಶ್ನೆಗೆ ಉತ್ತರವಾಗಿ ಈ ಕೃತಿಯ ಆರಂಭದಲ್ಲಿಯೇ ಬಂದಿದೆ. ಅಧ್ಯಾತ್ಮ ಸಾಧಕರು ನಿತ್ಯಾನಿತ್ಯವಸ್ತುವಿವೇಕ; ಇಹಾಮುತ್ರಾರ್ಥಫಲಭೋಗ ವಿರಾಗ; ಶಮ, ದಮ, ಉಪರತಿ, ತಿತಿಕ್ಷಾ, ಶ್ರದ್ಧಾ, ಸಮಾಧಾನವೆಂಬ ಷಟ್ಕಸಂಪತ್ತಿ , ಮುಮುಕ್ಷುತ್ವ- ಎಂಬೀ ಸಾಧನಚತುಷ್ಟಯಸಂಪತ್ತನ್ನು ತಮ್ಮದಾಗಿಸಿಕೊಳ್ಳಬೇಕು. ಹಾಗೆ ಮಾಡಬಯಸುವವರಿಗೆ ಬೇಕಾದ ಎಲ್ಲ ಹೂರಣವೂ ಇಲ್ಲಿದೆ.

ಮತ್ತೊಬ್ಬರ ಗೊಡವೆಯನ್ನು ಬಿಡಬೇಕು; ಇಂದ್ರಿಯಗಳ ದಾಸ್ಯದಿಂದ ಪಾರಾಗಬೇಕು; ಅಲ್ಪವೇ ಅಳಿವು, ಅನಂತವೇ ಅಮೃತ ಎಂಬುದನ್ನು ಮರೆಯಬಾರದು; ನಾನು, ನನ್ನನ್ನು, ನನ್ನಿಂದ, ನನಗೆ, ನನ್ನ, ನನ್ನಲ್ಲಿ ಎಂಬ ಸರ್ವನಾಮ ಮೋಹವನ್ನು ತೊಲಗಿಸಬೇಕು; ತನಿನಿದ್ರೆಯಲ್ಲಿ ಹಿಂದಿಲ್ಲ ಮುಂದಿಲ್ಲ ಎಂಬುದನ್ನು ಚಿಂತಿಸಬೇಕು; ವಿರಕ್ತನಾಗಿ ಪರತತ್ತ್ವಚಿಂತನೆಗೆ ತನುಮನೋಧನಗಳನ್ನು ಒಪ್ಪಿಸಬೇಕು; ಪರಮಾತ್ಮನನ್ನು ಕಂಡುಕೊಳ್ಳದೆ ಇರುವವರೆಗೆ ಕಾಮಗಳು ಹೊರಗೆ ಕಾಣಿಸುತ್ತಲೇ ಇರುತ್ತವೆ; ಈ ಕಲ್ಪಿತ ಶರೀರಕ್ಕಾಗಿ ವ್ಯರ್ಥವಾಗಿ ದುಡಿಯುವುದು ಸಲ್ಲದು; ಆನಂದದ ಬುಗ್ಗೆಯಾದ ಪರಮಾತ್ಮನ ಕಡೆಗೆ ತಿರುಗಿದರೆ ನಾವೇ ಆ ಆನಂದಮೂರ್ತಿಯಾಗಿ ಬಿಡುತ್ತೇವೆ- ಎಂಬಂತೆ ಇಲ್ಲಿ ಅಮೂಲ್ಯವಾದ ಉಪದೇಶಗಳ ಮುತ್ತುರತ್ನಗಳೇ ಚೆಲ್ಲಿಕೊಂಡಿವೆ. ಇದೊಂದು ತತ್ತ್ವೋಪದೇಶದ ತವನಿಧಿಯಾಗಿದೆ.

'ಅಧ್ಯಾತ್ಮಪ್ರಕಾಶ' ಪತ್ರಿಕೆಯ ಸಂಚಿಕೆಗಳಲ್ಲಿಯೇ ಉಳಿದುಕೊಂಡು, ಕಾಲಗರ್ಭವನ್ನು ಸೇರಿಹೋಗಬಹುದಾಗಿದ್ದ ಈ ಅಮೂಲ್ಯವಾದ ಪ್ರಶ್ನೋತ್ತರ ರತ್ನಮಾಲಿಕೆಯನ್ನೂ ''ಮನಸ್ಸಿಗೆ ಉಪದೇಶ''ವನ್ನು ಕಾರ್ಯಾಲಯದ ಟ್ರಸ್ಟ್ ಕಮಿಟಿಯವರು ಹುಡುಕಾಡಿ, ಮೇಲಕ್ಕೆ ತಂದು, ಗ್ರಂಥರೂಪದಲ್ಲಿ ಲೋಕಾರ್ಪಣೆ ಮಾಡಿದ್ದಾರೆ. ಅವರು ಮಾಡಿರುವ ಈ ಸತ್ಕಾರ್ಯ ಕೊಂಡಾಟಕ್ಕೆ ಯೋಗ್ಯವಾಗಿದೆ. ಅವರೆಲ್ಲರಿಗೂ ನಾನು ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ವೇದಾಂತ ಜಿಜ್ಞಾಸುಗಳಾದ ಸದ್ಭಕ್ತರು ಪ್ರಶ್ನೋತ್ತರ ಗಳನ್ನು ಪಾರಾಯಣಮಾಡುತ್ತ , ಮನಸ್ಸಿಗೆ ಉಪದೇಶ ಕೊಟ್ಟುಕೊಳ್ಳುತ್ತ , ಕಾರ್ಯಾಲಯ ದವರ ಶ್ರಮವು ಸಾರ್ಥಕವಾಗುವಂತೆ ಮಾಡುತ್ತಾರೆಂದು ನಾನು ನಂಬಿದ್ದೇನೆ. ಸದ್ಗುರು ಸಚ್ಚಿದಾನಂದೇಂದ್ರರ ಆಶೀರ್ವಾದ ಗಳನ್ನು ಬೇಡುತ್ತಾ ಈ ನುಡಿಗಳನ್ನು ಅವರ ಚರಣ ಕಮಲಗಳಲ್ಲಿ ಸಮರ್ಪಿಸಿ ವಿರಮಿಸುತ್ತೇನೆ.

ಮೈಸೂರು -ವಿಶ್ವವಿದ್ಯಾಲಯ
ಮೈಸೂರು, 25-6-2014

**ಕೆ. ಅನಂತರಾಮು**
ನಿವೃತ್ತ ಕನ್ನಡ ಪ್ರಾಧ್ಯಾಪಕರು

## 'ಹೊಸಜಿಜ್ಞಾಸುಗಳ ಪ್ರಶ್ನೆಗಳಿಗೆ ಉತ್ತರಗಳು' ಮತ್ತು 'ಮನಸ್ಸಿಗೆ ಉಪದೇಶ' ಹಾಗೂ 'ಶಾಂಕರವೇದಾಂತ ನಿಘಂಟು' ಎಂಬ ಎರಡು ಗ್ರಂಥಗಳಿಗೂ ಉದಾರವಾಗಿ ಸಹಾಯ ಮಾಡಿರುವ ದಾನಿಗಳ ವಿವರ

### ರೂ. 5,000 ಮತ್ತು ಮೇಲ್ಪಟ್ಟು

1. ಪೂಜ್ಯ ನಿಜಾನಂದ ಭಾರತೀ ಸ್ವಾಮಿಗಳು, ಹರಿದ್ವಾರ; 2. ಶ್ರೀಮತಿ ವನಮಾಲಾ ಜೋಷಿ, ಬೆಂ.; 3. ಅಂತರಂಗ ಭಕ್ತರು, ಬೆಂ.; 4. ಶ್ರೀಮತಿ ಯಶೋದಮ್ಮ ನಾರಾಯಣರಾವ್, ಬೆಂ.

### ರೂ. 1,000 ಮತ್ತು ಮೇಲ್ಪಟ್ಟು

1. ಶ್ರೀಮತಿ ಆರ್. ಮೃದುಲ, ಬೆಂ.; 2. ಶ್ರೀಮತಿ ಜೆ. ವಿ. ನಾಗರತ್ನಮ್ಮ, ತಿಪಟೂರು; 3. ಶ್ರೀಮತಿ ನಾರಾಯಣಮ್ಮ, ಬೆಂ.; 4. ಶ್ರೀ ಹೆಚ್. ಪಿ. ಕುಂಟೋಜಿ, ಬೆಂ.; 5. ಶ್ರೀ ಟಿ. ಆರ್. ಚಂದ್ರಶೇಖರ್, ಬೆಂ.; 6. ಶ್ರೀ ಬಿ. ಕೆ. ಶ್ರೀಕಂಠಯ್ಯ, ಬೆಂ.; 7. ಶ್ರೀ ಕೆ. ಸಿ. ಸುಬ್ರಹ್ಮಣ್ಯ, ಬೆಂ.; 8. ಶ್ರೀ ವಿರೂಪಾಕ್ಷ, ಬೆಂ.; 9. ಶ್ರೀಮತಿ ವಿಜಯಮೂರ್ತಿ, ಬೆಂ; 10. ಶ್ರೀ ಕೆ. ರಾಮಚಂದ್ರ, ಬೆಂ.

### ರೂ. 500 ಮತ್ತು ಮೇಲ್ಪಟ್ಟು

1. ಶ್ರೀಮತಿ ಎಸ್.ಆರ್. ಶಾರದಮ್ಮ, ಬೆಂ.; 2. ಶ್ರೀಮತಿ ಸುಶೀಲಮ್ಮ -ಸಿದ್ದಪ್ಪ, ಬೆಂ.; 3. ಶ್ರೀಮತಿ ಮಂಗಳ ಗೌರಮ್ಮ, ಬೆಂ.; 4. ಶ್ರೀಮತಿ ಸುಮಾ ಶರ್ಮಾ, ಬೆಂ.; 5. ಶ್ರೀಮತಿ ಮಾತಾಜಿ ನಿಶಾಂತಿನಿ, ಸೂಡಿ (ಗದಗ್); 6. ಶ್ರೀ ಡಾ|| ಕೆ.ಎಲ್. ರಾಮಸ್ವಾಮಿ, ಬೆಂ.; 7. ಶ್ರೀ ಕೆ. ಎಸ್. ಪರಮೇಶ್ವರಯ್ಯ, ಬೆಂ.; 8. ಶ್ರೀ ಸೇತೂರಾಮ್, ಬೆಂ.; 9. ಶ್ರೀ ಕೆ. ಎಸ್. ಮಹೇಶ್‌ಬಾಬು, ಬೆಂ.; 10. ಶ್ರೀ ಡಿ. ಗಣಪತಿ ಶಾಸ್ತ್ರಿ, ಬೆಂ.; 11. ಶ್ರೀ ವಿ. ವೆಂಕಟಸುಬ್ಬಾಜೋಯಿಸ್, ಬೆಂ.; 12. ಡಾ|| ಹೆಚ್. ಎ. ನಾರಾಯಣಿ, ಬೆಂ.; 13. ಶ್ರೀ ಹೆಚ್. ಎಸ್. ನಂಜುಂಡಸ್ವಾಮಿ, ಬೆಂ.; 14. ಶ್ರೀ ಎ. ವಿ. ಲಕ್ಷ್ಮೀಪತಿ, ಬೆಂ.; 15. ಶ್ರೀ ಕೆ. ಅನಂತರಾಮಯ್ಯ, ಬೆಂ.; 16. ಅಂತರಂಗ ಭಕ್ತರು, ಬೆಂ.; 17. ಶ್ರೀ ಬಿ. ಎನ್. ಗುಜ್ಜಾರ್, ಬೆಂ.; 18. ಶ್ರೀ ಟಿ. ಕೆ. ಸುಬ್ಬರಾವ್, ಬೆಂ.; 19. ಶ್ರೀ ಎ. ಸಿದ್ದಪ್ಪ, ಮೈಸೂರು; 20. ಶ್ರೀ ಕೆ. ಪ್ರಣವಕುಮಾರ್, ಆಧೋನಿ.

**ಧನ ಸಹಾಯ ಮಾಡಿರುವ ಎಲ್ಲಾ ದಾನಿಗಳಿಗೂ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕವಾದ ಅಭಿನಂದನೆಗಳು.**

## ಸಂಕೇತಾಕ್ಷರಗಳ ವಿವರಣೆ

| | | |
|---|---|---|
| ಈ. ಭಾ. | : | ಈಶಾವಾಸ್ಯೋಪನಿಷತ್ ಭಾಷ್ಯ |
| ಉ.ಸಾ.ಪ. | : | ಉಪದೇಶ ಸಾಹಸ್ರಿ ಪದ್ಯ |
| ಉ.ಸಾ.ಗ. | : | ಉಪದೇಶ ಸಾಹಸ್ರಿ ಗದ್ಯ |
| ಐ.ಭಾ. | : | ಐತರೇಯ ಭಾಷ್ಯ |
| ಐ.ಭಾ.ಭಾ.ಭಾ. | : | ಐತರೇಯ ಭಾಷ್ಯ , ಭಾಷ್ಯ ಭಾಗ |
| ಕ. ಭಾ. | : | ಕಠೋಪನಿಷತ್ ಭಾಷ್ಯ |
| ಕೇ.ಭಾ. | : | ಕೇನೋಪನಿಷತ್ ಭಾಷ್ಯ |
| ಗೀ.ಭಾ. | : | ಭಗವದ್ಗೀತಾಭಾಷ್ಯ |
| ಛಾಂ.ಭಾ. | : | ಛಾಂದೋಗ್ಯೋಪನಿಷತ್ ಭಾಷ್ಯ |
| ಛಾಂ.ಭಾ. ಭಾ. | : | ಛಾಂದೋಗ್ಯೋಪನಿಷತ್ ಭಾಷ್ಯ ಭಾಗ |
| ತೈ . | : | ತೈತ್ತಿರೀಯೋಪನಿಷತ್ |
| ತೈ . ಭಾ. ಭಾ. | : | ತೈತ್ತಿರೀಯೋಪನಿಷತ್ ಭಾಷ್ಯ ಭಾಗ |
| ಭಾ. ಭಾ. | : | ಭಾಷ್ಯ ಭಾಗ |
| ಬೃ . ಭಾ. | : | ಬೃಹದಾರಣ್ಯಕೋಪನಿಷತ್ ಭಾಷ್ಯ |
| ಬೃ .ಭಾ.ಸಂ. ಭಾ. | : | ಬೃಹದಾರಣ್ಯಕ ಭಾಷ್ಯ ಸಂಬಂಧ ಭಾಷ್ಯ |
| ಮುಂ. ಭಾ. | : | ಮುಂಡಕೋಪನಿಷತ್ ಭಾಷ್ಯ |
| ಮಾಂ. ಕಾ. ಭಾ. | : | ಮಾಂಡೂಕ್ಯಕಾರಿಕಾ ಭಾಷ್ಯ |
| ಸೂ. ಭಾ. | : | ಬ್ರಹ್ಮಸೂತ್ರ ಭಾಷ್ಯ |

## ಪರಿವಿಡಿ


| | | |
|---|---|---|
| 1. | ಪ್ರಕಾಶಕರ ಬಿನ್ನಹ | 3-5 |
| 2. | ನುಡಿನಮನ (ಡಾ|| ಕೆ. ಅನಂತರಾಮು) | 6-10 |
| 3. | ಹೊಸ ಜಿಜ್ಞಾಸುಗಳ ಪ್ರಶ್ನೆಗಳಿಗೆ ಉತ್ತರಗಳು: ಭಾಗ 1 | 1-60 |
| 4. | ಮನಸ್ಸಿಗೆ ಉಪದೇಶ : ಭಾಗ 2 | 61-72 |

# ಹೊಸ ಜಿಜ್ಞಾಸುಗಳ ಪ್ರಶ್ನೆಗಳಿಗೆ ಉತ್ತರಗಳು ಮತ್ತು ಮನಸ್ಸಿಗೆ ಉಪದೇಶ

## 1

### 20 - 1 - ಸೆಪ್ಟೆಂಬರ್ 1950[1]

**ಪ್ರಶ್ನೆ:-** ಭಗವಂತ, ಈಶ್ವರ, ದೇವರು – ಎಂದು ಬೇರೆ ಬೇರೆಯ ಧರ್ಮಗಳಲ್ಲಿ ಹೇಳಿರುವ ವಸ್ತು ಯಾವದು? ಅದು ನಮಗೇಕೆ ಕಾಣುವದಿಲ್ಲ?

**ಉತ್ತರ:-** ಭಗವಂತನು ಒಂದು ಪ್ರತ್ಯೇಕವಸ್ತುವಲ್ಲ; ಅವನು ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವವನು. ಇರುವದೆಲ್ಲ ಕಾಣಬೇಕೆಂಬ ನಿಯಮವೇನೂ ಇಲ್ಲ. ಉದಾಹರಣೆಗೆ ವಾಯು ಕಣ್ಣಿಗೆ ಕಾಣುವದಿಲ್ಲ, ಮನಸ್ಸಾಗಲಿ ಅದರ ಕೆಲಸಗಳಾಗಲಿ ಯಾವ ಇಂದ್ರಿಯಕ್ಕೂ ಕಾಣುವದಿಲ್ಲ. ಆದರೂ ಅವು ಇಲ್ಲವೆನ್ನುವದಕ್ಕಾಗುವದಿಲ್ಲ.

**ಪ್ರಶ್ನೆ:-** ವಾಯುವು ಕಣ್ಣಿಗೆ ಕಾಣಿಸದಿದ್ದರೂ ಅದು ಮಾಡುವ ಕೆಲಸದಿಂದ ಅದನ್ನು ನಾವು ಅರಿತುಕೊಳ್ಳಬಹುದು. ವಾಯುವಿಲ್ಲದೆ ಬದುಕಿರುವದಕ್ಕೆ ಆಗುವದಿಲ್ಲ; ಅದು ಗಾಳಿಯಾಗಿ ಬೀಸಿದರೆ ಮೈಗೆ ಸೋಕುತ್ತದೆ, ವಸ್ತುಗಳು ಅಲುಗಾಡುತ್ತವೆ. ಇದರಂತೆ ಮತ್ತೊಬ್ಬರ ಮನಸ್ಸು ನಮಗೆ ಕಾಣಿಸದಿದ್ದರೂ ನಮ್ಮ ಮನಸ್ಸಿನಲ್ಲಿ ಆಗುವ ಜ್ಞಾನ, ನೆನಪು, ಸಂತೋಷ, ಸಿಟ್ಟು, ಅಂಜಿಕೆ, ಮುಂತಾದವು ನಮ್ಮ ಅನುಭವಕ್ಕೆ ಬರುತ್ತವೆ. ಹೀಗೆ ದೇವರನ್ನು ಅರಿತುಕೊಳ್ಳಬಹುದೆ, ಅನುಭವಕ್ಕೆ ತಂದುಕೊಳ್ಳಬಹುದೆ?

**ಉತ್ತರ:-** ಇರುವ ವಸ್ತುವಿನ ಕೆಲಸವು ಯಾವಾಗಲೂ ವಾಯುವಿನ ಕೆಲಸದಂತೆ ಪ್ರಕಟವಾಗಿರುವದಿಲ್ಲ. ಉದಾಹರಣೆಗೆ ವಿದ್ಯುಚ್ಛಕ್ತಿ ಮುಂತಾದವುಗಳು ಎಲ್ಲೆಲ್ಲಿಯೂ ತುಂಬಿದ್ದರೂ ಒಂದಾನೊಂದು ಶಾಸ್ತ್ರೀಯಕ್ರಮದಿಂದ ಅದನ್ನು ಪ್ರಕಟಗೊಳಿಸಿಕೊಳ್ಳಬೇಕು. ಇರುವ ವಸ್ತು ಯಾವಾಗಲೂ ಅನುಭವಕ್ಕೆ ಬರುತ್ತಿರಬೇಕೆಂಬ ನಿಯಮವೂ ಇಲ್ಲ. ಉದಾಹರಣೆಗೆ ನಮ್ಮ ಮನಸ್ಸನ್ನು ನಾವು ಅನುಭವಿಸುತ್ತೇವೆ; ಆದರೆ ನಮ್ಮನ್ನು ನಾವು ಅನುಭವಿಸುವದಿಲ್ಲ; ಅಷ್ಟು ಮಾತ್ರದಿಂದ ನಾವೇ ಇಲ್ಲವೆನ್ನುವದಕ್ಕಾದೀತೆ?

**ಪ್ರಶ್ನೆ:-** ಭಗವಂತನನ್ನು ಯಾರಾದರೂ ಪ್ರಕಟಮಾಡಿಕೊಂಡದ್ದುಂಟೆ? ನಾವೂ ಮಾಡಿಕೊಳ್ಳುವದಕ್ಕೆ ಆಗುವದೆ? ಹೇಗೆ?

**ಉತ್ತರ:-** ಭಕ್ತರಾದವರು ಭಗವಂತನನ್ನು ಉಪಾಸನೆಯಿಂದ ಪ್ರಕಟ ಮಾಡಿಕೊಂಡಿರುತ್ತಾರೆ. ನಾವೂ ಪ್ರಯತ್ನಪಟ್ಟರೆ ಮಾಡಿಕೊಳ್ಳಬಹುದು.

---

1 ಮೊದಲನೆ ಅಂಕೆ ಸಂಪುಟ, 2ನೆ ಅಂಕೆ ಸಂಚಿಕೆ ಮತ್ತು 3ನೆ ಅಂಕೆ ತಿಂಗಳು, ಸಂವತ್ಸರಗಳನ್ನು ಸೂಚಿಸುತ್ತವೆ.

## 2

### 20 - 2 - ಅಕ್ಟೋಬರ್ 1950

**ಪ್ರಶ್ನೆ:-** ಈಶ್ವರನಿದಾನೆಂದು ನಂಬದಿದ್ದರೆ ಏನು ಹಾನಿ?

**ಉತ್ತರ:-** ಈಶ್ವರನನ್ನು ನಂಬಲಿ ನಂಬದಿರಲಿ, ಈಶ್ವರನಿರುವದು ನಿಜ. ಮನುಷ್ಯನ ಜೀವವು ಪೂರ್ಣವಾಗುವದಕ್ಕೆ ಈಶ್ವರನ ಇರವಿನಲ್ಲಿ ನಂಬಿಕೆಯು ಬೇಕು. ಶರೀರವು ಆರೋಗ್ಯವನ್ನು ಅನುಭವಿಸಬೇಕಾದರೆ ಎಲ್ಲಾ ಅವಯವಗಳನ್ನೂ ಸರಿಯಾಗಿ ಉಪಯೋಗಿಸುವದು ಅವಶ್ಯವಾಗಿರುವಂತೆ, ಜೀವನವು ಪೂರ್ಣವಾಗಬೇಕಾದರೆ ನಮ್ಮ ಶರೀರ, ಇಂದ್ರಿಯಗಳು, ಮನಸ್ಸು, ಬುದ್ಧಿ – ಎಲ್ಲವನ್ನೂ ಸರಿಯಾಗಿ ಉಪಯೋಗಿಸುವದು ಅವಶ್ಯ. ಇದರಂತೆ ನಮ್ಮ ಜೀವನದ ಅಧ್ಯಾತ್ಮ ಭಾಗವೂ ಸಫಲವಾಗಬೇಕು.

**ಪ್ರಶ್ನೆ:-** ಎಷ್ಟೋ ಜನರಿಗೆ ಈಶ್ವರನ ಅರಿವೇ ಇಲ್ಲ. ಅವರ ವ್ಯವಹಾರವು ಸಾಗುತ್ತಿಲ್ಲವೆ?

**ಉತ್ತರ:-** ಸಾಗುತ್ತಿದೆ, ನಿಜ; ಆದರೆ ಪರಿಪೂರ್ಣವಾಗಿ ತೃಪ್ತಿಕರವಾಗಿ ಸಾಗುತ್ತಿಲ್ಲ. ಗಣಿತಶಾಸ್ತ್ರದ ಅರಿವಿಲ್ಲದೆ ಕಲ್ಲು, ಬೆರಳು ಮುಂತಾದವುಗಳನ್ನು ಎಣಿಸಿ ಜೀವನಮಾಡುವವರ ಕ್ರಮಕ್ಕಿಂತ ಗಣಿತದ ಅರಿವಿದ್ದರೆ ಹೆಚ್ಚು ಉಪಯೋಗವಾಗುವದು. ಇದರಂತೆ ತಮ್ಮ ಜೀವನದ ಯೋಗಕ್ಷೇಮವನ್ನು ನೋಡಿಕೊಳ್ಳಬಲ್ಲ ಸರ್ವಜ್ಞಸರ್ವಶಕ್ತನಾದ ಕರುಣಾಳುವಾದ ಪರಮೇಶ್ವರನ ಸಂಬಂಧವನ್ನು ಪಡೆದುಕೊಳ್ಳದೆ ಇರುವವರು ತಮ್ಮ ಶಾರೀರ ಬಲ, ಹಣಕಾಸು, ಬುದ್ಧಿ – ಮುಂತಾದವುಗಳನ್ನೇ ನಂಬಿ ಜೀವಿಸಬೇಕಾಗಿರುತ್ತದೆ.

**ಪ್ರಶ್ನೆ:-** 'ದೇವರ ಗುಡಿ' ಎಂದು ಕೆಲವು ಪ್ರತಿಮೆಗಳನ್ನು ಇಟ್ಟಿರುವ ಸ್ಥಳಗಳಲ್ಲಿ ಪೂಜೆ ಪುರಸ್ಕಾರಗಳನ್ನು ಮಾಡುವವರಿಗೆ ಯಾವ ಪ್ರಯೋಜನವಾಗಿದೆ? ಅಲ್ಲಿ ಈಶ್ವರನು ಯಾರಿಗಾದರೂ ಕಂಡದ್ದುಂಟೊ?

**ಉತ್ತರ:-** ಈ ಇಡಿಯ ಭೂಮಂಡಲವೇ, ಅಷ್ಟೇಕೆ, ಇಡಿಯ ವಿಶ್ವವೇ ಈಶ್ವರನ ಗುಡಿಯು. ಜೀವರುಗಳ, ಆದರಲ್ಲಿಯೂ ಮನುಷ್ಯರ, ಶರೀರಗಳೇ ದೇವಾಲಯಗಳು. ಇದನ್ನು ಮನದಂದರೆ ಎಲ್ಲಾದರೂ ಈಶ್ವರನನ್ನು ಪೂಜಿಸಬಹುದು. ಆದರೆ ಸತ್ಪುರುಷರು ಭಕ್ತಿಯಿಂದ ಪೂಜಿಸುತ್ತಿರುವ ದೇವಾಲಯಗಳಲ್ಲಿ ಅವರ ತಪೋಬಲದಿಂದ ಅಲ್ಲಿಗೆ ಹೋಗಿಬರುವವರಿಗೆ ಈ ಬುದ್ಧಿಯು ಬರುವದಕ್ಕೆ ಸಹಾಯವಾಗುತ್ತದೆ.

## 3.

### 20 - 3 - ಅಕ್ಟೋಬರ್ 1950

**ಪ್ರಶ್ನೆ:-** ಮತಗಳಿಗೆ ಬಡೆದಾಟವನ್ನು ತಪ್ಪಿಸುವದಕ್ಕೆ ಏನು ಮಾಡಬೇಕು?

**ಉತ್ತರ:-** ಮತಾಚಾರ್ಯರು ಉಪದೇಶಿಸಿದ ಮೂಲತತ್ತ್ವಗಳನ್ನು ಮನಸ್ಸಿಗೆ ತಂದುಕೊಳ್ಳಬೇಕು. ಪರಮೇಶ್ವರನ ಭಕ್ತಿಯಿಂದ ಕಲ್ಯಾಣವಾಗುತ್ತದೆ; ಈಶ್ವರನು ಎಲ್ಲರಲ್ಲಿಯೂ ಸಮನಾಗಿರುತ್ತಾನಾದ್ದರಿಂದ ಎಲ್ಲರನ್ನೂ ಪ್ರೇಮದಿಂದ ಕಾಣಬೇಕು –ಎಂದು ಎಲ್ಲಾ ಮತಗಳೂ ಬೋಧಿಸುತ್ತವೆ. ಆಚಾರಗಳಿಗಿಂತ ಅಂತಃ ಕರಣದ ಸಾಧನವೇ ಮುಖ್ಯವಾದದ್ದೆಂದು ಎಲ್ಲಾ ಆಚಾರ್ಯರೂ ಬೋಧಿಸಿರುತ್ತಾರೆ.

**ಪ್ರಶ್ನೆ:-** ತಪಸ್ಸೆಂದರೇನು? ಅದರಿಂದಾಗುವ ಪ್ರಯೋಜನವೇನು?

**ಉತ್ತರ:-** ಶರೀರವನ್ನೂ ಇಂದ್ರಿಯಗಳನ್ನೂ ಹಿಡಿತದಲ್ಲಿಟ್ಟುಕೊಳ್ಳುವದನ್ನು ತಪಸ್ಸೆಂದು ಕರೆಯುವದು ಸ್ಥೂಲದೃಷ್ಟಿಯಿಂದ. ಇಂದ್ರಿಯಗಳನ್ನೂ ಮನಸ್ಸನ್ನೂ ಏಕಾಗ್ರತೆಗೊಳಿಸಿ ಪರಮಾತ್ಮನಲ್ಲಿಯೇ ನಿಲ್ಲಿಸುವದೇ ಪರಮ ತಪಸ್ಸು. ಅದರಿಂದ ಮನಸ್ಸಿಗೆ ಸುಖಶಾಂತಿಗಳು ದೊರಕುವವು.

**ಪ್ರಶ್ನೆ:-** ಮನುಷ್ಯನಿಗೆ ಅನಾರೋಗ್ಯ, ಬಡತನ, ವ್ಯವಹಾರದಲ್ಲಿ ಅಡಚಣೆಗಳು–ಇವೆಲ್ಲ ಏತರಿಂದ ಬರುತ್ತವೆ? ಇವುಗಳಿಗೆ ಪರಿಹಾರವೇನಾದರೂ ಉಂಟೆ?

**ಉತ್ತರ:-** ಮನುಷ್ಯನಿಗೆ ಆಶೆಯು ಹೆಚ್ಚಿದ್ದಂತೆ ಅವನಿಗೆ ದುಃಖಗಳು ಮೇಲಿಂದ ಮೇಲೆ ಕಾಣಿಸಿಕೊಳ್ಳುತ್ತವೆ. ದುರಾಶೆಯ ವ್ಯವಹಾರವು ಎಂದಿಗೂ ಸುಖವನ್ನು ಕೊಡಲಾರದು. ಈಶ್ವರಶರಣತೆಯಿಂದ ಲೋಕದಲ್ಲಿ ನೀತಿಯನ್ನವಲಂಬಿಸಿ ವ್ಯವಹಾರವನ್ನು ಮಾಡುವದರಿಂದ ಜೀವನದ ಕುಂದುಕೊರತೆಗಳು ಮಾಯವಾಗುವವು. ಕಷ್ಟಗಳು ಒದಗಿದರೂ ಅವನ್ನು ಈ ಉಪಾಯದಿಂದ ಸುಲಭವಾಗಿ ದಾಟಬಹುದು.

**ಪ್ರಶ್ನೆ:-** ಸಾತ್ತ್ವಿಕವ್ಯವಹಾರದವರನ್ನು ಜನರು ಮೋಸಪಡಿಸುತ್ತಾರಲ್ಲ, ಅದಕ್ಕೇನು ಪರಿಹಾರ?

**ಉತ್ತರ:-** ನಿಜವಾದ ಸಾತ್ತ್ವಿಕಜನರನ್ನು ಯಾರೂ ಮೋಸಮಾಡಲಾರರು. ಸಾತ್ತ್ವಿಕರೆಂದರೆ ಪರಮೇಶ್ವರನನ್ನು ನಂಬಿ ಅಂತಃಕರಣವನ್ನು ಶುದ್ಧವಾಗಿಟ್ಟು ಕೊಂಡಿರುವವರು. ಅವರ ವರ್ತನೆಯಿಂದ ಎಲ್ಲರಿಗೂ ಅವರಲ್ಲಿ ಪ್ರೇಮವೇ ಉಂಟಾಗುತ್ತದೆ. ಅವರ ಸಹವಾಸದಿಂದ ಕೆಟ್ಟವರೂ ಒಳ್ಳೆಯ ನಡತೆಯನ್ನು ಕಲಿತುಕೊಳ್ಳುವರು.

# 4

## 20 - 4 - ಡಿಸೆಂಬರ್ 1950

**ಪ್ರಶ್ನೆ:-** ಪರಮೇಶ್ವರನ ಚಿಂತೆಗೆ ಬಿಡುವೇ ಇಲ್ಲದವರು ಏನು ಮಾಡಬೇಕು? ರೈಲುಗಾಡಿಯೊಡನೆ ಓಡಾಡುತ್ತಿರುವವರು, ಮಿಲ್ಲುಗಳಲ್ಲಿ ದುಡಿಯುತ್ತಿರುವವರು, ಹೊಲಗದ್ದೆಗಳಲ್ಲಿ ಕಷ್ಟ ಕೆಲಸಮಾಡುವವರು, ಸರಕಾರಿಯ ನೌಕರಿಯಲ್ಲಿದ್ದು ಸಂಚರಿಸುತ್ತಿರುವವರು – ಇಂಥವರುಗಳು ದೇವರ ಧ್ಯಾನವನ್ನು ಹೇಗೆ ಮಾಡಬೇಕು?

**ಉತ್ತರ:-** ಈಶ್ವರನ ಧ್ಯಾನಕ್ಕೆ ಅವಕಾಶವಿಲ್ಲವೆಂಬ ಮನುಷ್ಯನೇ ಇರುವ ಸಂಭವವಿಲ್ಲ, ಪ್ರತಿಯೊಬ್ಬನೂ ಬೆಳಗ್ಗೆ ಹಾಸಿಗೆಯಿಂದ ಎದ್ದಾಗ, ರಾತ್ರೆ ನಿದ್ರೆಗೆಂದು ಮಲಗಿಕೊಳ್ಳುವಾಗ, ದೇವರನ್ನು ಮನಸ್ಸಿಗೆ ತಂದುಕೊಳ್ಳಬಹುದು. ರೈಲುಗಾಡಿಯು ಸ್ಟೇಷನ್ನಿನಿಂದ ಹೊರಟಾಗ, ಮತ್ತೇ ಸ್ಟೇಷನ್ನಿಗೆ ಬಂದು ನಿಂತಾಗ, ಒಮ್ಮೆ ದೇವರನ್ನು ನೆನಪಿಗೆ ತಂದುಕೊಳ್ಳಬಹುದು; ಮಿಲ್ಲುಗಳಲ್ಲಿಯೂ ಹೊಲಗದ್ದೆಗಳಲ್ಲಿಯೂ ಕೆಲಸಮಾಡುವವರು ತಮ್ಮ ತಮ್ಮ ಕೆಲಸವನ್ನು ಮೊದಲು ಮಾಡುವಾಗಲೂ ಮುಗಿಸುವಾಗಲೂ ದೇವರನ್ನು ನೆನೆಯಬಹುದು. ಸ್ವಲ್ಪ ಅಭ್ಯಾಸವು ಆದಮೇಲೆ ಇಂಥ ಜನರು ತಮ್ಮ ತಮ್ಮ ಕೆಲಸವನ್ನು ಮಾಡುತ್ತಿರುವಾಗಲೂ ಈಶ್ವರನನ್ನು ಮನಸ್ಸಿಗೆ ತಂದುಕೊಳ್ಳಬಹುದು.

**ಪ್ರಶ್ನೆ:-** ಸಂಸಾರದ ವೆಚ್ಚಕ್ಕೆ ಸಾಕಾದಷ್ಟು ಹಣವು ಅಥವಾ ಕಾಳುಕಡ್ಡಿ ಮುಂತಾದದ್ದು ದೊರಕದೆ ಇರುವ ಚಿಂತೆಯು ಹೆಚ್ಚಾಗಿರುವವರು ಈಶ್ವರನ ಚಿಂತೆಯನ್ನು ಹೇಗೆ ಮಾಡಬೇಕು?

**ಉತ್ತರ:-** ಈಶ್ವರನೇ ಎಲ್ಲರ ಯೋಗಕ್ಷೇಮವನ್ನೂ ನೋಡಿಕೊಳ್ಳುವವನು ಎಂಬುದನ್ನು ಇಂಥವರು ಯಾವಾಗಲೂ ಮನಸ್ಸಿನಲ್ಲಿಟ್ಟಿರಬೇಕು. ಅವರಿಗೆ ಒಂದಿಷ್ಟು ಸೌಕರ್ಯವು ದೊರೆತರೂ 'ದೇವ, ನಿನ್ನ ದಯೆಯಿಂದ ಇಷ್ಟು ದೊರಕಿತಲ್ಲ!' ಎನ್ನಬೇಕು. ಏನೂ ದೊರಕದಿದ್ದರೂ ಈಶ್ವರನ ಮೇಲೆ ಭಾರವನ್ನಿಟ್ಟು ತನ್ನ ತನ್ನ ಕರ್ತವ್ಯವನ್ನು ನೆರವೇರಿಸಬೇಕು. ಕಾಲಕ್ರಮದಲ್ಲಿ ಬೇಕಾದ ಅನುಕೂಲ್ಯಗಳು ಅವಶ್ಯವಾಗಿ ದೊರೆಯುವವು. ಹೊರಗಿನ ಸಾಮಗ್ರಿಗಳು ದೊರಕಲಿ ದೊರಕದಿರಲಿ, ಮನಶ್ಶಾಂತಿಯಂತೂ ಖಂಡಿತವಾಗಿ ದೊರಕುವದು. ತಾನು ಮಾಡುವ ಕೆಲಸವನ್ನು ಈಶ್ವರನ ಸೇವಕನಾಗಿ ಮಾಡುತ್ತಿದ್ದೇನೆಂದು ಭಾವಿಸಿಕೊಂಡು ಮಾಡುವದರಿಂದ ಮನಸ್ಸಿಗೆ ಶಾಂತಿಯು ಬಲು ಬೇಗನೆ ದೊರಕುತ್ತದೆ.

## 5

**20 - 6 - ಫೆಬ್ರವರಿ 1951**

**ಪ್ರಶ್ನೆ:-** ನಾನೊಬ್ಬ ವಿದ್ಯಾರ್ಥಿ. ನಗರದಲ್ಲಿ ಪೇಟೆಯ ಒಂದು ಮನೆಯ ಮೇಲುಮಹಡಿಯಲ್ಲಿ ಒಂದು ಕೊಟ್ಟಡಿಯಲ್ಲಿ ವಾಸವಾಗಿರುತ್ತೇನೆ. ಅಲ್ಲಿ ಪುಸ್ತಕಗಳನ್ನಿಟ್ಟುಕೊಳ್ಳುವದಕ್ಕೆ ಒಂದು ಆಲ್ಮೈರ (ಬೀರು) ಗೂಡಿನ ಹೊರತು ಬೇರೆಯ ಸ್ಥಳವಿಲ್ಲ. ನನಗೆ ದೇವರಪೂಜೆಯಲ್ಲಿ ಆಸಕ್ತಿಯಿದೆ. ಹೇಗೆ ಮಾಡಲಿ?

**ಉತ್ತರ:-** ಗೂಡಿನ ಮೇಲುಗಡೆಯಲ್ಲಿ ನಿಮ್ಮ ಇಷ್ಟದೇವತೆಯ ಭಾವಚಿತ್ರವನ್ನು ಇಟ್ಟುಕೊಳ್ಳಬಹುದು. ನಿಮಗೆ ಸುಲಭವಾಗಿ ಹೂತೊಳಸಿಗಳು ಸಿಕ್ಕಿದರೆ ಅವನ್ನು ಹಾರವಾಗಿ ಮಾಡಿ ಅಥವಾ ಒಂದೊಂದನ್ನೇ ಪಟದಮೇಲೆ ಸಿಕ್ಕಿಸಬಹುದು. ಗೂಡಿನ ಮುಂದುಗಡೆ ಒಂದು ಗಂಧದಕಡ್ಡಿ (ಊದುಗಡ್ಡಿ) ಯನ್ನು ಬೆಳಗ್ಗೆ ಮತ್ತು ಸಾಯಂಕಾಲ ಹೊತ್ತಿಸಬಹುದು. ಕೊಟ್ಟಡಿಯನ್ನು ಚೊಕ್ಕವಾಗಿ ಗುಡಿಸಿ ನೀರು ಚಿಮುಕಿಸಿ ಶುಭ್ರವಾಗಿ ಮಡಿಯಾಗಿಟ್ಟುಕೊಳ್ಳಿರಿ. ಬೆಳಗ್ಗೆ ಮತ್ತು ಸಾಯಂಕಾಲ ದೇವರಿಗೆಂದು ನಮಸ್ಕಾರಮಾಡಿ ಸಮಸ್ತ ವಿದ್ಯಾಬುದ್ಧಿಗಳೂ ಆತನಿಂದಲೇ ಬರುವವೆಂದು ಭಾವನೆಮಾಡಿಕೊಳ್ಳಿರಿ. ನಿಮಗೆ ಬರುವ ಪುಸ್ತಕದ ಜ್ಞಾನವು ನಿಜವಾಗಿ ದಕ್ಕಿ ಸದುಪಯೋಗವಾಗುವಂತೆ ಅನುಗ್ರಹಿಸಿಕೊಡೆಂದು ಬೇಡಿಕೊಳ್ಳಿರಿ. ನಿಮಗೆ ಅರ್ಚನೆಗೆ ಹೆಚ್ಚು ಕಾಲವಿದೆಯೆ? ತಿಳಿಸಿರಿ.

**ಪ್ರಶ್ನೆ:-** ಇಷ್ಟರಲ್ಲಿಯೇ ಆಗಲಿರುವ ಪರೀಕ್ಷೆಯಲ್ಲಿ ತೇರ್ಗಡೆಯಾಗುವ ಭರವಸೆಯೇನೋ ಇದೆ. ಆದರೆ ಕಾಲೇಜಿನಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸುವದಕ್ಕೆ ಸೌಕರ್ಯವಿಲ್ಲ. ಸಂಸ್ಕೃತವನ್ನೂ ಅಧ್ಯಾತ್ಮವಿದ್ಯೆಯನ್ನೂ ಅಭ್ಯಾಸ ಮಾಡಬೇಕೆಂಬ ಅಭಿಲಾಷೆಯಿದೆ. ನನಗೆ ಕೆಲವು ಸಲಹೆಗಳನ್ನು ಬರೆದು ತಿಳಿಸಿರಿ.

**ಉತ್ತರ:-** ನಿಮಗೆ ಜೀವನಕ್ಕೆ ಬೇಕಾದ ಅನುಕೂಲ್ಯಗಳಿದ್ದರೆ ಮನೆಯಲ್ಲಿಯೇ ಇದ್ದು ವಿರಾಮಕಾಲದಲ್ಲಿ ಅಭ್ಯಾಸಮಾಡುವದಕ್ಕೆ ಸೂಚನೆಗಳನ್ನು ಕೊಡುವೆನು. ಮತ್ತೆ ಯಾವ ಮಾರ್ಗವೂ ದೊರೆಯದೆ ಇದ್ದರೆ ನೀವು ಪ್ಯಾಸಾದಬಳಿಕ ಅಧ್ಯಾತ್ಮಪ್ರಕಾಶಕಾರ್ಯಾಲಯಕ್ಕೆ ಒಂದು ಸಲ ಬಂದು ಅಧ್ಯಕ್ಷರನ್ನು ಕಾಣಿರಿ. ನಿಮ್ಮ ಅಭ್ಯಾಸಕ್ಕೆ ಅವರು ಸ್ವಲ್ಪಮಟ್ಟಿಗೆ ಸಹಾಯ ಮಾಡಬಹುದು. ಆದರೆ ಬರುವ ಮುಂಚೆ ಅವರಿಗೆ ನಿಮ್ಮ ಸೂಕ್ಷ್ಮಪರಿಚಯವನ್ನು ಮಾಡಿಕೊಡುವ ಒಂದು ಪತ್ರವನ್ನು ಹಾಕಿರಿ.

## 6

### 20 -7 - ಮಾರ್ಚ್ 1951

**ಪ್ರಶ್ನೆ:-** ನಾನೊಬ್ಬ ಬ್ರಹ್ಮಚಾರಿ ವ್ಯವಹಾರದಲ್ಲಿಯೇ ಇದ್ದುಕೊಂಡು ಪರಮಾರ್ಥಸಾಧನೆಯನ್ನು ಮಾಡಬಹುದೆಂದು ನಂಬಿಕೊಂಡೇ ಕೆಲಸ ಮಾಡುತ್ತ ಬಂದಿದ್ದೇನೆ. ಉಪಾಸನೆಯಲ್ಲಿ ಒಲವು ಹೆಚ್ಚಾಗಿದೆ. ಲೌಕಿಕವಾದ ವಿದ್ಯಾಭ್ಯಾಸವೂ ತಕ್ಕಮಟ್ಟಿಗೆ ಆಗಿದೆ. ಜೀವನಕ್ಕೆ ತಕ್ಕಮಟ್ಟಿಗೆ ಅನುಕೂಲ್ಯವಿದೆಯಾದರೂ ಸಂನ್ಯಾಸಾಶ್ರಮವನ್ನು ಪಡೆಯಬೇಕೆಂಬ ತವಕವು ಹೆಚ್ಚಾಗಿದೆ. ತಾವು ಇದಕ್ಕೆ ಸಹಾಯವನ್ನು ಒದಗಿಸಿಕೊಡುವಿರೇನು?

**ಉತ್ತರ:-** ಇದೊಂದು ಮಹತ್ತ್ವದ ಪ್ರಶ್ನೆ. ಆಶ್ರಮಾಂತರವನ್ನು–ಅದರಲ್ಲಿಯೂ ಪಾರಿವ್ರಾಜ್ಯವನ್ನು–ಸ್ವೀಕರಿಸುವದೆಂಬುದು ಹಳೆಯ ಅಂಗಿಯನ್ನು ತೆಗೆದುಹಾಕಿ ಹೊಸದೊಂದನ್ನು ತೊಟ್ಟುಕೊಳ್ಳುವಷ್ಟು ಹಗುರವಾದ ಕೆಲಸವಲ್ಲ. ಇದನ್ನು ಅನೇಕ ದೃಷ್ಟಿಗಳಿಂದ ವಿಚಾರಮಾಡಬೇಕಾಗುತ್ತದೆ. ಆದ್ದರಿಂದ ಇದು ಪತ್ರವ್ಯವಹಾರದ ದ್ವಾರದಿಂದ ವ್ಯವಸ್ಥೆಯಾಗತಕ್ಕದ್ದಲ್ಲ. ನೀವು ಇಲ್ಲಿಗೇ ಮೂರುನಾಲ್ಕು ದಿನಗಳು ಇರುವದಕ್ಕೆ ಬಿಡುವುಕಲ್ಪಿಸಿಕೊಂಡು ಬಂದರೆ ಶ್ರೀಗಳು ನಿಮಗೆ ಯಥೋಚಿತವಾದ ಸೂಚನೆಯನ್ನು ಕೊಡಲಾಗುವದು.

**ಪ್ರಶ್ನೆ:-** ತೀರ್ಥರೂಪರು ದೈವಾಧೀನವಾದಂದಿನಿಂದ ಸಹೋದರರೆಲ್ಲರೂ ಐಕಮತ್ಯದಿಂದಿದ್ದು ಹಿರಿಯರು ಸಂಪಾದಿಸಿದ್ದ ಕೀರ್ತಿಯನ್ನೂ ಆಸ್ತಿಯನ್ನೂ ಉಳಿಸಿಕೊಂಡುಬಂದಿದ್ದೇವೆ. ಒಬ್ಬ ಹುಡುಗ ಮಾತ್ರ ವಿದ್ಯಾವ್ಯಾಸಂಗದಲ್ಲಿ ಅಷ್ಟು ಶ್ರದ್ಧೆಯಿಲ್ಲದೆ ಕುಟುಂಬದ ಕಾರ್ಯದಲ್ಲಿಯೂ ಲಕ್ಷ್ಯವನ್ನು ಕೊಡದೆ ಇದಾನೆ. ಹಿರಿಯರು ಹೇಳಿದ ವಿವೇಕಮಾರ್ಗವನ್ನು ಸಾವಧಾನವಾಗಿ ಕೇಳಿ ತನ್ನ ಮನಸ್ಸು ಬಂದಂತೆ ವರ್ತಿಸುತ್ತಾ ಇರುತ್ತಾನೆ. ಇವನನ್ನು ಸರಿಯಾದ ಮಾರ್ಗಕ್ಕೆ ತರುವದಕ್ಕೆ ಯಾವದಾದರೂ ಸದುಪಾಯವನ್ನು ತಿಳಿಸಬೇಕೆಂದು ಬೇಡುತ್ತೇನೆ.

**ಉತ್ತರ:-** ನೀವು ಬರೆದಿರುವ ಪತ್ರದಲ್ಲಿ ನಮಗೆ ವಿವರವು ಸಾಲದು. ಆದ್ದರಿಂದ ಯಾವ ವಿಶೇಷಸೂಚನೆಯನ್ನೂ ಕೊಡುವದಕ್ಕೆ ಆಗುವದಿಲ್ಲ. ಹಿರಿಯವರ ಸದ್ವರ್ತನೆಯೇ ಮುಖ್ಯವಾಗಿ ವಯಸ್ಕರಾದ ಹುಡುಗರಿಗೆ ಮೇಲುಪಙ್ಕ್ತಿಯಾಗಿರಬೇಕು. ಹುಡುಗನ ಜೊತೆಗಾರರು ಎಂಥ ನಡತೆಯವರೆಂಬುದನ್ನು ತಿಳಿದುಕೊಳ್ಳುವದು ಅತ್ಯವಶ್ಯ. ದೈವಭಕ್ತಿಯಿರುವವರು ಪರಮೇಶ್ವರನಲ್ಲಿ ಪ್ರಾರ್ಥನೆಮಾಡಬಹುದು.

## 7

### 20 - 8 - ಏಪ್ರಿಲ್ 1951

**ಪ್ರಶ್ನೆ:-** ನಾನೊಬ್ಬ ವಿಧವೆ. ತಂದೆಯವರು ಮಾಡಿದ ಆಸ್ತಿಯೇನೂ ನನಗೆ ಪ್ರಯೋಜನಕ್ಕೆ ಬರಲಿಲ್ಲ. ಪತಿಯ ಮನೆಯವರೂ ಅಷ್ಟು ಸಿರಿವಂತರಲ್ಲದ್ದರಿಂದ ಅವರಿಂದ ಜೀವನಾಂಶವೂ ಸಿಕ್ಕುವಂತಿಲ್ಲ. ಹೀಗಾಗಿ ಕಂಡವರ ಮನೆಯಲ್ಲಿ ದುಡಿಯುತ್ತಲೇ ಜೀವನಮಾಡಬೇಕಾಗಿದೆ. ನಮ್ಮಂಥವರಿಗೆ ಪರಮಾರ್ಥ ಸಾಧನೆಗೆ ಅವಕಾಶವೆಲ್ಲಿ?

**ಉತ್ತರ:-** ಸಾಧ್ಯವಾದರೆ ನಿಮಗೆ ಬಂಧುಗಳಾಗಿ ಸದ್ವರ್ತನೆಯಲ್ಲಿರುವವರ ಮನೆಯಲ್ಲಿ ನೀವು ಕೆಲಸಕ್ಕೆ ನಿಲ್ಲಿರಿ. ನಿಮ್ಮಿಂದ ಉಪಕಾರವನ್ನು ಹೊಂದಿದವರು ಎಂದಿಗೂ ನಿಮ್ಮನ್ನು ಪ್ರತ್ಯುಪಕಾರವಿಲ್ಲದೆ ಕೈಬಿಡಲಾರರು. ಬಿಡುವು ದೊರೆತಾಗಲೆಲ್ಲ ಶಾರೀರಕವಾದ ಸಣ್ಣಪುಟ್ಟಕೆಲಸಗಳನ್ನು ಪರೋಪಕಾರ ಬುದ್ಧಿಯಿಂದ ಮಾಡಿ ಭಗವದರ್ಪಣೆಮಾಡಿರಿ. ನೀವು ಯಾವ ಕೆಲಸವನ್ನು ಮಾಡುತ್ತಿದ್ದರೂ ಭಗವಂತನ ನಾಮಸ್ಮರಣೆಯನ್ನು ಮಾಡಬಹುದು. ಬೆಳಗ್ಗೆ ಏಳುವಾಗ, ಸಾಯಂಕಾಲ ಮಲಗುವಾಗ, ಪರಮೇಶ್ವರನ ಧ್ಯಾನವನ್ನು ಮಾಡಬಹುದು. ನಿಮಗೆ ಓದುಬರಹ ಬರುತ್ತದೆಯೇ? ತಿಳಿಸಿರಿ.

**ಪ್ರಶ್ನೆ:-** ನನಗೆ ಪರಮಾರ್ಥಸಾಧನೆಗೆ ಕಾಲವು ಸಾಲದೆ ಇದೆ. ಕಂಪೆನಿಯವರ ಕೆಲಸವನ್ನು ಮಾಡಿಮಾಡಿ ಸಾಕಾಗಿ ಮನೆಗೆ ಬರುತ್ತೇನೆ. ಮನೆಯಲ್ಲಿ ಪದಾರ್ಥಗಳ ಅಭಾವದ ವರದಿಯನ್ನು ಕೇಳಿಕೇಳಿ ಬೇಸರವಾಗುತ್ತಿದೆ. ಈ ಸಂದರ್ಭದಲ್ಲಿ ಸ್ವಲ್ಪ ಸುಳ್ಳುಹೇಳಿ ರಜಪಡೆದು ಎಲ್ಲಿಗಾದರೂ ಹೋಗಿ ಸಾಧನೆ ಮಾಡಬಹುದೆ? ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿರಿ.

**ಉತ್ತರ:-** ಪರಮಾರ್ಥ ಸಾಧನೆಗಾಗಿ ಸುಳ್ಳು ಹೇಳುವದೆಂಬುದು ಬಟ್ಟೆಯನ್ನು ಶುದ್ಧಿ ಮಾಡುವದಕ್ಕಾಗಿ ಅದನ್ನು ಕೊಚ್ಚೆಯಲ್ಲಿ ಹಾಕಿದಂತೆ ಆಗುತ್ತದೆ. ಆದ್ದರಿಂದ ನಿಮಗೆ ರಜ ಸಿಕ್ಕದೆ ಇದ್ದರೂ ಚಿಂತೆಯಿಲ್ಲ. ಕಂಪೆನಿಯಲ್ಲಿ ಕೆಲಸ ಮಾಡುವಾಗಲೆ ನಾಮಜಪವನ್ನು ಮಾಡುವದಕ್ಕೆ ಪ್ರಾರಂಭಿಸಿರಿ. ಮನೆಯಲ್ಲಿ ಸಾಯಂಕಾಲ ನಿತ್ಯವೂ ಸ್ವಲ್ಪಹೊತ್ತು ಭಜನೆಗೆ ಏರ್ಪಾಡು ಮಾಡಿಕೊಳ್ಳಿರಿ. ಈಶ್ವರನ ದಯೆಯಿಂದ ನಿಮ್ಮ ವ್ಯವಹಾರವೂ ವ್ಯವಸ್ಥೆಯಾಗಬಹುದು.

## 8

### 20 - 9 - ಮೇ 1951

**ಪ್ರಶ್ನೆ:-** ವಿಶ್ವಕರ್ಮ ಮತದವನು ನಾನು. 'ಅಕ್ಕಸಾಲಿಗ ಅಕ್ಕನ ಚಿನ್ನ ಬಿಡ' ಎಂಬ ಗಾದೆಯನ್ನು ಜನರು ಆಡಿಕೊಳ್ಳುವದನ್ನು ಕೇಳಿ ನನಗೆ ಬಹಳ ಮನೋವ್ಯಥೆ ಯಾಗುತ್ತದೆ. ದೊಡ್ಡವರ ಸಹವಾಸದಿಂದ ಒಳ್ಳೆಯ ಮಾರ್ಗದಲ್ಲಿ ನಡೆಯ ಬೇಕೆಂಬ ಇಚ್ಛೆಯುಂಟಾಗಿದೆ. ಆದರೆ ನಮ್ಮ ಊರಿನಲ್ಲಿರುವ ನಮ್ಮ ಗುಂಪಿನವರು ನ್ಯಾಯವಾದ ಮಾರ್ಗದಲ್ಲಿರುವದಕ್ಕೆ ಒಪ್ಪುವದಿಲ್ಲ. ಅವರು ಸ್ವಲ್ಪ ಕಡಿಮೆಯ ಕೂಲಿಯನ್ನು ತೆಗೆದುಕೊಳ್ಳುತ್ತಾರೆಂಬ ಕಾರಣದಿಂದ ಅವರಿಗೇ ಉದ್ಯೋಗವು ಹೆಚ್ಚಾಗಿರುತ್ತದೆ. ನಾನು ಪರಮಾರ್ಥವನ್ನೇ ನಂಬಿದರೆ ಇರುವಷ್ಟು ಉದ್ಯೋಗ ವನ್ನೂ ಕಳೆದುಕೊಳ್ಳುವ ಸಂಭವವಿದೆ. ಈ ಬಿಕ್ಕಟ್ಟಿನಲ್ಲಿ ತಾವು ಏನಾದರೂ ತಿಳಿವಳಿಕೆ ಯನ್ನು ಹೇಳೀರೇನು?

**ಉತ್ತರ:-** ಮತ್ತೊಬ್ಬರು ಕೆಟ್ಟಹಾದಿಯಲ್ಲಿ ನಡೆದರೆ ನಾವೂ ಆ ಮಾರ್ಗಕ್ಕೇ ಹೋಗಬೇಕೆಂಬ ನಿಯಮವೇನೂ ಇಲ್ಲ. ಸ್ವರ್ಣಸ್ತೇಯವು ಪಂಚಮಹಾಪಾತಕ ಗಳಲ್ಲಿ ಒಂದು ಎಂಬ ಶಾಸ್ತ್ರವಚನವನ್ನು ಆಗಾಗ್ಗೆ ನೆನಸಿಕೊಳ್ಳುತ್ತಿರಬೇಕು. ಅದಿಗಣೆಯ ಮೇಲೆ ಸುತ್ತಿಗೆಯ ಪೆಟ್ಟು ಬೀಳುತ್ತಿರುವಾಗ ಆಗುವ ಶಬ್ದವನ್ನು 'ಕೃಷ್ಣ' 'ಕೃಷ್ಣ' ಎಂಬ ಭಗವನ್ನಾಮದ ಸದ್ದೆಂದು ಭಾವಿಸುವ ಸಾಧನವನ್ನು ಮಾಡಿಕೊಳ್ಳಿರಿ. ಶ್ರೀಕೃಷ್ಣಸಾಕ್ಷಿಯಾಗಿಯೂ 'ನಾನು ತಪ್ಪು ಹಾದಿಯಲ್ಲಿ ಹೆಜ್ಜೆಯನ್ನಿಡುವದಿಲ್ಲ' ಎಂದು ಸಂಕಲ್ಪವನ್ನು ಮಾಡಿಕೊಳ್ಳಿರಿ. ನೀವು ಚೆನ್ನಾಗಿ ಕೆಲಸ ಮಾಡುತ್ತಿದ್ದರೆ ಸಾಕು, ನಿಮ್ಮ ಕೂಲಿಯ ದರವು ಸ್ವಲ್ಪ ಹೆಚ್ಚಾದರೂ ಭಗವಂತನ ಪ್ರೇರಣೆಯಿಂದ ನಿಮಗೇ ಜನರು ಕೆಲಸವನ್ನು ಕೊಡುವರು. ಕಾಲಕ್ರಮದಲ್ಲಿ ನಿಮ್ಮ ಕೀರ್ತಿಯೂ ಧರ್ಮವೂ ಅಭಿವೃದ್ಧಿಯನ್ನು ಹೊಂದುವವು.

**ಪ್ರಶ್ನೆ:-** ನಮ್ಮೂರಿನ ಸುತ್ತಲೂ ಎಲ್ಲಿಯೂ ದನಗಳಿಗೆ ಮೇವಿಲ್ಲ. ಊರ ಹೊರಕ್ಕೆ ಕಾಲಿಟ್ಟರೆ ಕಂಡವರ ಹೊಲದಲ್ಲಿ ಮೇದು ದನಗಳು ದೊಡ್ಡಿಯ ಪಾಲಾಗುತ್ತವೆ. ಊರವರಿಗೆಲ್ಲ ಈ ಕಷ್ಟವು ಬಂದಿದೆ. ಇದಕ್ಕೇನು ಮಾಡೋಣ?

**ಉತ್ತರ:-** ಊರವರೆಲ್ಲ ಸೇರಿ ಒಂದು ಹೊಲವನ್ನು ಹುಲ್ಲುಗಾವಲಾಗಿ ಮಾರ್ಪಡಿಸಿರಿ. ಆ ಹೊಲದ ಬೆಲೆಯನ್ನು ಎಲ್ಲರೂ ಸೇರಿ ಕೊಡಬಹುದು. ಕಾವಲಿ ನಲ್ಲಿ ಒಂದು ಗೋಪಾಲಕೃಷ್ಣ ಮಂದಿರವನ್ನು ಸ್ಥಾಪಿಸಿಕೊಳ್ಳಿರಿ, ಅಲ್ಲಿ ಸಂಜೆಯ ಹೊತ್ತಿನಲ್ಲಿ ಭಜನೆಗೆ ಸೇರಿರಿ. ಶ್ರೀ ಗೋಪಾಲನಂದನನ ದಯೆಯಿಂದ ನಿಮ್ಮ ಹಳ್ಳಿಯಲ್ಲಿ ಗೋವೃದ್ಧಿಯಾಗುವದು; ಹಾಲುಮೊಸರಿನ ಸಮೃದ್ಧಿಯೂ ಆಗುವದು.

## 9

### 20 - 10 - ಜೂನ್ 1951

**ಪ್ರಶ್ನೆ:-** ಕ್ಷೇತ್ರತೀರ್ಥಗಳನ್ನು ನೋಡಬೇಕೆಂಬ ಕುತೂಹಲವಿದೆ. ಆದರೆ ತಕ್ಕಷ್ಟು ಧನಸಂಗ್ರಹವೇನೂ ನನ್ನಲ್ಲಿಲ್ಲ. ತೀರ್ಥಯಾತ್ರೆಯನ್ನು ಹೇಗೆ ಮಾಡಿದರೆ ನನಗೆ ಒಳ್ಳೆಯದಾದೀತು? ಕೆಲವು ಸೂಚನೆಗಳನ್ನು ದಯವಿಟ್ಟು ಬರೆಯಬೇಕು.

**ಉತ್ತರ:-** ಕ್ಷೇತ್ರತೀರ್ಥಗಳನ್ನು ನೋಡಿ ಕಣ್ಣಿಗೆ ಹಬ್ಬ ಮಾಡಿಕೊಳ್ಳಬೇಕೊ, ಅಥವಾ ಪರಮಾರ್ಥ ಸಾಧನೆಗೆ ಸಹಾಯವನ್ನಾಗಿ ಮಾಡಿಕೊಳ್ಳಬೇಕೊ? ಇದನ್ನು ಮೊದಲು ನಿಶ್ಚಯಿಸಿಕೊಳ್ಳಿರಿ. ಬರಿಯ ನೋಟಕ್ಕಾದರೆ ಕ್ಷೇತ್ರಗಳಿಗಿಂತ ದೊಡ್ಡ ದೊಡ್ಡ ನಗರಗಳನ್ನು ನೋಡುವದೇ ಮೇಲು. ನಿಮಗೆ ತೀರ್ಥಯಾತ್ರೆಯಿಂದ ಸರಿಯಾದ ಪ್ರಯೋಜನವಾಗಬೇಕಾದರೆ ನಿಮಗೆ ಇಷ್ಟದೇವತೆಯಾದ ಶಿವ, ವಿಷ್ಣು- ಮುಂತಾದದ್ದರಲ್ಲಿ ಆದರವನ್ನುಂಟುಮಾಡುವ ಪುರಾಣಗಳ ಶ್ರವಣವನ್ನು ಮಾಡಿರಿ. ಶೈವಕ್ಷೇತ್ರಗಳನ್ನೋ, ವೈಷ್ಣವ ಕ್ಷೇತ್ರಗಳನ್ನೋ, ಶಾಕ್ತೇಯ ಕ್ಷೇತ್ರಗಳನ್ನೋ ಆರಿಸಿಕೊಂಡು ಅವನ್ನೇ ಭಕ್ತಿಯಿಂದ ನೋಡುವ ಸಂಕಲ್ಪವನ್ನು ಮಾಡಿರಿ. ರೈಲು, ಬಂಡಿ, ಕಾಲುನಡಿಗೆ- ಮುಂತಾದ ಸಾಧನಗಳನ್ನು ನಿಮಗೆ ದೊರೆತ ಮಟ್ಟಿಗೆ ಉಪಯೋಗಿಸಿಕೊಳ್ಳಿರಿ. ಆದರೆ ತೀರ್ಥಕ್ಷೇತ್ರಗಳಲ್ಲಿ ಅವಶ್ಯವಿದ್ದಷ್ಟು ದಿನವಿರುವದಕ್ಕೆ, ಅಲ್ಲಿರುವ ಪುಣ್ಯಸ್ಥಳಗಳನ್ನು ನೋಡುವದಕ್ಕೆ, ಅಲ್ಲಿರುವ ತೀರ್ಥಗಳಲ್ಲಿ ಸ್ನಾನಾದಿಗಳನ್ನು ಆಚರಿಸುವದಕ್ಕೆ ಅಡ್ಡಿಯಾದ ಯಾವ ಸಾಧನವನ್ನೂ ಯಾವ ಸಹವಾಸವನ್ನೂ ಇಟ್ಟುಕೊಳ್ಳಬೇಡಿರಿ. ಯಾತ್ರೆಯಲ್ಲಿ ದಂಭದರ್ಪಾದಿಗಳಿಗೆ ಸ್ವಲ್ಪವೂ ಎಡೆಗೊಡಬಾರದು. ಪರಮೇಶ್ವರನ ನಾಮಜಪವನ್ನು ಅಖಂಡವಾಗಿ ಮಾಡುತ್ತಿರಬೇಕು, ದಾರಿಯಲ್ಲಿ ಒದಗುವ ಕಷ್ಟಗಳನ್ನು ಪರಮೇಶ್ವರ ಪ್ರೀತಿಗೆಂದು ಮಾಡುವ ತಪಸ್ಸೆಂದು ಭಾವಿಸಬೇಕು. ನೀವು ಹೊರಟಂದಿನಿಂದ ಮನೆಗೆ ಬರುವವರೆಗೂ ಭಗವಂತನ ಸ್ಮರಣೆಯೊಂದಲ್ಲದೆ ಮಿಕ್ಕ ಯಾವ ವ್ಯವಹಾರದ ತೊಡಕೂ ಮನಸ್ಸಿಗೆ ಹತ್ತದಂತೆ ನೋಡಿಕೊಳ್ಳಿರಿ. ಕ್ಷೇತ್ರಗಳಲ್ಲಿ ಸಜ್ಜನರಂತೆ ದುಷ್ಟರೂ ಇರುವರು; ಆದರೆ ನಿಮಗೆ ಪರಮೇಶ್ವರನ ಸ್ಮರಣೆಯು ಅಖಂಡವಾಗಿ ಬೆಳೆಯುತ್ತಾ ಇದ್ದರೆ ದುಷ್ಟರಿಂದ ಯಾವ ತೊಂದರೆಯೂ ಆಗುವದಿಲ್ಲ, ಕ್ಷೇತ್ರಗಳಲ್ಲಿ ಯಾವ ಪಾಪವಾಸನೆಯೂ ಎದ್ದುಕೊಳ್ಳುವದಿಲ್ಲ.

**ಪ್ರಶ್ನೆ:-** ನಾನು ಟೇಲರ್(ದರ್ಜಿ) ಕೆಲಸ ಮಾಡಿಕೊಂಡು ಜೀವಿಸುತ್ತಿದ್ದೇನೆ. ಹೊಟ್ಟೆಪಾಡಿಗಾಗಿಯೇ ಕಾಲಕಳೆಯುತ್ತಿದ್ದರೆ ಜನ್ಮವು ವ್ಯರ್ಥವಾಗುತ್ತದೆ. ಯಾರಾದರೂ ಸದ್ಗುರುಗಳ ಆಶ್ರಯದಲ್ಲಿದ್ದು ವ್ಯವಹಾರವನ್ನು ನಡೆಯಿಸಿ

ಕೊಳ್ಳಬೇಕೆಂಬ ಆಶೆಯಿದೆ. ನನಗೆ ಪರಮಾರ್ಥದ ಹಾದಿಯನ್ನು ತಿಳಿಸಿ ಕಾಪಾಡ ಬೇಕು. ನಾನು ಹೇಗೆ ನಡೆದುಕೊಳ್ಳಲಿ?

**ಉತ್ತರ:-** ಮನುಷ್ಯನು ಹೊಟ್ಟೆಯ ಪಾಡಿಗಾಗಿ ದುಡಿಯುವದು ಹೇಯ ವಲ್ಲ. ಅದಕ್ಕಾಗಿಯೇ ಕಾಲವನ್ನು ಕಳೆಯಬಾರದು. ನಿಮಗೆ ಎಷ್ಟರಮಟ್ಟಿಗೆ ಓದುಬರಹ ಬರುತ್ತದೆ ಎಂಬುದನ್ನು ನೀವು ತಿಳಿಸಿಲ್ಲ. ಸದ್ಯಕ್ಕೆ 'ಭಗವದ್ಗೀತೆಯ ಉಪನ್ಯಾಸಗಳು' ಎಂಬುದು ಪತ್ರಿಕೆಯಲ್ಲಿ ಬರುತ್ತಿದೆಯಷ್ಟೆ, ಅದನ್ನು ಓದುತ್ತಿರ ಬಹುದು. ಆ ಭಾಗವನ್ನು ಬೇರೆಯಾಗಿ ಬೈಂಡು ಮಾಡಿಸಿ ಇಟ್ಟುಕೊಳ್ಳಿರಿ.

ಸದ್ಗುರುಗಳ ಆಶ್ರಯದಲ್ಲಿರುವ ಆಶೆಯು ಶ್ಲಾಘನೀಯವೇ ಸರಿ. ನೀವು ಒಮ್ಮೆ ನಿಮಗೆ ಮೆಚ್ಚಾದ ಸಾಧುಜನರನ್ನು ಕಂಡು ಅವರಲ್ಲಿ ಯಾವ ಸೇವೆಗೆ ನಿಲ್ಲಬಹುದೆಂಬುದನ್ನೂ ಅವರಿಂದ ಯಾವ ಉಪಯೋಗವನ್ನು ಪಡೆಯಬಹು ದೆಂಬುದನ್ನೂ ಅನುಭವದಿಂದ ತಿಳಿದುಕೊಳ್ಳಬೇಕು. ಹೇಗೂ ನಿಮ್ಮ ಜೀವನದ ವೃತ್ತಿಯೊಂದನ್ನು ಎಲ್ಲಿದ್ದರೂ ಆಶ್ರಯಿಸಬೇಕಾಗುವದಷ್ಟೆ.

ಈಗಿನ ನಿಮ್ಮ ವೃತ್ತಿಯನ್ನು ಆಶ್ರಯಿಸಿರುವಾಗಲೇ ಭಗವಂತನ ನಾಮವನ್ನು ಜಪಿಸುತ್ತಾ ಬನ್ನಿರಿ. ಒಂದೇ ಸಮನೆ ಬಾಯಿಯಲ್ಲಿ ಉಚ್ಚರಿಸುತ್ತಾ ಅಥವಾ ಮನಸ್ಸಿನಲ್ಲಿ ಸ್ಮರಿಸುತ್ತಾ ಇರಿ. ಕಾಲಕ್ರಮದಲ್ಲಿ ಭಗವಂತನಲ್ಲಿ ಭಕ್ತಿಯುಂಟಾಗುವದು. ನಿಮಗೆ ಅರ್ಚನಾದಿಗಳನ್ನು ಮಾಡುವ ಆನುಕೂಲ್ಯ ವಿದೆಯೆ? ತಿಳಿಸಿ. ಹೆಚ್ಚಿನ ಕೆಲವು ಸೂಚನೆಗಳನ್ನು ಹಿಂದಿನಿಂದ ಬರೆಯುವೆನು.

ಬೆಳಗ್ಗೆ ಆದಷ್ಟು ಮುಂಚಿತವಾಗಿ ಸ್ನಾನಮಾಡಿ ನಿಮ್ಮೂರಿನಲ್ಲಿರುವ ದೇವಾಲಯದಲ್ಲಿ ದೇವರ ದರ್ಶನವನ್ನು ತಪ್ಪದೆ ಮಾಡಿಕೊಂಡು ನಮಸ್ಕಾರ ಹಾಕಿ ಬಂದು ಉದ್ಯೋಗಕ್ಕೆ ಪ್ರಾರಂಭಿಸಿರಿ. ಇದರಿಂದ ನಿಮಗೆ ಸತ್ತ್ವಶುದ್ಧಿಯೂ ಆಗುವದು, ಆರೋಗ್ಯವೂ ಹೆಚ್ಚುವದು.

ಒಮ್ಮೆ ಮುಂಚಿತವಾಗಿ ಕಾಗದವನ್ನು ಬರೆದು ಶ್ರೀಶ್ರೀಗಳವರ ದರ್ಶನಕ್ಕಾಗಿ ಕಾರ್ಯಾಲಯಕ್ಕೆ ಬಂದು ಹೋಗಿರಿ. ನಿಮಗೆ ಅವರ ಉಪದೇಶದಿಂದ ಪ್ರಯೋಜನವಾಗಬಹುದು.

## 10

### 20 - 11 - ಜುಲೈ 1951

**ಪ್ರಶ್ನೆ:-** ಕೆಲವು ಚಿತ್ರಪಠಗಳಲ್ಲಿ ಶಿವನು ಧ್ಯಾನಸ್ಥನಾಗಿರುವಂತೆ ಬರೆದಿರುತ್ತದೆ. ಪರಮಾತ್ಮನು ಏನು ಧ್ಯಾನ ಮಾಡುತ್ತಾನೆ, ಯಾರನ್ನು ಧ್ಯಾನ ಮಾಡುತ್ತಾನೆ?

**ಉತ್ತರ:-** ಪರಮಾತ್ಮನು ನಿತ್ಯಶುದ್ಧಬುದ್ಧಮುಕ್ತಸ್ವರೂಪನು. ಅವನಿಗೆ ಧ್ಯಾನ ದಿಂದ ಆಗಬೇಕಾದದ್ದು ಏನೂ ಇಲ್ಲ. ಆದರೂ ಜೀವರುಗಳಿಗೆಲ್ಲ ಪರಮಾತ್ಮನೇ ಆತ್ಮನು; ನಿಜವಾಗಿ ಆತ್ಮನಾಗಿರುವ ಆತನನ್ನೇ ಧ್ಯಾನಿಸಬೇಕು, ಅದರಿಂದಲೇ ಸುಖಶಾಂತಿಗಳು ದೊರಕುವವು–ಎಂಬುದನ್ನು ಜನರಿಗೆ ಬೋಧಿ ಸುವದಕ್ಕಾಗಿ ಸಾಕಾರರೂಪದಲ್ಲಿ ಶಿವನು ತನ್ನ ಸ್ವರೂಪವನ್ನೇ ತಾನು ಚಿಂತಿಸಿ ತೋರಿಸುತ್ತಾನೆ. ಭಾರತದಲ್ಲಿ ನರನಾರಾಯಣರು ತಮ್ಮ ಆತ್ಮನನ್ನೇ ಧ್ಯಾನ ಮಾಡುತ್ತೇವೆಂದು ನಾರದರಿಗೆ ಉಪದೇಶ ಮಾಡಿರುವದರ ಭಾವವೇ ಇದು.

**ಪ್ರಶ್ನೆ:-** ದಶಾವತಾರಗಳಲ್ಲಿ ವರಾಹಾವತಾರವೂ ಒಂದು. ಹೀಗಿರುವಲ್ಲಿ ಹಂದಿಯು ಅಶುಚಿಯಾದ ಪದಾರ್ಥವನ್ನು ಭಕ್ಷಿಸುತ್ತಿರುವದೇಕೆ?

**ಉತ್ತರ:-** ಜೀವನು ನಿಜವಾಗಿ ಪರಮಾತ್ಮನಿಂದ ಸ್ವಲ್ಪವೂ ಭಿನ್ನನಲ್ಲದಿದ್ದರೂ ಅನಿತ್ಯವಾದ ಅಶುಚಿಯಾದ ಅಚೇತನ ವಸ್ತುಗಳಲ್ಲಿಯೇ ಮನಸ್ಸಿಟ್ಟಿರುವನೆಂಬುದಕ್ಕೆ ಇದೊಂದು ಒಳ್ಳೆಯ ನಿದರ್ಶನ.

**ಪ್ರಶ್ನೆ:-** ಒಂದು ದೇಹದಿಂದ ಹೊರಕ್ಕೆ ಬರುವದಕ್ಕೆ ಆತ್ಮನಿಗೆ ಅಷ್ಟೊಂದು ಕಷ್ಟವೇಕೆ ಆಗುತ್ತದೆ?

**ಉತ್ತರ:-** ನಿಜವಾಗಿ ನಾವುಗಳೆಲ್ಲರೂ ಅಶರೀರರು; ಮಿಥ್ಯಾಭಿಮಾನದಿಂದ ಶರೀರವುಳ್ಳವರಾಗಿ ಧರ್ಮಾಧರ್ಮಗಳನ್ನು ಮಾಡಿ ಸುಖದುಃಖಗಳನ್ನು ಈ ಜನ್ಮದಲ್ಲಿಯೂ ಜನ್ಮಾಂತರ ಲೋಕಾಂತರಗಳಲ್ಲಿಯೂ ಅನುಭವಿಸುತ್ತಿರುವೆವು. ಪರಮಾತ್ಮನ ಧ್ಯಾನಾದಿಗಳಿಂದ ಆತನಲ್ಲಿಯೇ ನೆಲೆನಿಂತರೆ ಆಗ ನಮಗೆ ಯಾವ ಶರೀರವೂ ನಿಜವಾಗಿಲ್ಲವೆಂಬುದು ಮನದಟ್ಟಾಗುವದು. ಆದರೆ ಶರೀರಾಭಿಮಾನವನ್ನು ಬಿಡುವದು ಬಹು ಕಷ್ಟ.

(ಮೇಲಿನ ಪ್ರಶ್ನೆಗಳು ಬಹಳ ಮಟ್ಟಿಗೆ ಸಿದ್ಧಾಂತದ ವಿಷಯದವುಗಳಾಗಿವೆ; ಇಂಥ ಪ್ರಶ್ನೆಗಳಿಗೆ ವಿಸ್ತಾರವಾಗಿ ಉತ್ತರವನ್ನು ಬರೆದ ಹೊರತು ತಿಳಿಯುವದಿಲ್ಲ. ಆದ್ದರಿಂದ ಈ ತಲೆಬರಹದ ಲೇಖನದಲ್ಲಿ ಸಾಧನಪ್ರಧಾನವಾದ ಪ್ರಶ್ನೆಗಳಿಗೇ ಉತ್ತರ ಕೊಡುವ ವಾಡಿಕೆಯಿಟ್ಟುಕೊಂಡಿದ್ದೇನೆ. ಅಂಥ ಪ್ರಶ್ನೆಗಳನ್ನೇ ವಾಚಕರು ದಯವಿಟ್ಟು ಕಳುಹಿಸಬೇಕಾಗಿ ಪ್ರಾರ್ಥನೆ.)

## 11

### 20 - 12 - ಆಗಸ್ಟ್ 1951

**ಪ್ರಶ್ನೆ:-** ಶಂಕರಾಚಾರ್ಯರ ಶುದ್ಧಪ್ರಕ್ರಿಯೆಯನ್ನೇ ತಿಳಿದುಕೊಳ್ಳ ಬೇಕೆನ್ನುವವರು ಯಾವ ಪ್ರಕರಣವನ್ನು ಓದಬಹುದು? ಪ್ರಕರಣಗಳಲ್ಲಿ ಒಂದಕ್ಕೊಂದಕ್ಕೆ ವಿರೋಧವಿರುವಂತೆ ತೋರಿದರೆ ಏನು ಮಾಡಬೇಕು?

**ಉತ್ತರ:-** ಸಂಸ್ಕೃತವು ಚೆನ್ನಾಗಿ ತಿಳಿಯುತ್ತಿದ್ದರೆ ಉಪದೇಶಸಾಹಸ್ರಿಯ ಗದ್ಯ–ಪದ್ಯಪ್ರಬಂಧಗಳನ್ನು ಓದಬಹುದು. ಅವುಗಳಿಗೆ ಕನ್ನಡದ ಅನುವಾದವೂ ಟಿಪ್ಪಣಿಯೂ ಇವೆ. ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲೆಯಲ್ಲಿ ಪ್ರಕರಣಗಳ ಮೊದಲನೆಯ ಸಂಪುಟವನ್ನು ನೋಡಿ. ಹೆಚ್ಚಿನ ವಿವರಣೆಯು ಬೇಕಾದರೆ ಕಾರ್ಯಾಲಯದಲ್ಲಿ ಪ್ರಕಟಿತವಾಗಿರುವ ಸವಿವರಣಗ್ರಂಥಗಳನ್ನು ಓದಿರಿ. ಪ್ರಕರಣಗಳ ವಿರೋಧವನ್ನು ಮೊದಲು ಲೆಕ್ಕಕ್ಕೆ ತೆಗೆದುಕೊಳ್ಳದೇ ಇರುವದೇ ಒಳ್ಳೆಯದು; ಆಚಾರ್ಯರ ಭಾಷ್ಯಗ್ರಂಥಗಳನ್ನು ಓದಿದರೆ ಆಮೇಲೆ ಆ ವಿರೋಧಗಳನ್ನು ನೀವೇ ಸುಲಭವಾಗಿ ಪರಿಹರಿಸಿಕೊಳ್ಳಬಹುದು.

**ಪ್ರಶ್ನೆ:-** ಪರಮೇಶ್ವರನು ನಿರ್ಗುಣನೆಂದೂ ನಿರಾಕಾರನೆಂದೂ ವೇದಾಂತಿಗಳು ಹೇಳುತ್ತಾರೆ. ಹಾಗಾದರೆ ಸಾಧಕರಾದವರು ಸಗುಣನೆಂದೂ ಸಾಕಾರನೆಂದೂ ಉಪಾಸನೆ ಮಾಡುವುದು ತಪ್ಪೆ?

**ಉತ್ತರ:-** ತಪ್ಪಲ್ಲ, ಅದೇ ಮಾಡಬೇಕಾದದ್ದು. ನಿರ್ಗುಣವಾಗಿರುವ ಬ್ರಹ್ಮವೇ ಅದರ ಕಾರ್ಯವಾದ ನಾಮರೂಪ ಪ್ರಪಂಚದ ಕೆಲವು ಗುಣ ಗಳಿಂದಲೂ ಆಕಾಶದಿಂದಲೂ ಕೂಡಿರವದೆಂದು ಉಪಾಸನೆ ಮಾಡಬೇಕೆಂದು ಶಾಸ್ತ್ರದಲ್ಲಿ ಹೇಳಿದೆ. ಪ್ರಪಂಚವು ಬ್ರಹ್ಮಕ್ಕಿಂತ ವ್ಯತಿರಿಕ್ತವಾಗಿಲ್ಲವಾದ್ದರಿಂದ ಆ ಗುಣಗಳೂ ಆಕಾರಗಳೂ ಬ್ರಹ್ಮದವೇ ಆಗಿರುತ್ತವೆ.

**ಪ್ರಶ್ನೆ:-** ಉಪಾಸನೆ ಮಾಡುವವರು ಯಾವ ದೇವತೆಯನ್ನು ಉಪಾಸನೆ ಮಾಡಬೇಕು? ಶಿವ, ವಿಷ್ಣು, ರಾಮ, ಕೃಷ್ಣ – ಎಂದು ಒಬ್ಬೊಬ್ಬರು ಒಂದು ಬಗೆಯಾಗಿ ಹೇಳುತ್ತಾರಲ್ಲ!

**ಉತ್ತರ:-** ಒಬ್ಬ ಪರಮೇಶ್ವರನನ್ನೇ ಬೇರೆಬೇರೆಯ ನಾಮರೂಪಗಳಿಂದ ಉಪಾಸನೆ ಮಾಡುತ್ತಾರೆ. ತಮಗೆ ಇಷ್ಟವಾದ ಒಂದು ದೇವತೆಯನ್ನು ಆರಿಸಿಕೊಂಡು ಉಪಾಸನೆ ಮಾಡಬಹುದು. ಆದರೆ ಏಕನಿಷ್ಠೆಯು ಇರಬೇಕು.

## 12

### 21 - 1 - ಸೆಪ್ಟೆಂಬರ್ 1951

**ಪ್ರಶ್ನೆ:-** ಕಲಿಯುಗದಲ್ಲಿ ಬ್ರಾಹ್ಮಣವರ್ಣದವರು ವೇದೋಕ್ತಕರ್ಮಗಳನ್ನು ಮಾಡುತ್ತಿಲ್ಲ. ಅದಕ್ಕೆ ಬದಲು ಭಗವನ್ನಾಮಸಂಕೀರ್ತನೆ ಮಾಡಿದರೆ ಸಾಕೊ?

**ಉತ್ತರ:-** ಭಗವನ್ನಾಮಸಂಕೀರ್ತನೆಯು ವರ್ಣಾಶ್ರಮ ಧರ್ಮದ 'ಬದಲಿಗೆ' ಮಾಡತಕ್ಕದ್ದೆಂದು ಭಾವಿಸಿದರೆ ವರ್ಣಾಶ್ರಮಧರ್ಮವನ್ನು ಬಿಡಬಹುದೆಂಬ ಅರ್ಥವೂ ಆಗಬಹುದಾಗಿದೆ. ಆದರೆ ಎಷ್ಟೇ ವಿಗುಣವಾಗಲಿ ವರ್ಣಾಶ್ರಮ ಧರ್ಮವನ್ನು ಬಿಡತಕ್ಕದ್ದಲ್ಲ. ಕೈಯಲ್ಲಾದಮಟ್ಟಿಗೆ ಅದನ್ನು ನಡೆಯಿಸುತ್ತಿರಬೇಕು. ಭಗವನ್ನಾಮಸಂಕೀರ್ತನೆಯಿಂದ ಆ ಕರ್ಮದ ವೈಗುಣ್ಯವೂ ಹೋಗಿ ಅದು ವೀರ್ಯವತ್ತರವಾಗುವದು. ಭಗವದ್ಗೀತೆ, 17–23ರಿಂದ 28ರ ವರೆಗಿನ ಶಾಂಕರ ಭಾಷ್ಯವನ್ನು ನೋಡಿರಿ.

**ಪ್ರಶ್ನೆ:-** ನನಗೆ ಮೂರು ಮಕ್ಕಳಾಗಿ ಮೊದಲನೆಯ ಇಬ್ಬರು ವಿಧಿವಶರಾದರು. ಮೊದಲನೆಯ ಮಗು ಹನ್ನೊಂದನೆಯ ತಿಂಗಳಲ್ಲಿದೆ. ಜಾತಕ ಬರೆಯುವವರು ಬಾಲಾರಿಷ್ಟವೆಂತ ಹೇಳಿದರು. ಭಗವಂತನದೇ ಮಗುವೆಂದು ಭಾವಿಸಿ ಅವನಲ್ಲಿ ಸದಾ ಪ್ರಾರ್ಥಿಸುತ್ತಿದ್ದೇನೆ. ಈ ಮಗುವು ಭಗವಂತನ ದಾಸನಾಗುವಂತೆ ದೊಡ್ಡವರ ಅನುಗ್ರಹವಾಗಬೇಕೆಂದು ನನ್ನ ಪ್ರಾರ್ಥನೆ. ಈ ಹುಡುಗನಿಗೆ ಒಳ್ಳೆಯದಾಗುವದಕ್ಕೆ ನಾನು ಇನ್ನೇನು ಮಾಡಲಿ!

**ಉತ್ತರ:-** ಮಗುವನ್ನು ಭಗವಂತನ ರಕ್ಷಣೆಗೆ ಒಪ್ಪಿಸಿದ ಮೇಲೆ ಇನ್ನೇನೂ ಮಾಡತಕ್ಕದ್ದಿಲ್ಲ. ಲೌಕಿಕದೃಷ್ಟಿಯಿಂದ ನೀವು ಮಾಡಬೇಕಾದ ಕರ್ತವ್ಯವನ್ನು ಮಾಡಿ, ಭಗವಂತನು ಮುಂದಿನ ಯೋಗಕ್ಷೇಮವನ್ನು ನೋಡಿಕೊಳ್ಳಲಿ!–ಎಂದು ಆತನಲ್ಲಿಯೇ ಚಿತ್ತವನ್ನಿಟ್ಟುಕೊಂಡಿರಿ. ಸದಾ ಮಗುವಿನ ಚಿಂತೆಯನ್ನು ಮಾಡಬಾರದು; ಭಗವಂತನ ಚಿಂತೆಯನ್ನು ಬಿಡಲೂಬಾರದು. ಭಗವಂತನ ದಯೆಯಿದ್ದರೆ ಸಕಲ ಅರಿಷ್ಟಗಳೂ ಮಾಯವಾಗುವವು.

**ಪ್ರಶ್ನೆ:-** ಭಗವನ್ನಾಮವನ್ನು ಅಖಂಡವಾಗಿ ಜಪಿಸುತ್ತಿರಬೇಕೆಂದು ದೊಡ್ಡವರು ಹೇಳುತ್ತಾರೆ. ನಾನು ಆದಷ್ಟು ಮಟ್ಟಿಗೂ ನನಗೆ ಬಿಡುವಿರುವ ಕಾಲದಲ್ಲೆಲ್ಲ ಜಪಿಸುತ್ತಲೂ ಇರುತ್ತೇನೆ. ಆದರೆ ಅದರ ಫಲವೇನೂ ಈವರೆಗೆ ಕಾಣುವದಿಲ್ಲವಲ್ಲ!

**ಉತ್ತರ:-** ಫಲವು ಕಾಣುವದಿಲ್ಲವಲ್ಲ!– ಎಂಬ ಚಿಂತೆಯು ಭಗವನ್ನಾಮದ ಜಪವು ಉತ್ತಮವಾಗಿ ಸಾಗುವದಕ್ಕೆ ಅಡ್ಡಿಯಾಗಿದೆ. ಜಪದಿಂದ ಆಗುವ ಫಲವು ಗಿಡದಲ್ಲಿ ಬಿಡುವ ಹಣ್ಣುಕಾಯಿಗಳಂತೆ ಕಾಣುವದಲ್ಲ. ನಿಮಗೆ ಮನಸ್ಸಿನಲ್ಲಿ

ದುರ್ವಾಸನೆಗಳು ತಪ್ಪಿ ಸನ್ಮಾರ್ಗದ ಹಂಬಲು ಹತ್ತಿದ್ದರೆ ಆಗಲೆ ಉತ್ತಮ ಫಲವು ದೊರಕಿದಂತೆ. ಫಲದ ಚಿಂತೆಯನ್ನು ಬಿಡಿ, ಭಗವಂತನ ಚಿಂತನೆಯನ್ನು ಹತ್ತಿಸಿಕೊಂಡು ಜಪವನ್ನು ಮಾಡಿರಿ.

## 13

### 21 - 2 - ಅಕ್ಟೋಬರ್ 1951

**ಪ್ರಶ್ನೆ:-** ದೇಹದಲ್ಲಿರುವ ಚೇತನವು ಪರಮಾತ್ಮನಿಗೆ ತೀರ ನಿಕಟ ಸಂಬಂಧವುಳ್ಳದ್ದೆಂದು ಮನವರಿಕೆ ಮಾಡಿಕೊಳ್ಳುವದು ಸಾಧ್ಯವೆ?

**ಉತ್ತರ:-** ಇದು ಸಾಧ್ಯವೆಂಬ ಕಾರಣದಿಂದಲೇ ಬಲ್ಲವರು ಅಧ್ಯಾತ್ಮ ಸಾಧನಗಳನ್ನು ಉಪದೇಶಿಸುವರು, ಶಾಸ್ತ್ರದ ಉದ್ದೇಶವೆಲ್ಲ ಈ ಸಂಬಂಧವನ್ನು ತಿಳಿಸಿಕೊಡುವದೇ ಆಗಿದೆ. ಶರೀರಾದಿಗಳಲ್ಲಿ ನಾನು ನನ್ನದು- ಎಂಬ ಅಭಿಮಾನವು ತೊಲಗುವವರೆಗೆ ಈ ಸಂಬಂಧದ ಅರಿವು ಉಂಟಾಗಲಾರದು.

**ಪ್ರಶ್ನೆ:-** ಪರಮಾತ್ಮನಿಗೆ ಇಷ್ಟು ಹತ್ತಿರದ್ದಾಗಿರುವ ಚೇತನವು ದೇಹಾದಿಗಳನ್ನು ಸಂಪಾದಿಸಿ ಬೇರೆಬೇರೆಯ ಸುಖದುಃಖಗಳನ್ನು ಅನುಭವಿಸುತ್ತಿರುವದೂ ಶಾಸ್ತ್ರಗುರು ಬೋಧಗಳಿಂದ ಮತ್ತೆ ತನ್ನ ಮೊದಲಿನ ಸ್ಥಿತಿಯನ್ನು ಸಂಪಾದಿಸುವದೂ ಅದರ ಸ್ವತಂತ್ರವ್ಯಾಪಾರವೊ, ಅಥವಾ ಮತ್ತೆ ಯಾವದಾದರೊಂದು ಪ್ರಬಲಶಕ್ತಿಗೆ ಒಳಪಟ್ಟದ್ದೊ?

**ಉತ್ತರ:-** ಜೀವನು ತನ್ನ ಪರಮಾರ್ಥಸ್ವರೂಪವನ್ನು ಅರಿಯದೆ ಇರುವದು ತನ್ನ ಅಸಡ್ಡೆಯಿಂದಲೇ. ಹೊರಗೆ ಬೆಳಕಿದ್ದರೂ ಕಾಣದೆ ಇರುವದಕ್ಕೆ ಕಿಟಕಿಬಾಗಿಲುಗಳನ್ನು ಮುಚ್ಚಿಕ್ಕೊಂಡಿರುವದೇ ಕಾರಣವಲ್ಲದೆ ಮತ್ತೇನಿದ್ದೀತು? ಲೋಕದಲ್ಲಿ ವಿದ್ಯಾಭ್ಯಾಸದಿಂದ ಜ್ಞಾನವುಂಟಾಗುವವರೆಗೆ ಆಯಾ ವಿಷಯದ ಅಜ್ಞಾನವಿರುವದೂ ಸ್ವಾಭಾವಿಕ. ಈ ಅಜ್ಞಾನ ಸ್ಥಿತಿಯಲ್ಲಿ ನಮ್ಮ ವ್ಯಾಪಾರವು ಪೂರ್ಣವಾಗಿ ನಮ್ಮ ಸ್ವಾಧೀನದಲ್ಲಿಲ್ಲ, ಇಡಿಯ ಜಗತ್ತನ್ನೇ ತನ್ನ ಶಾಸನದಲ್ಲಿಟ್ಟುಕೊಂಡಿರುವ ಪರಮೇಶ್ವರನ ಅಧೀನವಾಗಿದ್ದುಕೊಂಡೇ ನಾವು ನಮ್ಮ ವ್ಯಾಪಾರಗಳನ್ನು ನಡೆಯಿಸುತ್ತಿರುವೆವು. ''ಯತಃ ಪ್ರವೃತ್ತಿರ್ಭೂತಾನಾಮ್'' ಎಂಬ ಗೀತೋಕ್ತಿಗೆ ಇದೇ ಅಭಿಪ್ರಾಯ.

**ಪ್ರಶ್ನೆ:-** ಭಗವಂತನ ಕಡೆಗೆ ಚಿತ್ತವು ತಿರುಗುವದಕ್ಕೆ ಏನು ಮಾಡಬೇಕು?

**ಉತ್ತರ:-** ಭಗವದ್ಭಕ್ತರ ಸಂಗವನ್ನು ಮಾಡಬೇಕು, ಅವರ ನಡೆನುಡಿಗಳನ್ನು ನೋಡುತ್ತಿರಬೇಕು; ಅವರ ಉಪದೇಶವನ್ನು ಆಚರಣೆಗೆ ತರಬೇಕು.

## 14

### 21 - 3 - ನವೆಂಬರ್ 1951

**ಪ್ರಶ್ನೆ:-** ನಾನೊಬ್ಬ ಬ್ರಹ್ಮಚಾರಿ. ಬಾಲ್ಯದಲ್ಲಿ ಬಂದ ಘೋರ ವ್ಯಾಧಿಯಿಂದ ನರಳಿ ಬ್ರಹ್ಮಚರ್ಯದಲ್ಲಿಯೇ ಉಳಿದುಕೊಂಡಿರುತ್ತೇನೆ. ನನ್ನ ಅಣ್ಣ ತಮ್ಮಂದಿರಿಬ್ಬರಿಗೂ ಮದುವೆಯಾಗಿದೆ. ಈಗ ನಾನು ನಡುವಯಸ್ಸಿಗೆ ಬಂದಿರುತ್ತೇನೆ. ನಾನು ಅಧ್ಯಾತ್ಮ ಸಾಧನದಲ್ಲಿ ಮುಂದುವರಿಯುವದಕ್ಕೆ ಏನು ಮಾಡಬೇಕು?

**ಉತ್ತರ:-** ಬ್ರಹ್ಮಚರ್ಯವನ್ನು ನಿಜವಾಗಿ ''ಬ್ರಹ್ಮಚರ್ಯ''ವಾಗಿ ಮಾಡಿಕೊಳ್ಳಿರಿ. ಬ್ರಹ್ಮವೆಂದರೆ ಪರಮಾತ್ಮನು. ಶರೀರೇಂದ್ರಿಯ ಮನಸ್ಸುಗಳನ್ನು ಪರಮಾತ್ಮನ ಸೇವೆಗೆ ಮೀಸಲಾಗಿ ಇಟ್ಟುಕೊಳ್ಳಿರಿ. ಭಗವಂತನನ್ನು ಮನಸ್ಸಿನಲ್ಲಿ ಧ್ಯಾನಿಸುವದು, ವಾಕ್ಕಿನಿಂದ ಸ್ತುತಿಸುವದು, ಶರೀರದಿಂದ ಅರ್ಚಿಸುವದು, ನಮಸ್ಕರಿಸುವದು– ಈ ಬಗೆಯ ಉಪಾಯಗಳಿಂದ ಭಗವಂತನ ದಾಸರಾಗಿರಿ. ಭಗವಂತನ ಅನುಗ್ರಹಕ್ಕೆ ಭಗವದ್ಭಕ್ತರ ಸಹವಾಸವೇ ಮೂಲವು. ಅದನ್ನು ದೊರಕಿಸಿಕೊಳ್ಳಿರಿ.

**ಪ್ರಶ್ನೆ:-** ನಾನು ಈಗ ಕಾಲೇಜಿನಲ್ಲಿ ಓದುತ್ತಿದ್ದೇನೆ. ಪಾಠಗಳ ಚಿಂತನೆಗೆ ಬಹಳ ಕಾಲವು ಬೇಕಾಗುತ್ತಿದೆ. ಆದರೆ ನನಗೇನೋ ಅಧ್ಯಾತ್ಮ ಸಾಧನವನ್ನು ಮಾಡಬೇಕೆಂಬ ಆಶೆಯು ಬಲವಾಗುತ್ತಿದೆ. ಈಗ ನಾನು ಏನು ಮಾಡಬಹುದು?

**ಉತ್ತರ:-** ಮನೆಯಲ್ಲಿ ಪ್ರತಿಯೊಂದು ಪಾಠದ ಚಿಂತನೆಗೆ ಪೂರ್ವದಲ್ಲಿ ನಿಮಗೆ ಇಷ್ಟವಾದ ಭಗವಂತನ ಮೂರ್ತಿಯೊಂದನ್ನು ಚಿತ್ರಾದಿಗಳ ಮೂಲಕ ಎದುರಿಗೆ ಇಟ್ಟುಕೊಂಡು ನಮಸ್ಕರಿಸಿರಿ. ಪಾಠವನ್ನು ಓದಿದ ಮೇಲೂ ಹೀಗೆಯೇ ಮಾಡಬೇಕು. ರಜಾದಿನಗಳಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ವಿಷ್ಣುಸಹಸ್ರನಾಮವನ್ನು ಪಾರಾಯಣಮಾಡಿರಿ. ಭಗವಂತನ ನಾಮವನ್ನು ಬಿಡುವುಸಿಕ್ಕಿದಾಗಲೆಲ್ಲ ಉಚ್ಚರಿಸುತ್ತಿರಿ. ಮುಂದೆ ನಿಮ್ಮ ಕಾಲೇಜಿನ ಅಭ್ಯಾಸವು ಕಳೆದಂತೆ ನಿಮಗೆ ವಿರಾಮವು ಹೆಚ್ಚಾಗಿ ಸಿಕ್ಕುವುದು. ಆದರೆ ಈಗ ವ್ಯರ್ಥಕಾಲಕ್ಷೇಪವನ್ನು ಮಾಡುತ್ತಿಲ್ಲವೆ? ನೀವೇ ಪರೀಕ್ಷೆಮಾಡಿಕೊಳ್ಳಿರಿ. ಮಾಡುತ್ತಿದ್ದರೆ ಅದರ ಸ್ಥಾನದಲ್ಲಿ ಅಧ್ಯಾತ್ಮಪ್ರಕಾಶ ಪತ್ರಿಕೆಯಲ್ಲಿರುವ ಲೇಖನಗಳನ್ನು ಓದಿ ಮನನಮಾಡುವ ಅಭ್ಯಾಸವನ್ನು ಇಟ್ಟುಕೊಳ್ಳಿರಿ. ಸಾಧುಗಳು, ಸಂನ್ಯಾಸಿಗಳು ಅಥವಾ ಮತ್ತೆ ಯಾರಾದರೂ ಭಗವದ್ಭಕ್ತರು ನಿಮ್ಮ ಕಣ್ಣಿಗೆ ಬಿದ್ದರೆ ಅವರ ಸದುಪದೇಶಗಳಿಗೆ ಕಿವಿಗೊಡುವದನ್ನು ಕಲಿತುಕೊಳ್ಳಿರಿ.

## 15

### 21 - 4-ಡಿಸೆಂಬರ್ 1951

**ಪ್ರಶ್ನೆ:-** ಸದ್ಭಾವನೆಯಿಂದ ಹೊರಗಿನ ಪ್ರಪಂಚವನ್ನು ಹಿತಕರವಾಗುವಂತೆ ಮಾರ್ಪಡಿಸಿಕೊಳ್ಳಬಹುದೆಂದು ಪತ್ರಿಕೆಯ ಒಂದು ಲೇಖನದಲ್ಲಿ ಬರೆದಿತ್ತು. ಯಾವ ಮಂತ್ರವನ್ನು ಜಪಮಾಡಿ ಯಾವ ದೇವರನ್ನು ಹೇಗೆ ಧ್ಯಾನ ಮಾಡುವದರಿಂದ ಸದ್ಭಾವನೆಯನ್ನು ಬೆಳೆಯಿಸಿಕೊಳ್ಳಬಹುದೆಂಬುದನ್ನು ದಯವಿಟ್ಟು ತಿಳಿಸುವಿರಾ?

**ಉತ್ತರ:-** ದೇವರು ಒಬ್ಬನೇ ಇರುವದರಿಂದ ಯಾವ ದೇವರನ್ನು ಎಂಬ ಪ್ರಶ್ನೆ ಹುಟ್ಟುವದಿಲ್ಲ. ಜಗತ್ತಿಗೆಲ್ಲ ಒಬ್ಬನೇ ದೇವನು. ಆತನು ಸಚ್ಚಿದಾನಂದಸ್ವರೂಪನಾಗಿರುತ್ತಾನೆ. ಎಲ್ಲೆಲ್ಲಿಯೂ ವ್ಯಾಪಿಸಿರುತ್ತಾನೆ. ನಿಮ್ಮ ಹೃದಯದಲ್ಲಿಯೇ ಇರುತ್ತಾನೆ; ನಿಮ್ಮ ಸುತ್ತುಮುತ್ತಲೂ ಇರುತ್ತಾನೆ. ಅವನಿಗೆ ಬಗೆಬಗೆಯ ಆಕಾರ, ನಾಮ– ಮುಂತಾದವುಗಳೂ ಇರಬಹುದು; ಆದರೆ ಆಕಾರ ಗಳಾಗಲಿ ನಾಮಗಳಾಗಲಿ ತಾವು ತಾವೇ ಮುಖ್ಯವಲ್ಲ. ಆ ದೇವದೇವನನ್ನು ಭಾವನೆಗೆ ತಂದುಕೊಳ್ಳುವದಕ್ಕೆ ನಿಮಗೆ ಯಾವ ನಾಮವು ಯಾವ ರೂಪವು ಸಹಾಯಕವಾಗುವದೋ ಅದನ್ನು ಉಪಯೋಗಿಸಿರಿ. ಹೆಚ್ಚಿಗೆಯ ವಿಷಯಗಳನ್ನು ಗುರುಗಳ ಮೂಲಕ ತಿಳಿದುಕೊಳ್ಳಬೇಕು. ಪ್ರಪಂಚವೆಲ್ಲವೂ ಭಗವಂತನೆಂಬ ಸದ್ಭಾವನೆಯನ್ನು ಮಾಡುವದಕ್ಕೆ ಮೊದಲು ಪ್ರಯತ್ನಿಸಿರಿ.

**ಪ್ರಶ್ನೆ:-** ದೇವತಾರ್ಚನೆಯನ್ನು ಮಾಡುವದನ್ನು ಈ ನಡುವೆ ಕೈಬಿಟ್ಟು ಬಿಟ್ಟಿದ್ದೆ (?) ವರ್ಣಾಶ್ರಮಧರ್ಮದ ವಿಷಯದಲ್ಲಿ ಪತ್ರಿಕೆಯಲ್ಲಿ ಬರೆದಿದ್ದನ್ನು ನೋಡಿದ ಮೇಲೆ ಮತ್ತೆ ಪ್ರಾರಂಭಿಸಿರುತ್ತೇನೆ. ಆದರೆ ಮಂತ್ರವು ಮರೆತು ಹೋಗಿದೆ; ನನ್ನ ಆರೋಗ್ಯವೂ ಕೆಡುತ್ತಾ ಇರುವದರಿಂದ ದೇವತಾರ್ಚನೆಯನ್ನು ಬಿಟ್ಟಿರುತ್ತೇನೆ. ಈ ವಿಷಯದಲ್ಲಿ ತಮ್ಮ ಬುದ್ಧಿವಾದವನ್ನು ಅಪೇಕ್ಷಿಸುತ್ತೇನೆ.

**ಉತ್ತರ:-** ಬ್ರಾಹ್ಮಣನು ಮಂತ್ರವನ್ನು ಮರೆಯಬಾರದು. ಯಾವ ಕಾರಣ ದಿಂದಲೂ ವೇದವನ್ನು ಕೈಬಿಡಬಾರದು; ಬಿಟ್ಟರೆ ದೋಷವುಂಟು ಎಂದು ಸ್ಮೃತಿಗಳು ಹೇಳುತ್ತವೆ. ಪ್ರಧಾನವಾದ ಮಂತ್ರಗಳನ್ನು ಶ್ರಮಪಟ್ಟಾದರೂ ಕಲಿತುಕೊಳ್ಳಿರಿ. ವೇದವೇ ಪರಮಾತ್ಮನ ಒಂದು ವಿಭೂತಿಯಾಗಿರುತ್ತದೆ. ದೇವತಾರ್ಚನೆಯಿಂದ ಎಂದಿಗೂ ಆರೋಗ್ಯವು ಕೆಡುವದಿಲ್ಲ. ಹಿತಮಿತವಾದ ಆಹಾರವನ್ನು ಪರಮೇಶ್ವರನಿಗೆ ಅರ್ಪಿಸಿ ಪ್ರಸಾದವನ್ನು ಸ್ವೀಕರಿಸುತ್ತಾ ಬಂದರೆ ಆತನ ಅನುಗ್ರಹದಿಂದ ಅವಶ್ಯವಾಗಿ ಆರೋಗ್ಯವು ಉತ್ತಮಗೊಳ್ಳುವದು.

**ಪ್ರಶ್ನೆ :–** ಗುರುಚರಿತ್ರೆಯನ್ನು ಓದುವಾಗ ಬೆಳಗ್ಗೆ ಸಾಯಂಕಾಲ ಏಳು ಏಳು ಸಾವಿರ, ಮಲಗುವ ಮುಂಚೆ ಮೂರು ಸಾವಿರ ರಾಮನಾಮವನ್ನು ಜಪಿಸಬೇಕೆಂದು ನಿಯಮವನ್ನು ಹೇಳುತ್ತಾರೆ. ಆದರೆ ನನ್ನ ಕೆಲಸದಲ್ಲಿ ಅದಕ್ಕೆ ವಿರಾಮವಿಲ್ಲ. ಹೇಗೆ ಮಾಡಲಿ?

**ಉತ್ತರ:-** ಪ್ರತಿದಿನವೂ ಭಗವಂತನ ಸ್ಮರಣೆಯನ್ನು ತಪ್ಪದೆ ಮಾಡಿದರೆ ಅಲ್ಪಸಂಖ್ಯೆಯ ಜಪದಿಂದಲೇ ಭಗವಂತನು ಪ್ರಸನ್ನನಾಗುತ್ತಾನೆ. ನಿಯಮಕ್ಕಿಂತಲೂ ಭಾವನೆಯು ಹೆಚ್ಚಿನದು. ದಿನಕ್ಕೆ ಮೂರು ಸಾವಿರಕ್ಕೆ ಕಡಿಮೆಯಿಲ್ಲದೆ ನೀವು ಜಪಮಾಡಬಹುದೆಂದು ತೋರುತ್ತದೆ. ಕೆಲಸದ ವಿರಾಮದಲ್ಲಿ ನಾಮಸ್ಮರಣೆ ಮಾಡಲಾಗುವದಿಲ್ಲವೆ? ಪ್ರಯತ್ನಿಸಿ ನೋಡಿರಿ.

## 16

### 21 - 5 - ಜನವರಿ 1952

**ಪ್ರಶ್ನೆ:-** ನಾನು ದೇವರಪೂಜೆಯನ್ನು ಈಚೆಗೆ ಕೈಬಿಟ್ಟಿದ್ದೇನೆಂದು ತಿಳಿಸಿದ್ದೆನಷ್ಟೆ; ತಮ್ಮ ಬುದ್ಧಿವಾದದಂತೆ ಈಚೆಗೆ ಮತ್ತೆ ಪ್ರಾರಂಭಿಸಿರುತ್ತೇನೆ. ಆದರೆ ಇಲ್ಲಿ ಒಂದು ಶಂಕೆ. ಹೊಳೆನರಸೀಪುರದ ನರಸಿಂಹಸ್ವಾಮಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಮಾಡಿದ ಪೂಜೆಯಿಂದ ಮನಸ್ಸಿಗೆ ಸ್ವಲ್ಪಮಟ್ಟಿಗೆ ಶಾಂತಿಯೇನೋ ದೊರೆಯುತ್ತಿದೆ. ಆದರೆ ಮನೆಯಲ್ಲಿ ದೇವರ ಪೂಜೆ ಮಾಡಿದಾಗಲೆಲ್ಲ ಆರೋಗ್ಯವು ಕೆಡುತ್ತಾ ಬರುತ್ತಿದೆ. ಇದಕ್ಕೆ ಹೇಗೆ ಮಾಡಲಿ?

**ಉತ್ತರ:-** ಮನಸ್ಸಿಗೆ ಶಾಂತಿ ದೊರೆಯುವದಕ್ಕೂ ವಿಕ್ಷೇಪವುಂಟಾಗುವದಕ್ಕೂ ಹೊಳೆನರಸೀಪುರವಾಗಲಿ ಮನೆಯಾಗಲಿ ಕಾರಣವಲ್ಲ; ಈಶ್ವರಭಾವನೆಯನ್ನು ಅಭ್ಯಾಸಮಾಡಿ ಎಲ್ಲಿ ಪೂಜೆ ಮಾಡಿದರೂ ಅಲ್ಲೆಲ್ಲಾ ಮನಸ್ಸಿಗೆ ಶಾಂತಿಯೇ ದೊರಕುತ್ತದೆ. ಸದ್ಯಕ್ಕೆ ನಿಮ್ಮ ಮನೆಯಲ್ಲಿ ಪೂಜೆಯನ್ನು ಪ್ರಾರಂಭಿಸುವಾಗ 'ಇದು ನಮ್ಮ ಮನೆ' ಎಂಬ ಭಾವನೆಯನ್ನು ಪೂರ್ಣವಾಗಿ ಬಿಟ್ಟುಬಿಡಿರಿ. ಭಗವಂತನು ಎಲ್ಲೆಲ್ಲಿಯೂ ತನ್ನ ಸಾನ್ನಿಧ್ಯವನ್ನಿಟ್ಟುಕೊಂಡಿರುತ್ತಾನೆ – ಎಂಬುದನ್ನೇ ಮನಸ್ಸಿಗೆ ತಂದುಕೊಳ್ಳಿರಿ. ಎಲ್ಲವೂ ಹೊಳೆನರಸೀಪುರವೇ ಆಗಿಬಿಡುವದು.

**ಪ್ರಶ್ನೆ:-** ನಾನು ಅಲ್ಲಲ್ಲಿ ತೀರ್ಥಯಾತ್ರೆಯನ್ನು ಮುಗಿಸಿಕೊಂಡು ಈಗ ತಾನೆ ಊರಿಗೆ ಬಂದಿರುತ್ತೇನೆ. ಆದರೆ ತೀರ್ಥಯಾತ್ರೆಯಲ್ಲಿದ್ದಾಗ ಇದ್ದ ಮನಸ್ಸಿನ ಉತ್ಸಾಹವು ಈಗ ತೋರುವುದಿಲ್ಲ ; ಇದಕ್ಕೇನು ಮಾಡಲಿ? ನನಗೆ ಮತ್ತೆ ಯಾತ್ರೆ ಹೊರಡಲು ದ್ರವ್ಯಾನುಕೂಲವಿಲ್ಲ, ಹೇಗೆ ಮಾಡಲಿ?

**ಉತ್ತರ:-** ಯಾತ್ರೆಯಲ್ಲಿ ನಿಮಗಿದ್ದ ಮನೋಭಾವನೆಯನ್ನು ಈಗಲೂ ಯಾವ ಧನವ್ಯಯವೂ ಇಲ್ಲದೆ ನೀವು ಮನಸ್ಸಿಗೆ ತಂದುಕೊಳ್ಳುತ್ತಿರಬಹುದು. ''ಇಗೊ, ಯಾತ್ರೆಗೆ ಹೊರಟಿದ್ದೇನೆ, ಇಗೋ ಇಂಥ ಕ್ಷೇತ್ರಕ್ಕೆ ಬಂದೆನು, ದೇವರ ದರ್ಶನ ವಾಯಿತು''– ಎಂಬಿಂಥ ಭಾವನೆಗಳನ್ನು ಒಂದಾಗುತ್ತಲೊಂದು ನೀವು ಮನಸ್ಸಿನಲ್ಲಿ ಬರುವಂತೆ ಮಾಡಿಕೊಳ್ಳಿರಿ. ನಿಮ್ಮ ಊರಿಗೆ ಮತ್ತೆ ಹಿಂತಿರುಗಿ ಬಂದೆನೆಂಬ ಭಾವನೆಗೆ ಅವಕಾಶವನ್ನೇ ಕೊಡಬೇಡಿರಿ ''ಇವೆಲ್ಲವೂ ಪವಿತ್ರವಾದ ಕ್ಷೇತ್ರಗಳು. ಇಗೋ, ಈ ಕ್ಷೇತ್ರನಾಥನ ಅನುಗ್ರಹದಿಂದ ನನಗೆ ಎಲ್ಲೆಲ್ಲಿಯೂ ದೇವರ ದರ್ಶನ, ಪರಮೇಶ್ವರನ ನಾಮದ ಜಪ, ಭಗವನ್ಮಂಗಲಮೂರ್ತಿಯ ದರ್ಶನ – ಇವು ತಪ್ಪದೆ ಆಗುತ್ತಿವೆ'' – ಎಂಬೀ ಭಾವನೆಯನ್ನು ದಿನದಿನಕ್ಕೂ ಬೆಳೆಯಿಸಿಕೊಳ್ಳಿರಿ. ನೀವು ಕಂಡದ್ದೆಲ್ಲವೂ ಕ್ಷೇತ್ರರೂಪವೇ ಆಗಿಬಿಡುವದು.

## 17

**21 - 6 - ಫೆಬ್ರವರಿ 1952**

**ಪ್ರಶ್ನೆ:-** ಬರಿಯ ಪ್ರಣವವನ್ನು ನಾನು ಜಪಮಾಡಬಹುದೆ? ನನಗೆ ಬೇಕಾದ ಮಂತ್ರಕ್ಕೆ ಓಂಕಾರವನ್ನು ಸೇರಿಸಿಕೊಂಡು– ಉದಾಹರಣೆಗೆ ''ಓಂ ದತ್ತಾಯ ನಮಃ'' ಎಂದು ನಿತ್ಯವೂ ಜಪಮಾಡಬಹುದೆ?

**ಉತ್ತರ:-** ಜಪಕ್ಕೆ ಮಂತ್ರವನ್ನು ನಿಮ್ಮ ಗುರುಗಳಿಂದ ಉಪದೇಶ ಮಾಡಿಸಿಕೊಳ್ಳುವದು ಒಳ್ಳೆಯದು. ಗುರುಗಳೆಂದರೆ ಆಯಾ ಮಂತ್ರವನ್ನು ದೀರ್ಘ ಕಾಲ ಶ್ರದ್ಧಾವಿಶ್ವಾಸಗಳಿಂದ ಜಪಿಸಿ ದೇವತೆಯನ್ನು ಸಾಕ್ಷಾತ್ಕಾರ ಮಾಡಿಕೊಂಡವರು. ಬರಿಯ ಓಂಕಾರವು ಸರ್ವವೇದಗಳ ಸಾರವೆಂಬ ಗುರುತು. ಅದರ ಜಪದಿಂದ ನಿಜವಾದ ಪೂರ್ಣಪ್ರಯೋಜನವು ಬೇಕಾದರೆ ವೇದಾಧ್ಯಯನವನ್ನು ಮಾಡಿದವನು ಪರಮಹಂಸನಾದ ಮೇಲೆ ಅದರಲ್ಲಿ ವೇದಗಳನ್ನೆಲ್ಲ ಪ್ರವೇಶ ಮಾಡಿಸಿಕೊಂಡು ಜಪಿಸಬೇಕಾಗುವದು. ಪ್ರಣವವನ್ನು ಪರಮಾತ್ಮನ ಪ್ರತೀಕವಾಗಿ ಅಥವಾ ವಾಚಕವಾಗಿ ಅಥವಾ ಪರಮಾತ್ಮ ಸ್ವರೂಪವಾಗಿ ಮೂರು ವಿಧವಾಗಿ ಅಧಿಕಾರಿಗಳು ಭಾವಿಸುತ್ತಾರೆಂಬುದು ಭಾಷ್ಯದಲ್ಲಿ ಕಂಡುಬರುತ್ತದೆ. ಅದಕ್ಕಿಂತಲೂ ಸಾಮಾನ್ಯರಾದ ನಮ್ಮಂಥವರು ಪರಮೇಶ್ವರನ ಸಾಮಾನ್ಯವಾದ ನಾಮವನ್ನು ಸ್ಮರಿಸುವದು ಶೀಘ್ರಫಲಕಾರಿ ಎಂದು ತೋರುತ್ತದೆ.

**ಪ್ರಶ್ನೆ:-** ಮಂತ್ರಜಪಕ್ಕೆ ಮಡಿಮೈಲಿಗೆಗಳ, ಕಾಲಭೇದಗಳ, ಆಸನಾದಿಗಳ ನಿಯಮವಿಲ್ಲವೆಂದು ಕೆಲವರು, ಇದೆ ಎಂದು ಕೆಲವರು– ಹೀಗೆ ಮತಭೇದವಿದೆ. ನಿಮ್ಮ ಅಭಿಪ್ರಾಯವೇನು?

**ಉತ್ತರ:-** ಆಯಾ ಮಂತ್ರದ ವಿಷಯವನ್ನು ಎಲ್ಲಿ ಹೇಳಿದೆಯೋ ಆ ಶಾಸ್ತ್ರವನ್ನೇ ಆ ವಿಷಯಕ್ಕೆ ಪ್ರಮಾಣವೆಂದು ಹಿಡಿಯಬೇಕು. ಪರಮಾತ್ಮನ ನಾಮದ ಸ್ಮರಣೆಯು ಹೇಗೆ ಮಾಡಿದರೂ ಫಲಕಾರಿ ಎಂಬದರಲ್ಲಿ ಸಂಶಯವಿಲ್ಲ. ಅರಿಯದೆ ಮುಟ್ಟಿದ ಬೆಂಕಿಯು ಸುಟ್ಟೇಸುಡುವದಷ್ಟೆ. ಆದರೆ ನಾಮಸ್ಮರಣೆಯನ್ನು ಹೇಗಾದರೂ ಮಾಡಬಹುದೆಂಬ ಹೆಮ್ಮೆಯಿಂದ ಮಡಿಮೈಲಿಗೆ ಮುಂತಾದವುಗಳನ್ನು ತಿರಸ್ಕರಿಸುವದು ಸರಿಯಲ್ಲ. ಸಹಕಾರಿ ಸಾಮಗ್ರಿಯೂ ಸೇರಿದರೆ ಸಾಧನವು ವೀರ್ಯವತ್ತರ ವಾಗುವದಿಲ್ಲವೆ?

## 18

### 21 - 7 - ಮಾರ್ಚ್ 1952

**ಪ್ರಶ್ನೆ:-** ಪಾರಾಯಣವನ್ನು ಹೇಗೆ ಮಾಡಬೇಕು? ಒಂದೇ ಗ್ರಂಥವನ್ನು ಹಲವು ಸಾರಿ ಪಾರಾಯಣ ಮಾಡುವದಕ್ಕಿಂತಲೂ ಬೇರೆಬೇರೆಯ ಗ್ರಂಥಗಳನ್ನು ಇಟ್ಟುಕೊಂಡರೆ ತಪ್ಪೇನು?

**ಉತ್ತರ:-** ಪಾರಾಯಣ ಗ್ರಂಥವು ಮನಸ್ಸಿನಲ್ಲಿ ಉತ್ತಮ ಭಾವನೆಯನ್ನು ಎಬ್ಬಿಸುವದಾಗಿರಬೇಕು. ಗ್ರಂಥದಲ್ಲಿ ಸ್ವಲ್ಪಭಾಗವನ್ನೇ ಆದರೂ ಚಿಂತೆಯಿಲ್ಲ, ಅರ್ಥಾನುಸಂಧಾನದಿಂದ ಕೂಡಿ ಅದರಲ್ಲಿಯೇ ನೆಟ್ಟಮನಸ್ಸಿನಿಂದ ಪಠಿಸಬೇಕು. ಉತ್ತಮವಾದ ಪಾರಾಯಣ ಯೋಗ್ಯಗ್ರಂಥದಲ್ಲಿ ಅನೇಕ ಗಹನವಾದ ತತ್ತ್ವಗಳು ಅಡಗಿರುತ್ತವೆ. ಮತ್ತೆಮತ್ತೆ ಅದನ್ನೇ ಪಠಿಸುವದರಿಂದ ಒಂದೊಂದು ಸಲಕ್ಕೆ ಒಂದೊಂದು ವಿಷಯವು ಹೊಸದಾಗಿ ಮನಸ್ಸಿನಲ್ಲಿ ಮಿಂಚುತ್ತದೆ. ಭಕ್ತಿಗೆ ಏಕನಿಷ್ಠೆಯು ಅತ್ಯವಶ್ಯವಾದ್ದರಿಂದ ಪಾರಾಯಣ ಗ್ರಂಥವನ್ನು ಬದಲಾಯಿಸ ದಿರುವದೇ ಮೇಲು.

**ಪ್ರಶ್ನೆ:-** ವೇದಮಂತ್ರವನ್ನು ಸ್ವರವರ್ಣಕ್ಕೆ ಲೋಪಬಾರದಂತೆ ಪಠಿಸಬೇಕೆಂದೂ ತಪ್ಪಿದರೆ ಅದರಿಂದ ಹಾನಿಯಾಗುವದೆಂದೂ ಕೆಲವರು ಹೇಳುತ್ತಾರೆ. ಮತ್ತೆ ಕೆಲವರು ಬ್ರಾಹ್ಮಣನಾದವನು ವೇದವನ್ನು ಎಂದಿಗೂ ಬಿಡಬಾರದೆನ್ನುತ್ತಾರೆ. ಈಗ್ಗೆ ಬ್ರಾಹ್ಮಣರಾದವರು ತಪ್ಪುತಪ್ಪಾಗಿ ವೇದವನ್ನು ಪಠಿಸುತ್ತಿರಬೇಕೊ, ಅಥವಾ ಸ್ವರವರ್ಣಲೋಪಗಳ ಭಯದಿಂದ ಬಿಟ್ಟುಬಿಡಬೇಕೊ?

**ಉತ್ತರ:-** ಮುಖ್ಯವಾದ ಕೆಲವು ಮಂತ್ರಗಳನ್ನು ಬಲ್ಲವರಿಂದ ಸರಿಯಾಗಿ ಹೇಳಿಸಿಕೊಂಡು ಅವುಗಳಷ್ಟನ್ನೇ ಸರಿಯಾಗಿ ಪಾಠಮಾಡಬೇಕು. ಅವಕಾಶ ಸಿಕ್ಕಿದರೆ

ಹೆಚ್ಚು ಕಲಿಯಬಹುದು. ಕೆಲವು ಮಂತ್ರಗಳನ್ನೇ ಅರ್ಥಾನುಸಂಧಾನ ಪೂರ್ವಕವಾಗಿ ಹೇಳಿಕೊಂಡರೂ ಬ್ರಾಹ್ಮಣ್ಯವು ಉಳಿಯುತ್ತದೆ. ಶ್ರದ್ಧೆ ಮಾತ್ರ ಇರಬೇಕು.

**ಪ್ರಶ್ನೆ:-** ದೇಶದೇಶಗಳಲ್ಲಿ ಆಚಾರವು ಭಿನ್ನಭಿನ್ನವಾಗಿರುತ್ತದೆ. ಈಗಿನ ನಮ್ಮ ಯುವಕರು ಯಾವ ಆಚಾರವನ್ನೂ ಮನಸ್ಸಿಗೆ ತಂದುಕೊಳ್ಳದೆ ಸ್ವೇಚ್ಛೆಯಿಂದ ನಡೆಯುತ್ತಿದ್ದಾರೆ. ಎಲ್ಲಾ ದೇಶದವರೂ ಎಲ್ಲಾ ಕಡೆಯಲ್ಲಿಯೂ ಇರುವ ಈ ಕಾಲದಲ್ಲಿ ಆಚಾರದ ವಿಷಯಕ್ಕೆ ನಾವು ಹೇಗೆ ನಡೆದುಕೊಳ್ಳಬೇಕು?

**ಉತ್ತರ:-** ಶಾಸ್ತ್ರೋಕ್ತವಾದ ಆಚಾರವು ಎಲ್ಲಿಯೂ ಬದಲಾಯಿಸಿಲ್ಲ. ಮಿಕ್ಕ ಆಚಾರಗಳನ್ನು ಆಯಾ ದೇಶಪದ್ಧತಿಯಂತೆ ನಡೆಸಬೇಕು. ತಂದೆತಾಯಿಗಳು ಆಚಾರವಂತರಾಗಿ ಅದರ ಬೆಲೆಯನ್ನು ಮಕ್ಕಳಿಗೆ ಮೊದಲಿಂದಲೇ ತಿಳಿಸಿಕೊಟ್ಟಿದ್ದರೆ ಅವರೂ ಆಚಾರವನ್ನು ಕಾಪಾಡಿಕೊಳ್ಳುವರು. ಕಾಲ ಮಹಿಮೆಯಿಂದ ಸ್ವಲ್ಪ ಆಚಾರವು ತಪ್ಪಿದರೂ ತಿಳಿವಳಿಕೆ ಬಂದಮೇಲೆ ಮತ್ತೆ ಸರಿಪಡಿಸಿಕೊಳ್ಳುವರು.

## 19

### 21 - 9 - ಮೇ 1952

**ಪ್ರಶ್ನೆ:-** ಅಧ್ಯಾತ್ಮಪ್ರಕಾಶದಂಥ ಪತ್ರಿಕೆಗಳನ್ನು ಹೇಗೆ ಉಪಯೋಗಿಸಬೇಕು? ಇವುಗಳು ತಿಂಗಳಿಗೊಂದು ಸಂಚಿಕೆಯಂತೆ ಬರುತ್ತವೆ; ಒಂದು ಸಲ ಓದಿದ ಮೇಲೆ ಮತ್ತೊಂದು ಸಂಚಿಕೆಯು ಬರುವವರೆಗೆ ಏನು ಮಾಡಬೇಕು?

**ಉತ್ತರ:-** ಅಧ್ಯಾತ್ಮ ಗ್ರಂಥಗಳೂ ಪತ್ರಿಕೆಗಳೂ ವರ್ತಮಾನಪತ್ರಿಕೆಗಳಂತೆ ಕುತೂಹಲನಿವೃತ್ತಿಗಾಗಿ ಒಂದು ಸಲ ಓದತಕ್ಕವುಗಳಲ್ಲ. ಅಧ್ಯಾತ್ಮ ವಿಚಾರವೂ ಅಧ್ಯಾತ್ಮ ಸಾಧನವೂ ಸತತವಾಗಿ ನಡೆಯಬೇಕಾಗಿರುತ್ತವೆ. ಒಂದೊಂದು ಲೇಖನವನ್ನು ಓದಿದ ಮೇಲೂ ಈ ಲೇಖನದಲ್ಲಿ ಯಾವ ಸಿದ್ಧಾಂತವನ್ನು ಕುರಿತ ಪ್ರತಿಪಾದನೆಯಿದೆ? ಅಥವಾ ಯಾವ ಸಾಧನದ ಉಪದೇಶವಿದೆ? ಎಂದು ನಿಮಗೆ ನೀವೇ ಪ್ರಶ್ನೆಯನ್ನು ಹಾಕಿಕೊಳ್ಳಬೇಕು. ಇದಕ್ಕೆ ಸರಿಯಾದ ಉತ್ತರವು ದೊರೆಯದೆ ಇದ್ದರೆ ಮತ್ತೊಮ್ಮೆ ಲೇಖನವನ್ನು ಸಾವಧಾನವಾಗಿ ಓದಬೇಕು. ಓದಿದ ಬಳಿಕ ವಿಷಯವು ಗೊತ್ತಾದರೆ ನನಗೆ ಈ ವಿಷಯವು ಮನದಟ್ಟಾಗಿದೆಯೆ? ಈ ಸಾಧನವನ್ನು ನಾನು ಮಾಡಲಾದೀತೆ? ಎಂಬುದನ್ನು ತಿಳಿಯುವದಕ್ಕೆ ಪ್ರಯತ್ನಿಸಬೇಕು. ಇದು ಪರಿಪೂರ್ತಿಯಾಗುವದಕ್ಕೆ ಒಂದು ತಿಂಗಳೂ ಬೇಕಾಗಬಹುದು; ಅಥವಾ ಹೆಚ್ಚಿಗೆಯ ಕಾಲವೇ

ಬೇಕಾಗಬಹುದು. ನಿಮಗೆ ವಿಚಾರಗಳ ಅಥವಾ ಸಾಧನೆಗಳ ವಿಷಯದಲ್ಲಿ ಏನಾದರೂ ತೊಡಕಾದರೆ ಆ ವಿಷಯಕ್ಕೆ ಬರೆದು ತಿಳಿದುಕೊಳ್ಳಬಹುದು.

**ಪ್ರಶ್ನೆ:-** ಮೊನ್ನೆ ಆಗಿಹೋದ ಸೂರ್ಯಗ್ರಹಣದಲ್ಲಿ ಆಚರಿಸಬೇಕಾಗಿದ್ದ ತರ್ಪಣಾದಿಗಳಿಗೆ ಪ್ರತ್ಯಕ್ಷಪ್ರಮಾಣವು ಪ್ರಧಾನವೊ, ಶಾಸ್ತ್ರವೇ ಪ್ರಮಾಣವೊ? ಗ್ರಹಣವು ಕಂಡರೆ ಆಚರಿಸಿರಿ ಎಂದು ಪತ್ರಿಕೆಗಳಲ್ಲಿ ಪ್ರಕಟಿಸಿದ್ದ ಬರಹಗಳಿಂದ ನನಗೆ ಸಂಶಯವುಂಟಾಗಿದೆ.

**ಉತ್ತರ:-** ದೇಶಕಾಲಾಚಾರಗಳನ್ನು ಆಯಾ ದೇಶಕಾಲಗಳಲ್ಲಿರುವ ಶಿಷ್ಟರ ಉದಾಹರಣೆಯಿಂದ ತಿಳಿದುಕೊಳ್ಳಬೇಕು. ಪ್ರಕೃತ ಗ್ರಹಣಕಾಲದಲ್ಲಿ ಮಾಡುವ ತರ್ಪಣಾದಿಗಳು ಶಾಸ್ತ್ರೀಯವೇ ಸರಿ. ಆದರೆ ಗ್ರಹಣವೇ ಆ ಕರ್ಮಗಳಿಗೆ ನಿಮಿತ್ತವಾದ್ದರಿಂದಲೂ ಗ್ರಹಣವು ದೃಷ್ಟವಾಗತಕ್ಕದ್ದಾದ್ದರಿಂದಲೂ ಗ್ರಹಣವನ್ನು ಕಂಡೇ ಆ ಕರ್ಮಗಳನ್ನು ಮಾಡಬೇಕಾದದ್ದು. ಗ್ರಹಣದ ವಿಷಯಕ್ಕೆ ವಿವಾದವಿಲ್ಲದ ಸಂದರ್ಭದಲ್ಲಿ ಮೋಡವೇ ಮುಂತಾದ ಕಾರಣಗಳಿಂದ ಅದು ಕಾಣಬರದಿದ್ದರೂ ಜ್ಯೋತಿಃಶಾಸ್ತ್ರಜ್ಞರ ಅಭಿಪ್ರಾಯವನ್ನೇ ಪ್ರಮಾಣವಾಗಿ ಹಿಡಿಯಬೇಕು.

## 20

### 21 - 10 - ಜೂನ್ 1952

**ಪ್ರಶ್ನೆ:-** ಹಗಲೂರಾತ್ರಿ ದೇವರಮೇಲಿನ ಯೋಚನೆಯೇ ಹಿಡಿದಿರುತ್ತದೆ; ಆದರೂ ಒಂದು ಮಾರ್ಗದಲ್ಲಿ ಹೋಗಲು ಸಾಧ್ಯವಿಲ್ಲವಾಗಿದೆ. ಎಷ್ಟೋ ಧಾರ್ಮಿಕ ಗ್ರಂಥಗಳನ್ನು ಓದಿದೆ; ಆದರೇನು, ಮನಸ್ಸಿಗೆ ಶಾಂತಿಯಿಲ್ಲ. ನನಗೆ ಶಂಕರನ ಮೂರ್ತಿಯ ಮೇಲೆ ಮಮತೆ, ಅದನ್ನೇ ಇಷ್ಟಲಿಂಗದೊಳಗೆ ಕಾಣಲು ಯತ್ನಿಸುತ್ತಿದ್ದೇನೆ. ಸಾವಿರ ಜಪ ಮಾಡಲು ಹೋದರೆ ಕಣ್ಣು ಉರಿಯುವದು, ತಲೆನೋಯುವದು, ನಾನು ಭಕ್ತಿಮಾರ್ಗದಲ್ಲಿ ಮುಂದುವರಿಯುವದಕ್ಕೆ ಮುಖ್ಯ ಕಾರ್ಯವು ಯಾವದು?

**ಉತ್ತರ:-** ಹಲವು ಗ್ರಂಥಗಳನ್ನು ಮೊದಲು ಓದಿದ್ದು ಸರಿಯಾಯಿತು. ಈಗ ನಿಮಗೆ ಮಮತೆಯಿರುವ ಶಂಕರನ ವಿಚಾರವಾಗಿಯೇ ಓದಿರಿ, ಶ್ರವಣ ಮಾಡಿರಿ, ಧ್ಯಾನ ಮಾಡಿರಿ, ಮನನ ಮಾಡಿರಿ. ಆ ಶಂಕರನೇ ನಿಮಗೆ ದಾರಿಯನ್ನು ಕಾಲಕ್ರಮದಲ್ಲಿ ತೋರಿಸಿಕೊಡುವನು.

ಇಷ್ಟಲಿಂಗಪೂಜೆ, ಪಂಚಾಕ್ಷರಿಯ ಜಪ– ಇವುಗಳನ್ನು ಮಾಡುತ್ತಿರುವದು

ಯುಕ್ತವೇ ಆಗಿದೆ; ಪೂಜೆ, ಜಪ–ಈ ಎರಡರಲ್ಲಿಯೂ ಭಾವವು ಮುಖ್ಯ ವಾಗಿರುತ್ತದೆ. ನಾನು ಪೂಜೆ ಮಾಡುತ್ತಿದ್ದೇನೆ, ಜಪ ಮಾಡುತ್ತಿದ್ದೇನೆ– ಎಂಬ ಅರಿವೂ ಇಲ್ಲದಂತೆ ನಿಮ್ಮ ಧ್ಯೇಯವಾದ ಶಂಕರನನ್ನೇ ಚಿಂತನೆಮಾಡುವದನ್ನು ಅಭ್ಯಾಸ ಮಾಡಿರಿ. ಸಾವಿರ ಜಪವೆಂಬ ಲೆಕ್ಕಕ್ಕೆ ಅಷ್ಟು ಬೆಲೆಯನ್ನು ಕೊಡಬೇಡಿ; ಶಂಕರನಲ್ಲಿರುವ ಭಾವಕ್ಕೇ ಬೆಲೆಯನ್ನು ಕೊಡಿರಿ. ಆಗ ಜಪವು ತಲೆನೋವಿಗೆ ಕಾರಣವಾಗುವದಿಲ್ಲ. ವಿರಾಮವು ದೊರಕಿದಾಗಲೆಲ್ಲ, ವ್ಯವಹಾರದಲ್ಲೆಲ್ಲ, ಮನಸ್ಸಿನಲ್ಲಿ ಈ ಜಪವನ್ನು ನಡೆಯಿಸುವದಕ್ಕೆ ಪ್ರಯತ್ನಿಸಿರಿ. ಶಂಕರನ ಅನುಗ್ರಹದಿಂದ ಅದು ನಿಮ್ಮ ಹೃದಯಕ್ಕೆ ಉಲ್ಲಾಸವನ್ನು ಕೊಡುತ್ತದೆ.

ವ್ಯವಹಾರದಲ್ಲಿ 'ಆದಷ್ಟು' ಧಾರ್ಮಿಕತೆಯನ್ನೇ ತುಂಬಲು ಹವಣಿಸುತ್ತಿರುವೆನು ಎಂದು ಬರೆದಿದ್ದೀರಿ. ಆದಷ್ಟು ಬೇಗ, ಧಾರ್ಮಿಕತೆಯನ್ನೇ ತುಂಬಿರಿ. ಜವಳಿ ಅಂಗಡಿಯಲ್ಲಿ ಕ್ಲೃಪ್ತವಾದ ಬೆಲೆಯನ್ನಿಟ್ಟು ಮಾರಿರಿ; ಹೊಲಿಗೆಯ ಕೆಲಸವನ್ನು ಯಾವ ಸುಳ್ಳು ಮೋಸಗಳಿಗೂ ಅವಕಾಶವನ್ನು ಕೊಡದೆ ನಡೆಯಿಸಿರಿ. ಶಂಕರನು ನಿಮಗೆ ಈ ವ್ಯವಹಾರವನ್ನು ಬರಿಯ ವ್ಯವಹಾರವಾಗಿರಿಸದೆ ಅದೂ ಒಂದು ಸಾಧನವೇ ಆಗುವಂತೆ ಮಾಡುವನು.

ಎಲ್ಲವೂ ಶಂಕರಕೃಪೆ ಎಂದು ನೀವು ಭಾವಿಸುತ್ತಿರುವದು ಶ್ಲಾಘನೀಯ ವಾಗಿದೆ.

## 21

### 21 - 11 - ಜುಲೈ 1952

**ಪ್ರಶ್ನೆ:-** ಉಪನಿಷತ್ತುಗಳು ಎಷ್ಟಿವೆ? ನಿರ್ಣಯಸಾಗರ ಮುದ್ರಣಾಲಯದಲ್ಲಿ ನೂರೆಂಟು ಉಪನಿಷತ್ತುಗಳು ಅಚ್ಚಾಗಿವೆ; ಆ ಪುಸ್ತಕ ನನ್ನಲ್ಲಿಲ್ಲ. ಅಡಿಯಾರಿನಲ್ಲಿ ಇನ್ನೂ ಕೆಲವು ಉಪನಿಷತ್ತುಗಳು ಅಚ್ಚಾಗದೆ ಇವೆ ಎಂದು ಕೇಳುತ್ತೇನೆ. ಅವನ್ನೆಲ್ಲ ಓದುವದು ಜ್ಞಾನಕ್ಕೆ ಅತ್ಯವಶ್ಯವೆ?

**ಉತ್ತರ:-** ಉಪನಿಷತ್ತು ಎಂದರೆ ಯಾವ ವಿದ್ಯೆಯು ಪರಮಾತ್ಮನ ಬಳಿಗೆ ಒಯ್ಯುತ್ತದೆಯೋ, ಯಾವ ವಿದ್ಯೆಯಿಂದ ನಮ್ಮ ದುಃಖಗಳೆಲ್ಲ ಪರಿಹಾರ ವಾಗುವವೋ ಆ ವಿದ್ಯೆ. ಆ ತಿಳಿವಳಿಕೆಯನ್ನು ಕೊಡುವ ವೇದಾಂತ ಗ್ರಂಥಗಳನ್ನೂ ಉಪನಿಷತ್ತು ಎಂದು ಉಪಚಾರಕ್ಕೆ ಕರೆಯುತ್ತಾರೆ. ಪರಮಾತ್ಮನ ಬಳಿಗೆ ಹೋಗುವದಕ್ಕೆ ಒಂದೇ ಉಪನಿಷತ್ತು ಸಾಕು. ಒಂದೂರಿಗೆ ಹೋಗುವದಕ್ಕೆ ಹಲವು ಮಾರ್ಗಗಳಿದ್ದರೂ ನಾವು ಯಾವದಾದರೂ ಒಂದನ್ನೇ ಅನುಸರಿಸಿದರೆ

ಸಾಕಷ್ಟೆ, ಸಾಮಾನ್ಯ ಜನರು ಉಪನಿಷತ್ತಿನ ಸಾರವಾದ ಭಗವದ್ಗೀತೆಯ ಅರ್ಥವನ್ನು ಮನನ ಮಾಡಿಕೊಂಡರೆ ಸಾಕಾಗುತ್ತದೆ.

**ಪ್ರಶ್ನೆ**:- ಯಾವ ಕ್ಷೇತ್ರದಲ್ಲಿದ್ದರೆ ಮನಸ್ಸಿಗೆ ಶಾಂತಿಯು ದೊರಕೀತು? ನನಗೆ ಊರಲ್ಲಿ ಬಹಳ ಬೇಸರವಾಗಿದೆ. ಕೆಲವರು ತಂಟೆಕೋರರ ಹಿಂಸೆಯನ್ನು ತಾಳಲಾರದೆ ಎಲ್ಲಿಗಾದರೂ ಹೋಗಿ ಹಾಯಾಗಿ ಕೆಲವು ದಿನಗಳು ಇರಬೇಕೆಂದು ಮಾಡಿದ್ದೇನೆ.

**ಉತ್ತರ**:- ಮನಸ್ಸಿಗೆ ಶಾಂತಿಯು ದೊರಕಬೇಕಾದರೆ ನೀವು ಹೊರಗಣ್ಣನ್ನು ಬಿಟ್ಟು ನಿಮ್ಮ ಹೃದಯವೆಂಬ ಕ್ಷೇತ್ರಕ್ಕೆ ತಿರುಗಿರಿ. ನಿಮ್ಮ ಹೃದಯದಲ್ಲಿ ಪರಮಾತ್ಮನನ್ನು ಕಂಡುಕೊಂಡರೆ ನಿಮಗೆ ಕೂಡಲೆ ಶಾಂತಿ ದೊರಕುವದು; ನಿಮ್ಮ ಸುತ್ತಲಿನ ಜನರ ಕಾಟವೂ ಖಂಡಿತವಾಗಿ ನಿಮಗೆ ತಪ್ಪುತ್ತದೆ. ಅಶಾಂತಿಗೆ ಕಾರಣ ಹೊರಗಿನ ಜನರಲ್ಲ; ನಿಮ್ಮ ಮನಸ್ಸಿನ ಸ್ಥಿತಿಯೇ ಅದಕ್ಕೆ ಕಾರಣ. ಹೃದಯದಲ್ಲಿರುವ ಪರಮೇಶ್ವರನಿಗೆ ಶರಣು ಹೋಗಿರಿ. ಆತನ ಪ್ರಸಾದದಿಂದ ಪರಮ ಶಾಂತಿಯೇ ದೊರಕುತ್ತದೆ. ಒಂದು ಕ್ಷೇತ್ರದಿಂದ ಮತ್ತೊಂದಕ್ಕೆ ಅಲೆದಾಡಿದರೆ ಮನಸ್ಸಿಗೆ ವಿಕ್ಷೇಪವಾದೀತೇ ಹೊರತು ಶಾಂತಿಯಾಗಲಾರದು.

## 22

### 21 - 12 - ಆಗಸ್ಟ್ 1952

**ಪ್ರಶ್ನೆ**:- ನಾನು ಯಾರೊಡನೆ ಮಾತನಾಡುತ್ತಿದ್ದರೂ ಕೊನೆಯಲ್ಲಿ ಹೇಗೋ ನಮ್ಮಿಬ್ಬರಿಗೂ ಮತಭೇದವುಂಟಾಗುತ್ತದೆ. ನನಗೆ ಅವರನ್ನು ಕಂಡರೆ ಅಸಮಾಧಾನವಾಗುತ್ತದೆ. ನನ್ನನ್ನು ಮುಂಗೋಪಿ ಎಂತ ಎಲ್ಲರೂ ಕರೆಯುತ್ತಾರೆ. ಈ ಕೆಟ್ಟ ಹೆಸರನ್ನು ಕಳೆದುಕೊಂಡು ಕೆಲವರು ಸ್ನೇಹಿತರನ್ನಾದರೂ ಸಂಪಾದಿಸಿಕೊಳ್ಳುವದಕ್ಕೆ ನಾನೇನು ಮಾಡಬೇಕು.

**ಉತ್ತರ**:- ಮತ್ತೊಬ್ಬರ ಅಭಿಪ್ರಾಯವು ಸರಿಯೇ ಅಲ್ಲವೆಂಬ ನಿಶ್ಚಯವನ್ನು ಬಿಡಿರಿ. ನನ್ನದೇ ತಪ್ಪಾಗಿರಬಾರದೇಕೆ? ಎಂದು ನಿಮಗೆ ನೀವೇ ಪ್ರಶ್ನೆಯನ್ನು ಹಾಕಿಕೊಳ್ಳಿರಿ. ಸಿಟ್ಟು ಬರುವಾಗ ಇಗೋ ಬರುತ್ತಿದೆ ಎಂಬ ಅರಿವಾದ ಕೂಡಲೆ ಮಾತನ್ನು ಅಷ್ಟಕ್ಕೇ ನಿಲ್ಲಿಸಿ ಮನಸ್ಸಿನಲ್ಲಿಯೇ ಭಗವಂತನ ನಾಮವನ್ನು ಸ್ಮರಿಸುವದಕ್ಕೆ ಆರಂಭಿಸಿರಿ. ಪ್ರತಿದಿನವೂ ಬೆಳಗ್ಗೆ ಎದ್ದಾಗ, ''ಭಗವಂತನೆ, ಎಲ್ಲರಲ್ಲಿಯೂ ನಿನ್ನ ಸಂನಿಧಿಯನ್ನು ಕಂಡು ಗೌರವಿಸುವ ಉತ್ತಮಭಾವನೆಯನ್ನು ಕರುಣಿಸು'' ಎಂದು ತಪ್ಪದೆ ಪ್ರಾರ್ಥಿಸಿಕೊಳ್ಳಿರಿ.

**ಪ್ರಶ್ನೆ:-** ನನ್ನ ಸಂಸಾರವು ವರ್ಷವರ್ಷಕ್ಕೂ ಹಿಗ್ಗುತ್ತಿದೆ, ಆದಾಯವು ಸ್ವಲ್ಪ ಹೆಚ್ಚು ಕಡಿಮೆ ಮೊದಲಿದ್ದಷ್ಟೇ ಇದೆ. ನಿನ್ನೆಗಿಂತ ಇಂದು ಧಾರಣೆವಾಸಿ ಏರುತ್ತಲೇ ಬರುತ್ತಿರುವ ಈ ಕಾಲಕ್ಕೆ ನನ್ನ ಮನಸ್ಸಿನ ಸಮಾಧಾನವನ್ನು ಹೇಗೆ ಕಾಪಾಡಿಕೊಳ್ಳಬೇಕು? ಅಧ್ಯಾತ್ಮಪ್ರಕಾಶದಂಥ ಮಾಸಪತ್ರಿಕೆಯನ್ನು ಓದುವದರಿಂದ ಮನಸ್ಸಮಾಧಾನವಿಲ್ಲದವರಿಗೆ ಪ್ರಯೋಜನವಾದೀತೆ?

**ಉತ್ತರ:-** ಮನೆಯಲ್ಲಿ ಮಕ್ಕಳು ಹೆಚ್ಚುತ್ತಿದ್ದರೆ, ಆದಾಯವನ್ನು ಹೆಚ್ಚಿಸಿ ಕೊಳ್ಳುವದಕ್ಕೆ ನಾವು ಪ್ರಯತ್ನ ಮಾಡಬೇಕೆಂಬುದು ತಾನೇ ಸಿದ್ಧವಾಗುತ್ತದೆ. ಜನಗಳಿಗೆ ಉಪಕಾರವಾಗುವ ಯಾವದಾದರೊಂದು ಕಾರ್ಯವನ್ನು ಕೈಕೊಳ್ಳುವದ ರಿಂದ ಜನರಿಗೆ ನಿಮ್ಮಲ್ಲಿ ಸಹಾನುಭೂತಿ ಹೆಚ್ಚಬಹುದು, ನಿಮ್ಮ ಕೆಲಸಕ್ಕೆ ಪ್ರತಿಫಲವೂ ಹೆಚ್ಚಾಗಿ ಬರಬಹುದು. ಬ್ರಹ್ಮಚರ್ಯ, ಸತ್ಸಂಗ, ಭಗವಂತನ ಧ್ಯಾನ ಅಥವಾ ಪ್ರಾರ್ಥನೆ– ಇವುಗಳಿಂದ ಮನಸ್ಸಿಗೆ ಸಮಾಧಾನವು ದೊರೆಯುವದು. ಭಗವಂತನ ಅನುಗ್ರಹದಿಂದ ನಿಮ್ಮ ಪರಿಸ್ಥಿತಿಯೂ ಸುಧಾರಿಸುವದು. ಅಧ್ಯಾತ್ಮ ವಿಚಾರದ ಪತ್ರಿಕೆಗಳನ್ನು ಓದುವದಕ್ಕೆ ಮೊದಲು ಮಾಡಿದಾಗ ಮನಸ್ಸಿನಲ್ಲಿ ಸಮಾಧಾನವು ಅಷ್ಟಿಲ್ಲದಿದ್ದರೂ ಅವುಗಳನ್ನು ಓದಿ ವಿಷಯಗಳನ್ನು ಮನಸ್ಸಿನೊಳಕ್ಕೆ ಬರುವದಕ್ಕೆ ಅವಕಾಶವನ್ನು ಕೊಟ್ಟರೆ ಅದರಿಂದ ಶಾಂತಿ ಸಮಾಧಾನಗಳು ಬರುವವು, ಮುಂದೆ ನಿಮ್ಮ ವ್ಯವಹಾರದಲ್ಲಿ ಉತ್ಸಾಹಪೂರ್ಣವಾದ ಪ್ರವೃತ್ತಿಗೂ ಸಹಾಯವಾಗುವದು. ಸದ್ವಿಚಾರಗಳು, ಮನಸ್ಸಿನ ಶಾಂತಿ ಸಮಾಧಾನಗಳು – ಇವುಗಳು ಒಂದರಿಂದೊಂದು ಮುಂದುವರಿಯುವದಕ್ಕೆ ಸಹಾಯವಾಗುವದು.

## 23

## 22 - 1 - ಸೆಪ್ಟೆಂಬರ್ 1952

**ಪ್ರಶ್ನೆ:-** ನಾನು ಬೆಳಗ್ಗೆ, ಸಾಯಂಕಾಲ– ಎರಡು ಹೊತ್ತು ಸಂಧ್ಯಾವಂದನೆ ಮಾಡುತ್ತಿದ್ದೇನೆ. ಮಧ್ಯಾಹ್ನದಲ್ಲಿ ದೇವತಾರ್ಚನೆಯನ್ನೂ ಸಾಯಂಕಾಲ ಮಂಗಳಾರತಿಯನ್ನೂ ತಪ್ಪದೆ ಮಾಡುತ್ತಿದ್ದೇನೆ. ವಿರಾಮವಿರುವ ದಿನಗಳಲ್ಲಿ ಒಂದೆರಡು ಸ್ತೋತ್ರಗಳನ್ನು ಹೇಳಿಕೊಳ್ಳುತ್ತಿದ್ದೇನೆ. ಆದರೆ ಈ ಸಾಧನೆ ಗಳಿಲ್ಲದವರಿಗೂ ನನಗೂ ಫಲದಲ್ಲಿ ಯಾವ ಹೆಚ್ಚು ಕಡಿಮೆಯೂ ತೋರುವದಿಲ್ಲವಲ್ಲ! ಅಧ್ಯಾತ್ಮ ಸಾಧನೆಯು ಸಪ್ರಯೋಜನವಾಗುವದಕ್ಕೆ ಏನು ಮಾಡಬೇಕು?

**ಉತ್ತರ:-** ಈಗ ನೀವು ಮಾಡುತ್ತಿರುವದು ಅಧ್ಯಾತ್ಮ ಸಾಧನೆಯೆ, ಅಲ್ಲವೆ? –ಎಂಬುದನ್ನು ಮೊದಲು ನಿರ್ಣಯಿಸಿಕೊಳ್ಳಿ. ಸಾಧನವು ಅಧ್ಯಾತ್ಮವೆನಿಸ ಬೇಕಾದರೆ ಅದು ಮನಸ್ಸಿಗೆ ತಾಕಬೇಕು. ಸಂಧ್ಯಾವಂದನೆಯನ್ನು ಮಾಡುವಾಗ ನಾನು ಈಗ ಭಗವಂತನಿಗೆ ಅರ್ಘ್ಯವನ್ನು ಕೊಡುತಿದ್ದೇನೆ; ಈಗ ಗಾಯತ್ರೀ ಮಂತ್ರದ ಜಪದ ಮೂಲಕ ಭಗವಂತನನ್ನು ಮನಸ್ಸಿನಲ್ಲಿ ಪ್ರಾರ್ಥಿಸುತ್ತಿದ್ದೇನೆ; ಈಗ ಎದ್ದುನಿಂತು ಗಟ್ಟಿಯಾಗಿ ಮಂತ್ರೋಚ್ಚಾರಣೆ ಮಾಡಿ ಭಗವಂತನನ್ನು ಪ್ರಾರ್ಥಿಸುತ್ತಿದ್ದೇನೆ- ಎಂಬ ಭಾವನೆ ನಿಮ್ಮ ಮನಸ್ಸಿನಲ್ಲಿ ಮೂಡಿಕೊಳ್ಳುತ್ತಿದೆಯೆ? ದೇವತಾರ್ಚನೆಯನ್ನು ಮಾಡುವಾಗ ಸಾಲಿಗ್ರಾಮ, ಲಿಂಗ ಅಥವಾ ಮೂರ್ತಿ– ಇವುಗಳ ನೆಪದಿಂದ ಪರಮೇಶ್ವರನ ಸಂನಿಧಿಯ ಭಾವನೆಯನ್ನು ಮಾಡುತ್ತಿದ್ದೀರ? ಇಲ್ಲದಿದ್ದರೆ ಇಂದಿನಿಂದಲೇ ಈ ಸಾಧನವನ್ನು ಮಾಡಿರಿ.

**ಪ್ರಶ್ನೆ:-** ನಾನು ಕೆಲವು ದಿನಗಳು ಪುರಾಣವನ್ನು ಕೇಳುವದಕ್ಕೆ ಹೋಗಿದ್ದೆನು. ಶ್ರವಣದಕಾಲಕ್ಕೆ ಉತ್ಸಾಹಭರಿತನಾಗಿರುತ್ತೇನಾದರೂ ಅದರಿಂದ ನನ್ನ ನಡತೆಯ ಮೇಲೆ ಯಾವ ಪರಿಣಾಮವೂ ಆದಂತೆ ಕಾಣಲಿಲ್ಲ. ಪುರಾಣಶ್ರವಣದಿಂದ ಪ್ರಯೋಜನವು ಹೇಗೆ ಆದೀತು?

**ಉತ್ತರ:-** ಶ್ರವಣವೆಂದರೆ ಮನಮುಟ್ಟಿ ಕೇಳಿ ಹೃದಯಕ್ಕೆ ಹತ್ತಿಸಿಕೊಳ್ಳುವದು. ಪುರಾಣಗಳಲ್ಲಿ ಕಥೆಯನ್ನೂ ವರ್ಣನೆಯನ್ನೂ ನೆಪಮಾಡಿಕೊಂಡು ಭಗವಂತನ ಗುಣಕರ್ಮಲೀಲೆಗಳನ್ನು ತಿಳಿಸಿರುತ್ತದೆ. ಭಗವಂತನು ಈಗಲೂ ಆ ತನ್ನ ಗುಣಕರ್ಮಲೀಲೆಗಳನ್ನು ಪ್ರಕಟಿಸುತ್ತಿದ್ದಾನೆ ಎಂಬುದನ್ನು ಮನಸ್ಸಿಗೆ ತಂದುಕೊಳ್ಳುತ್ತಿರಿ. ಪುರಾಣದಲ್ಲಿ ಬರುವ ಸ್ತೋತ್ರಗಳು, ಉಪದೇಶಗಳು– ಇವುಗಳನ್ನು ಕಿವಿಗೊಟ್ಟು ಕೇಳುವ ಪದ್ಧತಿಯನ್ನು ಮಾಡಿಕೊಳ್ಳಿರಿ.

## 24

### 22 - 2 - ಅಕ್ಟೋಬರ್ 1952

**ಪ್ರಶ್ನೆ:-** ತಿಂಗಳಿನಲ್ಲಿ ಮುಕ್ಕಾಲುಪಾಲು ದಿನಗಳು ನಾನು ಊರಿಂದೂರಿಗೆ ಓಡಾಡುತ್ತಲೇ ಇರಬೇಕಾಗುತ್ತದೆ. ಈ ಸಂದರ್ಭದಲ್ಲಿ ನಾನು ಯಾವ ಸಾಧನವನ್ನು ಮಾಡಬಹುದು?

**ಉತ್ತರ:-** ನಿಮ್ಮ ಪ್ರಯಾಣವನ್ನು ಭಗವಂತನ ತೀರ್ಥಯಾತ್ರೆ ಎಂದು ಭಾವಿಸಿಕೊಳ್ಳಿರಿ. ಒಂದೊಂದು ಊರೂ ಭಗವಂತನ ಕ್ಷೇತ್ರವೆಂದುಕೊಳ್ಳಿರಿ.

ಭಗವನ್ನಾಮವನ್ನು ಆದಷ್ಟುಮಟ್ಟಿಗೂ ಬಿಡದೆ ಉಚ್ಚರಿಸುತ್ತಿರಿ. ಜೇಬಿನಲ್ಲಿ ಒಂದು ಅರ್ಥಸಹಿತವಾದ ಸ್ತೋತ್ರದ ಪುಸ್ತಕವಿರಲಿ. ಬಿಡುವು ಸಿಕ್ಕಿದಾಗ ಅದನ್ನು ಓದಬಹುದು.

**ಪ್ರಶ್ನೆ:-** ಅಧ್ಯಾತ್ಮ ವಿಷಯದ ಚರ್ಚೆಯನ್ನು ಮಾಡುವಾಗ ಅಭಿಪ್ರಾಯ ಗಳಲ್ಲಿ ಭೇದವುಂಟಾದರೆ ಏನು ಮಾಡಬೇಕು?

**ಉತ್ತರ:-** ಅಧ್ಯಾತ್ಮ ವಿಷಯದ ಚರ್ಚೆಯನ್ನು ಮಾಡುವದು ಅನುಭವಕ್ಕಾಗಿ. ಮತ್ತೊಬ್ಬರು ಹೇಳುವದರಿಂದ ನಿಮಗೆ ಅನುಭವವುಂಟಾದರೆ ಅದನ್ನು ಕೂಡಲೆ ಸರಿ ಎಂದು ಒಪ್ಪಿಕೊಂಡುಬಿಡಬೇಕು. ಹಠಕ್ಕಾಗಿ ನಿಮ್ಮ ಅಭಿಪ್ರಾಯವನ್ನೇ ಸರಿ ಎಂದು ಸಾಧಿಸುವದಕ್ಕೆ ಹೋಗಬೇಡಿರಿ. ಮತ್ತೊಬ್ಬರು ಹೇಳುವದು ಅನುಭವಕ್ಕೆ ಹೊಂದದೆ ಇದ್ದರೆ 'ಹಾಗೆ ಅನುಭವದಲ್ಲಿಲ್ಲವಲ್ಲ!' ಎಂದು ಕೇಳಬಹುದು. ಅವರು ಅನುಭವವನ್ನು ತೋರಿಸಿಕೊಟ್ಟರೆ ಸರಿಯಾಯಿತು, ಇಲ್ಲದಿದ್ದರೆ ವಾದವನ್ನು ಅಷ್ಟಕ್ಕೇ ನಿಲ್ಲಿಸಿರಿ.

**ಪ್ರಶ್ನೆ:-** ಗ್ರಂಥಗಳನ್ನು ಓದಿ ಒಬ್ಬರೊಡನೆ ಚರ್ಚೆಯನ್ನು ಮಾಡುವದು ಮೇಲೊ, ಅಥವಾ ಸಾಧನವನ್ನು ಮಾಡುವದು ಮೇಲೊ?

**ಉತ್ತರ:-** ಸಾಧನವನ್ನು ಮಾಡುವದೂ ಅನುಭವಕ್ಕಾಗಿ, ಚರ್ಚೆ ಯನ್ನು ಮಾಡುವದೂ ಅನುಭವಕ್ಕಾಗಿ, ಆದ್ದರಿಂದ ಸಾಧನವನ್ನು ಮಾಡುತ್ತಾ ಆಯಾ ವಿಷಯಕ್ಕೆ ಶಾಂತಹೃದಯರಾದವರೊಡನೆ ಚರ್ಚೆಯನ್ನು ಮಾಡಬಹುದು. ಆದರೆ ಚರ್ಚೆಯಿಂದ ಸಾಧನಕ್ಕೆ ಎಂದಿಗೂ ಅಡ್ಡಿಯನ್ನು ತಂದುಕೊಳ್ಳಬಾರದು. ಸಾಧನೆಯು ಬಲಿತ ಹಾಗೆಲ್ಲ ಎಷ್ಟೋ ಸಂಶಯಗಳು ತಮಗೆ ತಾವೇ ಪರಿಹಾರವಾಗುವವು.

## 25

### 22 - 3 - ನವೆಂಬರ್ 1952

**ಪ್ರಶ್ನೆ:-** ನಮ್ಮೂರಿನಲ್ಲಿರುವ ಅಧ್ಯಾತ್ಮ ವಿಚಾರ ಸಂಘದಲ್ಲಿ ಸದಸ್ಯರಿಗೇನೂ ಕಡಿಮೆಯಿಲ್ಲ. ಆದರೆ ಅವರು ಕ್ರಮವಾಗಿ ಸಂಘಕ್ಕೆ ಬರುವದಿಲ್ಲ; ಬಂದರೆ ಕಾಲಕ್ಕೆ ಸರಿಯಾಗಿ ಎಲ್ಲರೂ ಸೇರುವದೂ ಇಲ್ಲ. ಅಧ್ಯಾತ್ಮ ವಿಚಾರದಲ್ಲಿ ಸವಿ ಹತ್ತುವದಕ್ಕೆ ಏನು ಮಾಡೋಣ?

**ಉತ್ತರ:-** ಅಧ್ಯಾತ್ಮ ವಿಚಾರದಲ್ಲಿ ಸವಿಹತ್ತಿದವರು ಮಾತ್ರ ಸೇರಿದರೆ ಸಾಕು,

ಮಿಕ್ಕವರು ಬರುವದಕ್ಕೆ ಅವಕಾಶವನ್ನು ಕೊಡಬೇಕು. ಅಲ್ಲಿ ನಿಮ್ಮೆಲ್ಲರಿಗೂ ಸಮ್ಮತವಾಗಿರುವ ಯಾವದಾದರೊಂದು ಗ್ರಂಥವನ್ನು ಸ್ವಲ್ಪ ಹೊತ್ತು ಓದಿ ವಿಚಾರ ಮಾಡಬಹುದು. ಆದರೆ ಮುಖ್ಯವಾಗಿ ನೀವುಗಳೆಲ್ಲರೂ ಜಪ, ಅಥವಾ ಭಜನೆ– ಇಂಥ ಸಾಧನಗಳನ್ನು ಮಾಡುವದನ್ನು ಬಿಡಬೇಡಿ. ಮತ್ತೊಬ್ಬರಿಗೆ ಕಾಲಕ್ರಮದಲ್ಲಿ ಸವಿ ಹತ್ತುವದು; ಅವರನ್ನು ಬಿಟ್ಟಿ ಹಿಡಿಯುವದಕ್ಕೆ ಎಂದಿಗೂ ಪ್ರಯತ್ನಿಸದಿರಿ.

**ಪ್ರಶ್ನೆ:-** ಮನಸ್ಸಿಗೆ ಶಾಂತಿ ಹೇಗೆ ಸಿಕ್ಕಬೇಕು? ಇದಕ್ಕೆ ಸುಲಭವಾದ ಯಾವದಾದರೂ ಒಂದು ಉಪಾಯವನ್ನು ದಯವಿಟ್ಟು ತಿಳಿಸಿರಿ.

**ಉತ್ತರ:-** ನಮಗೆ ಬೇಕಾದದ್ದು ದೊರೆತರೆ, ಅಥವಾ ಬೇಡವಾದದ್ದು ದೂರವಾದರೆ ತತ್ಕಾಲಕ್ಕೆ ಶಾಂತಿ ದೊರೆಯುವದು. ಆದರೆ ಶಾಶ್ವತವಾದ ಶಾಂತಿಯು ದೊರೆಯುವದಕ್ಕೆ ನಮ್ಮ ನಮ್ಮ ಹೃದಯದಲ್ಲಿಯೇ ಇರುವ ಈಶ್ವರನಲ್ಲಿಗೆ ಶರಣು ಹೋಗಬೇಕು. ಅವನು ಇಲ್ಲಿಯೇ ಇದಾನೆಂದು ನೆರೆನಂಬಿ ಆತನ ನಾಮವನ್ನು ಸ್ಮರಿಸಿರಿ; ಆತನನ್ನು ಎಡೆಬಿಡದೆ ಪ್ರಾರ್ಥಿಸಿರಿ (ಗೀತೆ.೧೮-೬೨).

## 26

### 22 - 4 - ಡಿಸೆಂಬರ್ 1952

**ಪ್ರಶ್ನೆ:-** ಮೂರ್ತಿಪೂಜೆಯನ್ನು ಮಾಡಬಹುದೊ, ಮಾಡಬಾರದೊ? ಭಗವಂತನಿಗೆ ಯಾವ ಆಕಾರವೂ ಇಲ್ಲವೆಂದು ಹೇಳುತ್ತಾರಲ್ಲ! ಕೆಲವು ಮತಗಳಲ್ಲಿ ವಿಗ್ರಹಗಳನ್ನು ಆರಾಧಿಸುವದು ಪಾಪವೆಂದೇ ಬೋಧಿಸುತ್ತಾರಲ್ಲ!

**ಉತ್ತರ:-** ಎಲ್ಲಾ ಮತಗಳ ಆಚಾರವಿಚಾರಗಳನ್ನೂ ಒಟ್ಟುಗೂಡಿಸಿಕೊಂಡು ಅನುಷ್ಠಾನ ಮಾಡುವದು ಯಾರಿಂದಲೂ ಆಗಲಾರದು. ನಿಮ್ಮ ಮತದಲ್ಲಿ ಮೂರ್ತಿಪೂಜೆ ಇದೆಯೊ, ಇಲ್ಲವೊ? ನಿಮಗೆ ಅದು ರುಚಿಸುತ್ತದೆಯೊ ಇಲ್ಲವೊ? ಅದನ್ನು ನೋಡಿಕೊಳ್ಳಿರಿ; ಭಗವಂತನು ನಿರಾಕಾರನಾದರೂ ಸಾಧಕರ ಅನುಗ್ರಹಾರ್ಥವಾಗಿ ಆಕಾರವನ್ನೂ ಅವನು ಧರಿಸಬಲ್ಲನೆಂದು ಬಲ್ಲವರು ಹೇಳುತ್ತಾರೆ.

**ಪ್ರಶ್ನೆ:-** ವಿಷ್ಣುವಿನ ವಿಗ್ರಹವನ್ನು ಪೂಜೆಮಾಡುವದು ಆತನಿಗೆ ಅಳತೆಯನ್ನು ಕಲ್ಪಿಸಿದಂತೆ ಅಲ್ಲವೆ? ವಿಷ್ಣು ಎಂದರೆ ಸರ್ವವ್ಯಾಪಿಯು. ಆತನು ಒಂದು ವಿಗ್ರಹದಲ್ಲಿ ಅಡಗಿರುವನೆಂದು ಕಲ್ಪಿಸುವದು ಸರಿಯಾದೀತೆ?

**ಉತ್ತರ:-** ಸರ್ವವ್ಯಾಪಿಯಾದ ಭಗವಂತನನ್ನು ಯಾವ ವಿಗ್ರಹದ ಅವಲಂಬನೆಯೂ ಇಲ್ಲದೆ ಅರ್ಚಿಸುವದಕ್ಕೆ ನಿಮಗೆ ಶಕ್ಯವಾಗಿದ್ದರೆ ಅವಶ್ಯವಾಗಿ ಹಾಗೇ ಮಾಡಿರಿ. ಶಕ್ಯವಿಲ್ಲದಿದ್ದರೆ ಸರ್ವವ್ಯಾಪಿಯಾದ ಆ ಭಗವಂತನು ವಿಗ್ರಹ ದಲ್ಲಿಯೂ ವ್ಯಾಪಿಸಿಯೇ ಇರುತ್ತಾನೆಂದು ಕಲ್ಪಿಸಿಕೊಂಡರೆ ದೋಷವೇನೂ ಇಲ್ಲ. ಒಂದು ದೊಡ್ಡಕೆರೆಯ ಒಂದು ಭಾಗದಲ್ಲಿರುವ ನೀರೂ ಕೆರೆಯ ನೀರೇ ಅಲ್ಲವೆ? ವಿಗ್ರಹದಲ್ಲಿಯೂ ವಿಷ್ಣುವೇ ಇದಾನೆಂದು ಭಾವಿಸಿಕೊಳ್ಳಿರಿ. ಇಷ್ಟೇ ಅಲ್ಲ. ಆ ಮಹಾವಿಷ್ಣುವಿನ ಹೊರತಾಗಿ ಆತನನ್ನು ಬಿಟ್ಟ ವಿಗ್ರಹವೇ ಬೇರೆ ಇಲ್ಲವೆಂಬುದನ್ನು ಮನಸ್ಸಿಗೆ ತಂದುಕೊಳ್ಳಿರಿ. ಆಕಾಶವು ಎಲ್ಲೆಲ್ಲಿಯೂ ವ್ಯಾಪಿಸಿದ್ದರೂ ಅದರಲ್ಲಿ ಕಾಣುವ ನೀಲವರ್ಣದ ಕೊಪ್ಪರಿಗೆಯಂಥ ಭಾಗವೂ ಬರಿಯ ಆಕಾಶವೇ ಅಷ್ಟೆ? ವಿಗ್ರಹವೇ, ನಿನ್ನನ್ನು ನಮಸ್ಕರಿಸುತ್ತೇನೆ ಎನ್ನುವದು ಸರಿಯಲ್ಲ; ವಿಷ್ಣುವೇ, ನಿನಗೆ ನಮಸ್ಕಾರ! – ಎನ್ನುವದು ಎಂದಿಗೂ ತಪ್ಪಲ್ಲ. ವಿಗ್ರಹದ ಭಾವನೆ ಬೇಡ, ವಿಷ್ಣು ಭಾವನೆಯೇ ಇರಲಿ!

**ಪ್ರಶ್ನೆ:-** ರಾಮನಾಮಸ್ಮರಣೆಯನ್ನು ಮಾಡುವಾಗ ಯಾವ ಗುಣವನ್ನು ಮನಸ್ಸಿಗೆ ತಂದುಕೊಳ್ಳುವದು ಶ್ರೇಯಸ್ಕರವಾದೀತು?

**ಉತ್ತರ:-** ರಾಮನಲ್ಲಿರುವ ಗುಣಗಳೆಲ್ಲ ಶ್ರೇಯಸ್ಕರವೇ, ರಾಮನೆಂದರೆ ರಮಣೀಯವಾದ ಆನಂದಸಾಗರನು.

## 27

### 22 - 5 - ಜನವರಿ 1953

**ಪ್ರಶ್ನೆ:-** ನಾನೊಂದು ನಾಟಕದ ಕಂಪೆನಿಯಲ್ಲಿ ಪಾತ್ರವನ್ನು ವಹಿಸುತ್ತಾ ಕಾಲಹರಣ ಮಾಡುತ್ತಿದ್ದೇನೆ. ಈಗೀಗ ನನಗೆ ಅಧ್ಯಾತ್ಮ ವಿಚಾರದಲ್ಲಿ ಮನಸ್ಸು ತಿರುಗಿದೆ. ಮನಸ್ಸಿಗೆ ಸಮಾಧಾನವನ್ನು ಕೊಡುವ ಯಾವದಾದರೊಂದು ಅನುಸಂಧಾನಕ್ರಮವನ್ನು ದಯವಿಟ್ಟು ತಿಳಿಸಿರಿ.

**ಉತ್ತರ:-** ಇಡಿಯ ಪ್ರಪಂಚವೇ ಭಗವಂತನ ಲೀಲೆಯ ನಾಟಕದ ರಂಗಸ್ಥಲವು. ಅದರಲ್ಲಿ ನಾನು ಆ ಸೂತ್ರಧಾರನ ಅಪ್ಪಣೆಯಂತೆ ಒಂದು ಪಾತ್ರವನ್ನು ವಹಿಸಿದ್ದೇನೆ. ಆತನಿಗೆ ಮೆಚ್ಚಾಗುವಂತೆ ಈ ಪಾತ್ರವನ್ನು ಅಭಿನಯಿಸುವೆನು ಎಂದು ಆಗಾಗ್ಗೆ ನೆನಪಿಗೆ ತಂದುಕೊಳ್ಳುತ್ತಿರಿ.

**ಪ್ರಶ್ನೆ:-** ಗುರುಗಳಲ್ಲಿ ಭಕ್ತಿಯನ್ನು ಬೆಳೆಯಿಸಿಕೊಳ್ಳುವದಕ್ಕೆ ಮೊಟ್ಟಮೊದಲು ಸಾಧಿಸಿಕೊಳ್ಳಬೇಕಾದದ್ದೇನು?

**ಉತ್ತರ:-** ಗುರುಗಳು ಭಗವಂತನ ವಿಗ್ರಹವಾಗಿರುವರೆಂದು ಭಾವಿಸಿಕೊಳ್ಳಿರಿ. ಯಾವ ಕೃತ್ರಿಮಭಾವವೂ ಇಲ್ಲದೆ ಅವರಿಗೆ ಆತ್ಮನಿವೇದನೆಯನ್ನು ಮಾಡಿರಿ. ಅವರ ಸದುಪದೇಶವನ್ನು ಭಗವಂತನ ಆಜ್ಞೆ ಎಂದು ಎಣಿಸಿಕೊಂಡು ನಡೆಯಿರಿ.

**ಪ್ರಶ್ನೆ:-** ಒಬ್ಬ ಮಹಾತ್ಮರು ನನ್ನಲ್ಲಿ ಬಹಳ ಸಲಿಗೆಯಿಂದ ಇರುತ್ತಾರೆ. ಅವರೊಡನೆ ಮಾತನಾಡುವಾಗಲೂ ವ್ಯವಹರಿಸುವಾಗಲೂ ನಮಗೆ ಅವರು ದೊಡ್ಡವರೆಂಬುದು ಆಗಾಗ್ಗೆ ಮರೆತೇ ಹೋಗುತ್ತದೆ. ಅವರಲ್ಲಿ ಪೂಜ್ಯ ಭಾವನೆಯು ಬೆಳೆಯುವದಕ್ಕೆ ಇದು ಅಡ್ಡಿಯಲ್ಲವೆ?

**ಉತ್ತರ:-** ತಂದೆತಾಯಿಗಳೊಡನೆ ಮಗನು ಎಷ್ಟು ಸಲಿಗೆಯಿಂದ ವರ್ತಿಸಿದರೂ ಅವರು ತಿಳಿವಳಿಕೆಯಲ್ಲಿಯೂ ಶಕ್ತಿಯಲ್ಲಿಯೂ ವ್ಯವಹಾರ ಚತುರತೆ ಯಲ್ಲಿಯೂ ತನಗಿಂತ ಎಷ್ಟೋ ಪಾಲು ಮಿಗಿಲೆಂಬುದನ್ನು ಅರಿತಿರುತ್ತಾನೆ. ತನಗೆ ಬೇಕಾದ ಸಹಾಯವನ್ನೆಲ್ಲ ಅವರಿಂದಲೇ ಪಡೆದುಕೊಳ್ಳುತ್ತಾನೆ. ಇದರಂತೆ ನೀವೂ ವರ್ತಿಸಿರಿ. ಮಹಾತ್ಮರು ಎಷ್ಟೇ ಸರಸವಾಗಿ ನಿಮ್ಮೊಡನೆ ವರ್ತಿಸಿದರೂ ಅವರ ಜ್ಞಾನಭಕ್ತಿವೈರಾಗ್ಯಾದಿಗಳ ಅತಿಶಯವನ್ನು ಮಾತ್ರ ನಿತ್ಯವೂ ಮನಸ್ಸಿಗೆ ತಂದುಕೊಂಡೇ ಅವರಲ್ಲಿ ವರ್ತಿಸಿರಿ.

## 28

### 22 - 6 - ಫೆಬ್ರುವರಿ 1953

**ಪ್ರಶ್ನೆ:-** ಮನಸ್ಸಿನ ಚಾಂಚಲ್ಯವನ್ನು ಕಳೆಯುವ ಸಾಧನವು ಯಾವದು?

**ಉತ್ತರ:-** ಮನಸ್ಸು ಮನಸ್ಸಾಗಿರುವವರೆಗೆ ಚಾಂಚಲ್ಯವಿರುತ್ತದೆ. ಮನನ ಮಾಡುವದಲ್ಲವೆ, ಮನಸ್ಸೆಂಬುದು? ಅದು ಅಮನಸ್ಸಾದರೆ, ಮನನ ಕಾರ್ಯವನ್ನು ಬಿಟ್ಟರೆ, ಅದರ ಚಾಂಚಲ್ಯವಿರುವದಿಲ್ಲ; ಆದರೆ ಅದು ನಮಗೆ ವ್ಯವಹಾರದಲ್ಲಿ ಯಾವ ಸಾಧನವನ್ನೂ ತಿಳಿಸಿಕೊಡಲಾರದು. ಪರಮಾತ್ಮನಲ್ಲಿಯೇ ಭಕ್ತಿಯಿಂದ ಮನಸ್ಸಿಡುವ ಪ್ರಯತ್ನವನ್ನು ಮತ್ತೆ ಮತ್ತೆ ಮಾಡಬೇಕು; ವಿಷಯಗಳಲ್ಲಿ ವಿಚಾರದ ಮೂಲಕ ವಿರಕ್ತಿಯನ್ನು ಹೊಂದಬೇಕು. ಹಾಗಾದರೆ ಮನಸ್ಸಿಗೆ ಶಾಂತಿ ದೊರೆಯುತ್ತದೆ.

**ಪ್ರಶ್ನೆ:-** ದೇವರು ಜಗತ್ತಿನಲ್ಲಿ ಎಲ್ಲೆಲ್ಲಿಯೂ ತುಂಬಿರುತ್ತಾನೆ. ಆದರೂ ಗುಡಿಗುಂಡಾರುಗಳಿಗೆ ಏಕೆ ಜನರು ಹೋಗುತ್ತಾರೆ? ಮನೆಯಲ್ಲಿಯೇ ಏಕೆ ಪ್ರಾರ್ಥನೆ ಮಾಡಬಾರದು?

**ಉತ್ತರ:-** ದೇವರು ಎಲ್ಲೆಲ್ಲಿಯೂ ಇದ್ದರೂ ಭಕ್ತರು ಅರ್ಚನೆ ಮಾಡುವ ದೇವಾಲಯಗಳು, ಸಾಧುಗಳು ಸದ್ವಿಚಾರವನ್ನು ಮಾಡುವ ಆಶ್ರಮಗಳು– ಇಂಥ ಸ್ಥಳಗಳಲ್ಲಿ ಮನಸ್ಸು ನಿರ್ಮಲವಾಗಿರುವದರಿಂದ ಅಲ್ಲಿ ದೇವರ ಇರುವಿಕೆಯು ಬೇಗನೆ ಮನಸ್ಸಿಗೆ ಹತ್ತುತ್ತದೆ. ಮನೆಯಲ್ಲಿ ವ್ಯವಹಾರದ ಯೋಚನೆಗಳನ್ನು ತುಂಬಿ ಕೊಂಡಿರುವವರೇ ಬಹಳ; ಆದ್ದರಿಂದ ಅಲ್ಲಿ ಪ್ರಾರ್ಥನೆ ಮಾಡಲು ಮನಸ್ಸಿಗೆ ಕಷ್ಟವಾಗುತ್ತದೆ. ನಿರ್ಮಲವಾದ ಗಾಳಿ ಬೇಕಾದರೆ ಊರನ್ನು ಬಿಟ್ಟು ಊರ ಹೊರಗಿನ ವಿಶಾಲವಾದ ಬಯಲುಗಳಿಗೆ ಹೋಗಿ ಬರುತ್ತಾರಲ್ಲವೆ? ಆದರೆ ಮನಸ್ಸು ಸಿದ್ಧವಾಗಿದ್ದರೆ ತಾನಿರುವಲ್ಲಿಯೇ ಪ್ರಾರ್ಥಿಸಬಹುದು; ಆಗ ದೇಹವೇ ದೇವಾಲಯವಾಗುವದು.

**ಪ್ರಶ್ನೆ:-** ಆತ್ಮಜ್ಯೋತಿಯನ್ನು ದೇಹದಲ್ಲಿ ದಿನಂಪ್ರತಿ ಕಂಡ ಮೇಲೆ ಮತ್ತೇನು ಬೇಕು?

**ಉತ್ತರ:-** ಆತ್ಮಜ್ಯೋತಿ ಎಂದರೇನು? ಅದೊಂದು ಬೆಳಕಲ್ಲ. ಸೂರ್ಯ ಚಂದ್ರರನ್ನು ಕಾಣುವಂತೆ ಅಲ್ಲ, ಆತ್ಮಜ್ಯೋತಿಯನ್ನು ಕಾಣುವದು. ಎಲ್ಲವನ್ನೂ ತಿಳಿಸಿಕೊಡುವ, ಎಲ್ಲಕ್ಕೂ ಸಾಕ್ಷಿಯಾಗಿರುವ, ಚೈತನ್ಯವೇ ಆತ್ಮನ ಜ್ಯೋತಿ. ಅದನ್ನು ದೇಹದಲ್ಲಿ ಮಾತ್ರವಲ್ಲ, ಎಲ್ಲೆಲ್ಲಿಯೂ ಕಾಣುವದೇ ಅಧ್ಯಾತ್ಮವಿದ್ಯೆ.

## 29

### 22 - 7 - ಮಾರ್ಚ್ 1953

**ಪ್ರಶ್ನೆ:-** ತಕ್ಕಮಟ್ಟಿಗೆ ಸಾಧನವನ್ನು ಮಾಡುತ್ತಿದ್ದೇನೆ. ಶರೀರದಲ್ಲಿ ಅಶಕ್ತಿಯು ಕಡಿದು ಬಲವು ಬರಹತ್ತಿದೆ. ಆದರೆ ಕೋಪ, ದುಷ್ಟವಿಚಾರಗಳು ಹೆಚ್ಚುತ್ತಿವೆ. ಇವುಗಳು ಬಾರದಂತೆ ಏನು ಮಾಡಲಿ?

**ಉತ್ತರ:-** ಇದು ನೀವು ಮಾಡುತ್ತಿರುವ ಅಧ್ಯಾತ್ಮ ಸಾಧನವು ಮುಂಬರಿಯುತ್ತಿರುವದರ ಗುರುತಾಗಿರಬಹುದು. ಇನ್ನಷ್ಟು ಸಾಧನವನ್ನು ಹೆಚ್ಚಿಸಿರಿ. ಭಗವಂತನ ನಾಮದ ಸ್ಮರಣೆಯನ್ನು ಬಲಪಡಿಸಿರಿ. ಕೋಪ, ದುಷ್ಟ ವಿಚಾರ– ಇವು ಬಂದು ಹೋಗುತ್ತಿರುವವು, ನನಗೇನೂ ಸಂಬಂಧವಿಲ್ಲ– ಎಂದು ಮನಸ್ಸಿನಲ್ಲಿ ವಿಚಾರ ಮಾಡಿಕೊಳ್ಳಿರಿ.

**ಪ್ರಶ್ನೆ:-** ಮನೆಯಲ್ಲಿ ಅಂತಃಕಲಹಗಳು ಜಾಸ್ತಿಯಾಗಿ ನಡೆದಿವೆ. ಇವಕ್ಕೇನು ಮಾಡಬೇಕು?

**ಉತ್ತರ:-** ಅವುಗಳಿಗೆ ಹೆಚ್ಚಿನ ಮಹತ್ತ್ವವನ್ನು ಕೊಡಬೇಡಿರಿ. ಕಾಲಕಾಲಕ್ಕೆ ಏಳುವದು, ದೇವರ ಪೂಜೆ, ಭಗವನ್ನಾಮಕೀರ್ತನೆ– ಮುಂತಾದವುಗಳನ್ನು ಮಾಡುತ್ತಾ ನಡೆಯಿರಿ. ಹೊರಗೆ ಬಿರುಸಾಗಿ ಮಾತನಾಡುವವರಿಗೆ ಮಾರುತ್ತರವನ್ನು ಕೊಡುವ ಅಭ್ಯಾಸವನ್ನು ಬಿಡಿ. ಮೌನವೇ – ವಾಕ್ಕನ್ನು ಸುಮ್ಮನಿರಿಸಿ ಭಗವಂತನ ಚಿಂತನೆಯನ್ನು ಹೆಚ್ಚಿಸುವದೇ ಕಲಹಗಳಿಗೆಲ್ಲ ಏಕಮೂಲಿಕಾ ಪ್ರಯೋಗವು.

**ಪ್ರಶ್ನೆ:-** ನಾನು ಪರಮಾತ್ಮನನ್ನು ಅನ್ವೇಷಣದಿಂದ ಪಡೆಯಬೇಕೆ? ಅಥವಾ ಪರಮಾರ್ಥವೇ ನಾನೊ?

**ಉತ್ತರ:-** ಸಂಶಯ, ಕಾಮಕ್ರೋಧಗಳು, ವಿಚಾರದ ಹೆಮ್ಮೆ– ಇವುಗಳು ತೋರುತ್ತಿರುವವರೆಗೆ ಈಗಿನ ನಮ್ಮ ದೃಷ್ಟಿಯಿಂದ ನಾವು ಪರಮಾರ್ಥಕ್ಕೆ ಬಹಳ ದೂರ. ಅದನ್ನು ಆಧ್ಯಾತ್ಮಿಕವಾದ ಅನ್ವೇಷಣೆಯಿಂದಲೇ ಪಡೆದುಕೊಳ್ಳಬೇಕಾಗಿದೆ. ಶಾಸ್ತ್ರದೃಷ್ಟಿಯಿಂದಲೇನೋ ನಾವು ಪರಮಾರ್ಥಕ್ಕಿಂತ ಎಂದಿಗೂ ಬೇರೆಯಿಲ್ಲ.

**ಪ್ರಶ್ನೆ:-** ಪರಮಾರ್ಥವೇ ನಾನಾದರೆ ಜಿಜ್ಞಾಸೆಗೆ ಗುರಿ ಯಾವದು? ಪೂಜೆಗೆ ವಿಷಯವೇನು?

**ಉತ್ತರ:-** ಪರಮಾರ್ಥವೆಂದರೇನೆಂಬುದು ತಿಳಿದರೆ ಈ ಪ್ರಶ್ನೆ ಹುಟ್ಟುವದಿಲ್ಲ. ತತ್ತ್ವವನ್ನು ಚರ್ಚೆಯಿಂದಲ್ಲ ತಿಳಿಯಬೇಕಾದದ್ದು, ಅನುಭವ ದಿಂದ. ನಮ್ಮ ಈಗಿನ ಅನುಭವದ ದೃಷ್ಟಿಯಿಂದ ಪ್ರಶ್ನೆಮಾಡಬೇಕೇ ಹೊರತು ಶಾಸ್ತ್ರ ಸಿದ್ಧವಾದ ವಿಷಯಗಳ ದೃಷ್ಟಿಯಿಂದಲ್ಲ; ಇದನ್ನು ಚೆನ್ನಾಗಿ ಮನನ ಮಾಡಿಕೊಳ್ಳಿರಿ.

## 30

### 22 – 8 – ಏಪ್ರಿಲ್ 1953

**ಪ್ರಶ್ನೆ:-** ಸರಕಾರಿಯ ನೌಕರಿಯಲ್ಲಿರುವದರಿಂದ ಕರ್ತವ್ಯಪಾಲನೆಗೇ ಹೆಚ್ಚು ಕಾಲವು ವ್ಯಯವಾಗಿರುತ್ತದೆ. ಪರಮಾರ್ಥ ಸಾಧನೆಗೆ ನಾನು ಏನು ಮಾಡಬಹುದು?

**ಉತ್ತರ:-** ನೀವು ಮಾಡಬೇಕಾದ ಕೆಲಸವನ್ನು ಸರ್ಕಾರಕ್ಕಾಗಲಿ ಪ್ರಜೆ ಗಳಿಗಾಗಲಿ ದ್ರೋಹವಾಗದಂತೆ ಮಾಡುವ ಅಭ್ಯಾಸವನ್ನು ಇಟ್ಟುಕೊಳ್ಳಿರಿ. ಅದೇ ಭಗವಂತನ ಸೇವೆ ಎಂದು ಭಾವಿಸಿಕೊಳ್ಳಿರಿ. ಪ್ರತಿದಿನವೂ ಭಗವಂತನನ್ನು ''ದೇವ, ನಾನು ಮನೋವಾಕ್ಕಾಯಗಳಲ್ಲಿ ಯಾರೊಬ್ಬರಿಗೂ ದ್ರೋಹವನ್ನೆಸಗದಂತೆ ಮಾಡು; ನನ್ನ ಉದ್ಯೋಗವನ್ನು ಮಾಡುವಾಗ ನೀನು ಸಾಕ್ಷಿಯಾಗಿರುವೆ ಎಂಬ ನೆನಪನ್ನು ಕೊಡು!'' ಎಂದು ಬೇಡಿಕೊಳ್ಳಿರಿ.

**ಪ್ರಶ್ನೆ:-** ಮಕ್ಕಳಿಗೆ ಯಾವ ಆಸ್ತಿಯನ್ನು ಮಾಡಿಡುವದು ಉತ್ತಮ? ಜಮೀನುಗಳನ್ನು ಅವರು ಕೃಷಿಮಾಡದೆ ಹೋಗಬಹುದು; ಬ್ಯಾಂಕುಗಳಲ್ಲಿರುವ ಹಣವು ಮುಳುಗಬಹುದು; ವ್ಯಾಪಾರದಲ್ಲಿರುವ ಲಾಭನಷ್ಟಗಳು ಚಂಚಲ ವಾಗಿರುವವು. ಇಂಥ ಕಷ್ಟಕಾಲದಲ್ಲಿ ಅವರಿಗೆ ಅಧ್ಯಾತ್ಮಚಿಂತನೆ ಸಾಗುವದು ಹೇಗೆಂಬುದೇ ನನ್ನ ಯೋಚನೆ.

**ಉತ್ತರ:-** ಪರಮಾತ್ಮಭಕ್ತಿಯೇ ಮುಖ್ಯವಾದ ಆಸ್ತಿ ಎಂದು ತಿಳಿಯಬೇಕು. ದುಷ್ಟವಾಸನೆಗಳನ್ನು ತಪ್ಪಿಸಿ ಪರಮಾತ್ಮನಲ್ಲಿ ಶ್ರದ್ಧಾಭಕ್ತಿಗಳು ಸ್ಥಿರವಾಗುವದಕ್ಕೆ ತಕ್ಕ ಏರ್ಪಾಡನ್ನು ಮಾಡಿರಿ. ನೀವು ದುಡಿದು ಇಟ್ಟಿರುವ ಭೂಮಿಯಾಗಲಿ, ಬ್ಯಾಂಕಿನ ಹಣವಾಗಲಿ, ಅಂಗಡಿಯ ಬದುಕಾಗಲಿ ಅಥವಾ ಮತ್ತೆ ಯಾವ ಬಗೆಯ ಜೀವನೋಪಾಯವಾಗಲಿ, ಅವರಿಗೆ ನಿಜವಾಗಿ ಜೀವನೋಪಾಯವಾಗ ಬೇಕಾದರೆ, ಅವರಿಗೆ ಸುಖದಾಯಕವಾಗಬೇಕಾದರೆ, ಆ ಪರಮೇಶ್ವರನ ಅನುಗ್ರಹದಿಂದಲೇ.

**ಪ್ರಶ್ನೆ:-** ಬೇಸಗೆಯ ರಜದಲ್ಲಿ ನನಗೆ ಸಿಕ್ಕುವ ವಿರಾಮಕಾಲವನ್ನು ಹೇಗೆ ಉಪಯೋಗಿಸಲಿ!

**ಉತ್ತರ:-** ನಿಮ್ಮ ಊರಲ್ಲಿದ್ದರೆ ತಂದೆತಾಯಿಗಳ ಸೇವೆಯನ್ನು ಮಾಡುವದು, ಪ್ರತಿದಿನವೂ ಈಶ್ವರಾರ್ಚನೆ ಅಥವಾ ಪ್ರಾರ್ಥನೆಯನ್ನು ಬಿಡದೆ ಮಾಡುವದು, ನಿತ್ಯಗಟ್ಟಲೆಯ ಆಹ್ನಿಕವನ್ನೂ ನಾಮಜಪವನ್ನೂ ಬಿಡದೆ ಮಾಡುವದು, ಪುರಾಣಶ್ರವಣ, ಸಂಸ್ಕೃತಭಾಷಾಭ್ಯಾಸ, ಗೀತಾದಿಪುಸ್ತಕಗಳನ್ನು ಪಾರಾಯಣ ಮಾಡುವುದು– ಇವು ಕೆಲವು ಕಾಲಯಾಪನೆಗೆ ಉಪಾಯಗಳು.

## 31

### 22 - 9 - ಮೇ 1953

**ಪ್ರಶ್ನೆ:-** ನಾನು ಜೀವಿತಕಾಲದಲ್ಲೆಲ್ಲ ಬ್ರಹ್ಮಚಾರಿಯೇ ಆಗಿರಬೇಕೆಂದು ಸಂಕಲ್ಪಿಸಿರುವೆನು. ಇದರ ವಿಷಯದಲ್ಲಿ ತಮ್ಮ ಅಭಿಪ್ರಾಯವೇನು?

**ಉತ್ತರ:-** ಸಂಕಲ್ಪವು ಒಳ್ಳೆಯದು. ಬ್ರಹ್ಮಚರ್ಯೆ ಎಂದರೆ ವೇದಾಭ್ಯಾಸ ಕ್ಕಾಗಿ ಅಥವಾ ತತ್ತ್ವಜ್ಞಾನಕ್ಕಾಗಿ ಗುರುವಿನ ಸೇವೆಯನ್ನು ಮಾಡುತ್ತಾ ಇಂದ್ರಿಯ ಗಳನ್ನು ನಿಯಮದಿಂದ ಹಿಡಿದುಕೊಂಡಿರುವ ತಪಸ್ಸೆಂಬುದನ್ನು ಮರೆಯಬೇಡಿರಿ.

**ಪ್ರಶ್ನೆ:-** ಕೆಲವರು ಸಂನ್ಯಾಸಿಗಳಿಗೆ ಬಹಳ ನಿಯಮಗಳಿರುವವೆನ್ನುವರು.

ಮತ್ತೆ ಕೆಲವರು ಪರಮಹಂಸರಿಗೆ ಯಾವ ನಿಯಮವೂ ಇಲ್ಲವೆನ್ನುತ್ತಾರೆ. ಇವೆರಡು ಮತಗಳಲ್ಲಿ ಯಾವದು ಸರಿ?

**ಉತ್ತರ:-** ಸಂನ್ಯಾಸಿಗಳಿಗೆ ಬ್ರಹ್ಮಚಿಂತನೆ ಎಂಬ ನಿಯಮವು ಅತ್ಯವಶ್ಯ. ಪರಮಾರ್ಥಸಂನ್ಯಾಸಿಗಳಾಗಬೇಕೆನ್ನುವ ಅಭ್ಯಾಸಿಗಳು ಯಮನಿಯಮಾದಿಗಳಿಂದೊಡಗೂಡಿದ ಧ್ಯಾನಯೋಗವನ್ನು ಅವಲಂಬಿಸಬೇಕಾಗುವದು; ಗುರುಗಳ ಸೇವೆಯಲ್ಲಿದ್ದು ಶ್ರವಣಾದಿಗಳನ್ನು ಅಭ್ಯಾಸಮಾಡಬೇಕಾಗುವದು. ಆದರೆ ಪರಮಹಂಸ ಸಂನ್ಯಾಸಿಗಳಿಗೆ ವ್ರತೋಪವಾಸಾದಿನಿಯಮಗಳಿರಬೇಕೆಂಬುದು ಸರಿಯಲ್ಲ; ಯಾವ ನಿಯಮವೂ ಇಲ್ಲದೆ ಸ್ವೇಚ್ಛಾಚಾರಿಗಳಾಗಿರುವವರು ಸಂನ್ಯಾಸಿಗಳಲ್ಲ, ಪಶುಗಳೇ.

**ಪ್ರಶ್ನೆ:-** ನನಗೆ ಆಗಾಗ್ಗೆ ಕೆಲವು ಕಷ್ಟಗಳು ಬರುತ್ತಿರುವವು; ಇದು ನನಗೆ ವೇದಾಂತದ ಕಡೆಗೆ ಒಲವಾಗುವದಕ್ಕೆ ಸಹಾಯಕವಲ್ಲವೆ?

**ಉತ್ತರ:-** ಕಷ್ಟಗಳು ಬಂದೊದಗಿದವರೆಲ್ಲರೂ ವೇದಾಂತಾಭ್ಯಾಸಿಗಳಾಗುವದಾಗಿದ್ದರೆ ಇಡಿಯ ಭೂಲೋಕವೇ ವೇದಾಂತಿಮಯವಾಗಿರುತ್ತಿತ್ತು. ಏಕೆಂದರೆ ಕಷ್ಟಗಳು ಬಂದೊದಗಿದಾಗ ಸಂಸಾರದ ಅಸಾರತೆಯನ್ನು ನೆನಪಿಗೆ ತಂದುಕೊಂಡು ಪರಮಾರ್ಥಜ್ಞಾನಕ್ಕೇ ಹೆಚ್ಚು ಮನಸ್ಸುಕೊಡುತ್ತಾರೆ. ಅಷ್ಟೇ. ನಿಮಗೂ ಈ ಮನಸ್ಸು ಬಂದಿದ್ದರೆ ಶುಭಚಿಹ್ನೆ.

**ಪ್ರಶ್ನೆ:-** ನಮ್ಮ ಬಂಧುಗಳು ಒಬ್ಬೊಬ್ಬರಾಗಿ ನನ್ನನ್ನು ಕೈಬಿಡುತ್ತಿದ್ದಾರೆ. ನಾನು ತತ್ತ್ವವಿಚಾರಕ್ಕೆ ಮನಸ್ಸು ಮಾಡಿದಂದಿನಿಂದ ಹೀಗಾಗಿದೆ; ಇದಕ್ಕೇನು ಮಾಡಲಿ?

**ಉತ್ತರ:-** ನಿಮಗೆ ತತ್ತ್ವವಿಚಾರವೇ ಹೆಚ್ಚಾಗಿ ಬೇಕಿದ್ದರೆ ಅದಕ್ಕೆ ಸಹಾಯಕರಾದ ಬಂಧುಗಳು ನಿಮ್ಮನ್ನು ಬಿಡುವದೇ ಇಲ್ಲ. ಮಿಕ್ಕವರಿಗೆ ನಿಮ್ಮ ವಿಚಾರವು ಬೇಕಿಲ್ಲ; ನಿಮ್ಮ ಧನವು ಬೇಕಾಗಿರಬಹುದು.

## 32

### 22 - 10 - ಜೂನ್ 1953

**ಪ್ರಶ್ನೆ:-** ನಮ್ಮೂರಿನಲ್ಲಿ ಭಜನೆಯ ಮಂಡಲಿಯಿದೆ. ಅದರಲ್ಲಿ ನಾವು ಇಪ್ಪತ್ತು ಮೂವತ್ತು ಜನರು ಭಾಗವಹಿಸುತ್ತಿದ್ದೇವೆ. ಈಗ ಎರಡು ವರ್ಷಗಳಾದರೂ ಅದರಿಂದ ನನಗೆ ಯಾವ ಲಾಭವೂ ಕಾಣಿಸುತ್ತಿಲ್ಲವಲ್ಲ!

**ಉತ್ತರ:-** ಭಜನೆಗೆ ಸೇರುವವರು ಭಜನೆಗೇ ಸೇರಬೇಕು. ಅಲ್ಲಿ ಮಾತು

ಕಥೆ, ಸಂಗೀತದ ಹಾವಳಿ, ಚರಪಿನ (ಪ್ರಸಾದದ) ವಿನಿಯೋಗ– ಇವುಗಳಲ್ಲಿ ಮನಸ್ಸಿರುವವರಾಗಬಾರದು. ತಮ್ಮ ತಮ್ಮ ತಿಳಿವಳಿಕೆಯ ಪ್ರದರ್ಶನ ಖಂಡಿತ ಸೇರಬಾರದು. ಹೀಗಾದರೆ ಅವಶ್ಯವಾಗಿ ನಿಮಗೆ ಅಧ್ಯಾತ್ಮ ಲಾಭವುಂಟಾಗುವದು.

**ಪ್ರಶ್ನೆ:-** ನಾಮಜಪವನ್ನು ಮಾಡುವದಕ್ಕೆ ಕೆಲವು ನಿಯಮಗಳಿರಬೇಕೆಂದು ಕೆಲವರು, ಮಡಿಮೈಲಿಗೆ ಮುಂತಾದ ಯಾವ ನಿಯಮವೂ ಬೇಕಿಲ್ಲವೆಂದು ಕೆಲವರು. ಯಾವ ಅಭಿಪ್ರಾಯವು ಸರಿ?

**ಉತ್ತರ:-** ಇದು ಭಗವನ್ನಾಮವೆಂಬ ಶ್ರದ್ಧೆ, ಪರಮಾತ್ಮನ ಪ್ರೇಮ, ಅಸದ್ವಿಚಾರದ ತ್ಯಾಗ– ಇಂಥವುಗಳನ್ನು ನಿಯಮದಿಂದ ಸಂಪಾದಿಸಿಕೊಂಡಿರ ಬೇಕು. ಆದ್ದರಿಂದ ನಿಯಮವು ಬೇಕೆಂಬವರ ಅಭಿಪ್ರಾಯವು ಸರಿ. ಮಡಿ ಮೈಲಿಗೆಗಳ ಚಿಂತೆಯನ್ನು ಹತ್ತಿಸಿಕೊಂಡು ನಾಮಜಪವನ್ನು ಬಿಡತಕ್ಕದ್ದಲ್ಲ; ನಾಮಜಪದಿಂದಲೇ ನಾವು ಮಡಿಯಾಗುವೆವು. ಆದ್ದರಿಂದ ನಿಯಮವು ಬೇಕಿಲ್ಲ ವೆಂಬವರ ಅಭಿಪ್ರಾಯವೂ ಸರಿ. ಆದರೆ ಬೇಕೆಂತ ಮಡಿಮೈಲಿಗೆಯ ಕಟ್ಟನ್ನು ಮೀರುವವರು ಎಂದಿಗೂ ನಿಜವಾದ ನಾಮಭಕ್ತರಲ್ಲ.

**ಪ್ರಶ್ನೆ:-** ಜಾತಿ, ವರ್ಣಾಶ್ರಮಧರ್ಮ, ಅಧಿಕಾರ–ಎಂದು ಮುಂತಾಗಿ ಭೇದ ಭಾವಗಳನ್ನು ಹಬ್ಬಿಸುವವರ ಅಭಿಪ್ರಾಯವನ್ನು ನಾವು ಈಗ ಮನ್ನಿಸಬೇಕೆ, ಬಾರದೆ?

**ಉತ್ತರ:-** ತಮ್ಮ ಜಾತ್ಯಾದಿಗಳ ಹೆಚ್ಚುಗಾರಿಕೆಯನ್ನು ತೋರ್ಪಡಿಸಿ ಕೊಳ್ಳುವದಕ್ಕೆ ಈ ಭಾವನೆಗಳನ್ನು ಮುಂದಿಡುವವರ ಅಭಿಪ್ರಾಯವನ್ನು ಮನ್ನಿಸ ಬೇಕಾದದ್ದಿಲ್ಲ. ಆದರೆ ಈ ಭಾವನೆಗಳು ಸಾಧಕರಿಗೆ ಸರ್ವಥಾ ಅನಾದರಣೀಯ ವೆಂದು ಬಗೆಯುವದು ತಪ್ಪು.

## 33

### 22 - 12 - ಆಗಸ್ಟ್ 1953

**ಪ್ರಶ್ನೆ:-** ಈ ಊರಿನಲ್ಲಿ ಕರ್ಮಠರ ಗುಂಪು ಒಂದು, ನಾಮಭಕ್ತರ ಗುಂಪು ಒಂದು– ಹೀಗೆ ಎರಡು ತಂಡದ ಜನರು ಇರುತ್ತಾರೆ. ನಾಮಪ್ರೇಮಿಗಳು ಕರ್ಮಿಗಳನ್ನು ಜರೆಯುತ್ತಾರೆ; ಕರ್ಮಿಗಳು ನಾಮದ ಮಂಡಲಿಯನ್ನು ಜರೆಯುತ್ತಾರೆ. ಸಾಮಾನ್ಯಜನರಿಗೆ ಇವರಿಬ್ಬರ ಬೀಗರ ಹಾಡನ್ನೂ ಕೇಳಿ ಕೇಳಿ ಏನೂ ತೋಚದಂತೆ ಆಗಿದೆ. ಈ ಕಾಲಕ್ಕೆ ಯಾವದು ಸರಿ? ದ್ವಿಜರು ಕರ್ಮವನ್ನು ಮಾಡಬೇಕೆ, ಬಿಡಬೇಕೆ?

**ಉತ್ತರ:-** ದ್ವಿಜರೆಂದರೇ ಅಧ್ಯಯನಾದಿಕರ್ಮಗಳನ್ನು ಮಾಡುವವರು. ಆದರೆ ಈ ಕಾಲಕ್ಕೆ ತಕ್ಕಷ್ಟು ಕರ್ಮವು ಮಾತ್ರ ಸಾಮಾನ್ಯ ಜನರಿಗೆ ಸಾಧ್ಯವಾಗಿರುತ್ತದೆ. ಕರ್ಮವನ್ನು ನಿಂದಿಸುವವರು ಎಂದಿಗೂ ಈಶ್ವರ ಭಕ್ತರಾಗಲಾರರು. ಆದ್ದರಿಂದ ಯಥಾಶಕ್ತಿಯಾಗಿ ಕರ್ಮವನ್ನು ಮಾಡಿರಿ. ಇನ್ನು ಈಶ್ವರನ ನಾಮವನ್ನು ಅಥವಾ ನಾಮೋಚ್ಚಾರಣೆಯನ್ನು ನಿಂದೆಮಾಡುವವರು ಆ ಈಶ್ವರನ ಲೀಲಾನಿಃಶ್ವಾಸವಾದ ವೇದಕ್ಕೆ ಗೌರವವನ್ನು ತೋರಿಸಿದಂತೆ ಆದೀತೆ? ವೇದಾಧ್ಯಯನವು ಕೂಡ ಭಗವಂತನ ನಾಮವಾದ ಓಂಕಾರದಿಂದ ಆರಂಭವಾಗಿ ಓಂಕಾರದಿಂದಲೇ ಮುಗಿಯುವದು. ಆದ್ದರಿಂದ ಅವಶ್ಯವಾಗಿ ನಾಮಕೀರ್ತನೆಯನ್ನು ಮಾಡಿರಿ. ಮತ್ತೊಬ್ಬರ ಅಭಿಪ್ರಾಯಕ್ಕೆ ಕಿವಿಗೊಡದೆ ಭಗವಂತನನ್ನು ಸ್ತುತಿಸುತ್ತಾ ಭಗವತ್ಕರ್ಮವನ್ನು ಮಾಡುತ್ತಾ ಧನ್ಯರಾಗಿರಿ.

**ಪ್ರಶ್ನೆ:-** ನನಗೆ ಸಂಧ್ಯಾವಂದನೆಯ ಮಂತ್ರಗಳು ಮರೆತುಹೋಗುತ್ತಾ ಬಂದಿವೆ. ಮಿಕ್ಕ ಕರ್ಮಗಳಂತೂ ಬಹಳ ದೂರವಾಗಿವೆ. ಗಾಯತ್ರೀ ಜಪವನ್ನೇನೋ ಮಾಡುತ್ತಿದ್ದೇನೆ. ಈಗ ನಾನು ಉದ್ಧಾರವಾಗುವದಕ್ಕೆ ಏನೂ ಮಾರ್ಗವಿಲ್ಲವೆ?

**ಉತ್ತರ:-** ಕಲಿಗಾಲದಲ್ಲಿ ಕರ್ಮಕ್ಕೆ ಅಡ್ಡಿಗಳು ಬರುವದು ಸಹಜವಾಗಿದೆ. ಆದರೂ ಅಂಜದಿರಿ. 'ಯುಗರೂಪಾ ಹಿ ತೇ ದ್ವಿಜಾಃ' ಎಂದು ಪರಾಶರಸ್ಮೃತಿಯಿದೆ. ಗಾಯತ್ರಿಯನ್ನು ಶ್ರದ್ಧೆಯಿಂದ ಜಪಿಸುತ್ತಿರಿ. ನಿಮ್ಮ ಊರಿನಲ್ಲಿ ಬಲ್ಲವರಿಂದ ಮಿಕ್ಕ ಮಂತ್ರಗಳನ್ನು ಆದಷ್ಟು ಹೇಳಿಸಿಕೊಳ್ಳಿರಿ. ಅದರ ಅರ್ಥವನ್ನು ಬಲ್ಲವರಿಂದ ತಿಳಿದುಕೊಳ್ಳಿರಿ. ಆಗ ಸಂಧ್ಯಾವಂದನಾದಿ ಕರ್ಮಗಳಲ್ಲಿ ರುಚಿ ಹತ್ತುವದು. ಸದ್ಯಕ್ಕೆ ಯಾವದಾದರೂ ಸ್ತೋತ್ರವನ್ನು ಕಲಿತುಕೊಂಡಾದರೂ ಪಠಿಸುತ್ತಿರಿ.

## 34

### 23 - 1 - ಸೆಪ್ಟೆಂಬರ್ 1953

**ಪ್ರಶ್ನೆ:-** ನಾನಿರುವ ನಗರದಲ್ಲಿ ದಿನದಿನವೂ ಅಧ್ಯಾತ್ಮವಿಚಾರದ ಉಪನ್ಯಾಸಗಳು ಆಗುತ್ತಲೇ ಇರುತ್ತವೆ. ಆದರೆ ಒಬ್ಬೊಬ್ಬರು ಒಂದು ಬಗೆಯಲ್ಲಿ ತತ್ತ್ವವನ್ನು ತಿಳಿಸುತ್ತಾರೆ. ನಾನು ಇವುಗಳಲ್ಲಿ ಯಾವವನ್ನು ಆರಿಸಿಕೊಳ್ಳಲಿ!

**ಉತ್ತರ:-** ಕೆಲವು ದಿನ ಇಂಥ ಉಪನ್ಯಾಸಗಳನ್ನು ಕೇಳುವದರಿಂದ ಕುತೂಹಲನಿವೃತ್ತಿಯಾಗಬಹುದು. ಆದರೆ ನಮ್ಮ ಸಾಧನಕ್ಕೆ ಸದ್ಗುರುವಾದವ

ರೊಬ್ಬರ ಸದುಪದೇಶವು ಬೇಕು. ಹೊಸದಾಗಿ ಗರಡಿಯ ಸಾಧನೆ ಮಾಡುವವರಿಗೆ ಜಟ್ಟಿಗಳ ಕಾಳಗವನ್ನು ನೋಡಿದ ಮಾತ್ರದಿಂದ ಯಾವ ಪ್ರಯೋಜನವಾದೀತು?

**ಪ್ರಶ್ನೆ:-** ಒಬ್ಬೊಬ್ಬ ಆಚಾರ್ಯರು ಒಂದು ಬಗೆಯಲ್ಲಿ ಉಪದೇಶಿಸಿರುವದರಿಂದ ಜಿಜ್ಞಾಸುಗಳಿಗೆ ಮನಸ್ಸಿನಲ್ಲಿ ತುಂಬ ಗೊಂದಲವೇಳುವದಕ್ಕೆ ಕಾರಣವಾಗಿರುತ್ತದೆ. ಈ ಆಚಾರ್ಯರುಗಳ ಮತವನ್ನೆಲ್ಲ ಏಕವಾಕ್ಯತೆಮಾಡಿ ಒಂದು ಹೊಸ ಮತವನ್ನೇಕೆ ಏರ್ಪಡಿಸಬಾರದು?

**ಉತ್ತರ:-** ಹಾಗೆ ಮಾಡುವದಕ್ಕೆ ಹೊರಟರೆ ಹೇಗೆ ಏಕವಾಕ್ಯತೆ ಮಾಡಬೇಕೆಂಬ ವಿಷಯದಲ್ಲಿಯೇ ವಿವಾದಗಳುಂಟಾಗಬಹುದು. ಕೂಡಲೆ ಅನುಷ್ಠೇಯವೆಂದು ನಿಮಗೆ ತೋರುವ ಒಬ್ಬ ಆಚಾರ್ಯರ ಉಪದೇಶವನ್ನು ಕೇಳಿ ಅದಕ್ಕೆ ತಕ್ಕಂತೆ ಸಾಧನವನ್ನು ಹೊಂದಿಸಿಕೊಳ್ಳುವದಕ್ಕೆ ಯತ್ನಿಸಿರಿ. ಹಸಿವಾಗಿರುವವನು ಊರಿನ ಹೋಟಲು (ಖಾನಾವಳಿ)ಗಳನ್ನೆಲ್ಲ ಒಂದುಗೂಡಿಸುವದಕ್ಕೆ ಪ್ರಯತ್ನ ಮಾಡುವನೇನು?

**ಪ್ರಶ್ನೆ:-** ಈಶ್ವರನ ಅಸ್ತಿತ್ವವನ್ನು ತರ್ಕದಿಂದ ಸಿದ್ಧಮಾಡಿಕೊಳ್ಳದೆ ಧ್ಯಾನಕ್ಕೆ ತೊಡಗುವದು ಹೇಗೆ? ದೇವರೇ ನಿಜವಾಗಿಲ್ಲದಿದ್ದರೆ ಧ್ಯಾನವು ವ್ಯರ್ಥವಾಗುವದಿಲ್ಲವೆ?

**ಉತ್ತರ:-** ನೀವು ಪ್ರಶ್ನೆಯನ್ನು ಹೃದಯಪೂರ್ವಕವಾಗಿ ಕೇಳಿದ್ದರೆ ಈಗಲೆ ನೀವು ಧ್ಯಾನವನ್ನಾರಂಭಿಸುವ ಸಂಭವವೇ ಇಲ್ಲ. ಏಕೆಂದರೆ ನೀವಿನ್ನೂ ತರ್ಕಭೂಮಿಯಲ್ಲಿರುತ್ತೀರಿ; ಧ್ಯಾನವು ತರ್ಕದ ಆಚೆಗೆ ಇರುತ್ತದೆ.

**ಪ್ರಶ್ನೆ:-** ಈಶ್ವರನ ಧ್ಯಾನವನ್ನು ಹೇಗೆ ಪ್ರಾರಂಭಿಸಲಿ? ಜಪ, ಸ್ತೋತ್ರ ಪಾರಾಯಣ– ಇವುಗಳಲ್ಲಿ ಯಾವದು ಅದಕ್ಕೆ ಹೆಚ್ಚಿನ ದ್ವಾರವಾದೀತು?

**ಉತ್ತರ:-** ನಿಮಗೆ ಮೆಚ್ಚಾದದ್ದನ್ನು ದ್ವಾರವಾಗಿ ಉಪಯೋಗಿಸಿಕೊಳ್ಳಿರಿ. ಆದರೆ ಈಶ್ವರನು ಎಲ್ಲೆಲ್ಲಿಯೂ ಇರುತ್ತಾನೆ, ಈ ಜಪದಲ್ಲಿ ಸ್ತೋತ್ರದಲ್ಲಿ ಅಥವಾ ಪಾರಾಯಣ ಗ್ರಂಥದಲ್ಲಿ ಈಗಲೇ ಸನ್ನಿಹಿತನಾಗಿರುತ್ತಾನೆ ಎಂಬ ಭಾವನೆಯಿಂದ ಮೊದಲುಮಾಡಿರಿ.

## 35

### 23 - 3 - ನವೆಂಬರ್ 1953

**ಪ್ರಶ್ನೆ:-** ನಾನು ಕನಸಿನಲ್ಲಿ ಒಬ್ಬ ಸಾಧುಗಳನ್ನು ಕಂಡೆನು. ಇದೊಂದು ಶುಭಸೂಚನೆಯೆ?

**ಉತ್ತರ:-** ಎಚ್ಚರದಲ್ಲಿ ಕಂಡ ಸಾಧುಗಳನ್ನು ವಿನಯದಿಂದ ನಮಸ್ಕರಿಸಿ ಅವರಿಂದ ಸಾಧನದ ಉಪದೇಶವನ್ನು ಪಡೆಯಿರಿ. ನಿಮ್ಮ ಕನಸಿನ ಸಾಧುಗಳು ನಿಮಗೆ

ಏನಾದರೂ ಹೇಳಿಕೊಟ್ಟರೇನು? ಅದೊಂದು ಉತ್ತಮವಾದ ಬೋಧೆಯೆಂದು ನಿಮಗೆ ಈಗಲೂ ತೋರುತ್ತಿದೆಯೆ? ಹಾಗಾದರೆ ಅದೊಂದು ಶುಭಸೂಚನೆಯೇ ಸರಿ.

**ಪ್ರಶ್ನೆ:-** ಅಧ್ಯಾತ್ಮಪ್ರಕಾಶ ಪತ್ರಿಕೆಯಲ್ಲಿ ಬಗೆಬಗೆಯ ಲೇಖನಗಳು ಬರುತ್ತಿವೆ. ಅವನ್ನು ನಾನು ಹೇಗೆ ಉಪಯೋಗಿಸಿಕೊಳ್ಳಲಿ?

**ಉತ್ತರ:-** ನಿಮ್ಮಲ್ಲಿರುವ ದೋಷವನ್ನು ತಿದ್ದುವದಕ್ಕೆ ಅಥವಾ ನಿಮ್ಮ ಅಧ್ಯಾತ್ಮ ಸಾಧನವನ್ನು ಇನ್ನೂ ಉತ್ತಮವಾಗಿ ಮಾಡುವದಕ್ಕೆ ಯಾವದಾದರೂ ಉತ್ತಮವಾದ ಸಾಧನವೆಂದು ಕಂಡುಬಂದರೆ ಅದನ್ನು ಕೂಡಲೆ ಆಚರಣೆಗೆ ತಂದುಕೊಳ್ಳುವದಕ್ಕೆ ಉಪಯೋಗಿಸಿಕೊಳ್ಳಿರಿ. ಆದರೆ ನೀವು ಈಗ ಕೈಕೊಳ್ಳಲಾರದ ಸಾಧನಗಳಾಗಲಿ ಉಪದೇಶಗಳಾಗಲಿ ಇದ್ದರೆ ಅವುಗಳನ್ನು ಓದಿ ವಿಚಾರಕ್ಕೆ ಇಟ್ಟುಕೊಳ್ಳಿರಿ. ಆದರಿಂದ ಮನಸ್ಸಿಗೆ ಒಳ್ಳೆಯ ಸಂಸ್ಕಾರವಾಗುವುದು.

**ಪ್ರಶ್ನೆ:-** ಶಂಕರಾಚಾರ್ಯರ ಪ್ರಧಾನವಾದ ಉಪದೇಶಗಳು ಯಾವವು? ನಾನು ಯಾವ ಗ್ರಂಥವನ್ನು ಮೊದಲು ಪ್ರಾರಂಭಮಾಡಲಿ?

**ಉತ್ತರ:-** ಸಿದ್ಧಾಂತದ ಸಾರವನ್ನು ತಿಳಿಯುವದಕ್ಕೆ ಹೊರಟರೆ ಪರಮಾತ್ಮನೊಬ್ಬನೇ ಪರಮಾರ್ಥವು; ಅವನೇ ನಮ್ಮೆಲ್ಲರ ಆತ್ಮನು– ಎಂಬುದೇ ಆಚಾರ್ಯರ ಪ್ರಧಾನೋಪದೇಶವು. ಸಾಧನದ ಸಾರವನ್ನು ತಿಳಿಯುವದಕ್ಕೆ ಹೊರಟರೆ ನಮ್ಮ ನಮ್ಮ ಕರ್ಮವನ್ನು ಪರಮೇಶ್ವರನ ಅರ್ಚನೆಯೆಂದು ಮಾಡಬೇಕು ಎಂಬುದೇ ಅವರ ಪ್ರಧಾನೋಪದೇಶವು. ಹೆಚ್ಚು ವಿವರವನ್ನು ತಿಳಿಯಬೇಕೆನ್ನುವದಾದರೆ ಪತ್ರಿಕೆಯಲ್ಲಿ ಈಗ ಪ್ರಕಟವಾಗುತ್ತಿರುವ ''ಶಂಕರಭಗವತ್ಪಾದರ ಸರ್ವಸಮ್ಮತೋಪದೇಶಗಳು'' ಎಂಬ ಲೇಖನಮಾಲೆಯನ್ನು ಓದಿರಿ. ಪತ್ರಿಕೆಯನ್ನು ಓದಿದಮೇಲೂ ನಿಮಗೆ ಯಾವದಾದರೂ ಸಂಶಯವಿದ್ದರೆ ಕಾರ್ಯಾಲಯಕ್ಕೆ ಬರೆಯಿರಿ. ನಿಮ್ಮ ತಿಳಿವಳಿಕೆಯ ಮಟ್ಟ, ಸಾಧನದ ಮಾರ್ಗ– ಇವುಗಳನ್ನು ತಪ್ಪದೆ ತಿಳಿಸಿ.

## 36

## 23 - 4 - ಡಿಸೆಂಬರ್ 1953

**ಪ್ರಶ್ನೆ:-** ''ಅಚ್ಯುತಾನಂತಗೋವಿಂದ ನಾಮೋಚ್ಚಾರಣಭೇಷಜಾತ್। ನಶ್ಯನ್ತಿ ಸಕಲಾ ರೋಗಾಃ ಸತ್ಯಂ ಸತ್ಯಂ ವದಾಮ್ಯಹಮ್॥'', ''ಔಷಧಂ ಜಾಹ್ನವೀತೋಯಂ ವೈದ್ಯೋ ನಾರಾಯಣೋ ಹರಿಃ''– ಹೀಗೆ ಮಹಾತ್ಮರ ಉಪದೇಶಗಳಿವೆ. ಇದರ ಅನುಭವವು ನಮಗೆ ಹೇಗೆ ಆಗಬೇಕು?

**ಉತ್ತರ:-** ಪರಮಾತ್ಮನು ಅಚ್ಯುತನು, ಅವನು ತನ್ನ ಸ್ಥಿತಿಯಿಂದ ಎಂದಿಗೂ ಜಾರುವವನಲ್ಲ; ಅವನು ಅನಂತನು, ಅವನಿಗೆ ಯಾವ ದೇಶಕಾಲ ವಸ್ತುಗಳ ಎಲ್ಲೆಕಟ್ಟೂ ಇರುವದಿಲ್ಲ; ಅವನು ಗೋವಿಂದನು, ವೇದವನ್ನೆಲ್ಲ ಕಾಪಿಟ್ಟು ರಕ್ಷಿಸುವಾತನು. ಇಂಥ ಪರಮಾತ್ಮನ ಅಂಶರು ನಾವೆಂದು ಶಾಸ್ತ್ರಗಳು ಹೇಳುತ್ತಿವೆ. ಇದರ ಜ್ಞಾನವನ್ನು ನೇರಾಗಿ ಪಡೆಯದಿದ್ದರೂ ಶ್ರದ್ಧಾಭಕ್ತಿಗಳಿಂದ ನಮ್ಮನ್ನು ಆತನಿಗೇ ಸಂಪೂರ್ಣವಾಗಿ ಒಪ್ಪಿಸಿಬಿಡಬೇಕು. ಈ ಮನೋಭಾವದಿಂದ ನೀವು ಬರೆದಿರುವ ನಾಮೋಚ್ಚಾರಣೆಯ ಶ್ಲೋಕವನ್ನು ಹೃತ್ಪೂರ್ವಕವಾಗಿ ಉಚ್ಚರಿಸುತ್ತಾ ಬನ್ನಿರಿ. ನಿಮ್ಮ ರೋಗಗಳು ಅವಶ್ಯವಾಗಿ ನಾಶವಾಗುವವು. ಶ್ರದ್ಧಾಭಕ್ತಿಗಳ ಔತ್ಕಟ್ಯಕ್ಕೆ ತಕ್ಕಂತೆ ಮನಸ್ಸಿನ ರೋಗಗಳಾದರೂ ಕೂಡಲೆ ಮಾಯವಾಗುವವು. ಬರಿಯ ನಾಮೋಚ್ಚಾರಣವೇ ರೋಗನಿವಾರಣೆಗೆ ಸಾಕಾಗಲಾರದೆಂಬ ಭಾವವಿದ್ದವರು ಔಷಧಿಯನ್ನೂ ತೆಗೆದು ಕೊಳ್ಳಲಿ. ಆದರೆ ಆ ಔಷಧವು ಪರಮಾತ್ಮನ ಪಾದಾರವಿಂದದಿಂದ ಬಂದಿರುವ ಗಂಗೆಯೆಂದೇ ನಂಬಲಿ! ಆಗ ಔಷಧ, ವೈದ್ಯ– ಇವರನ್ನು ನೆಪಮಾಡಿಕೊಂಡು ಭಗವಂತನೇ ಅವರ ರೋಗಗಳನ್ನು ಪರಿಹರಿಸುವನು.

**ಪ್ರಶ್ನೆ:-** ಎಲ್ಲರನ್ನೂ ದೇವರೆಂದು ಭಾವಿಸಬೇಕು, ಮತ್ತೊಬ್ಬರಿಗೆ ನೋವಾಗದಂತೆ ನಡೆದುಕೊಂಡರೆ ಅದೇ ದೇವರಪೂಜೆ– ಎಂಬ ಉಪದೇಶದ ಅಭಿಪ್ರಾಯವೇನು?

**ಉತ್ತರ:-** ಪರಮಾತ್ಮನು ನಿಜವಾಗಿ ಸರ್ವಭೂತಗಳಲ್ಲಿಯೂ ಇರುತ್ತಾನೆಂಬುದು ಶಾಸ್ತ್ರಸಿದ್ಧಾಂತ. ಆದರೆ ನಮಗೆ ವ್ಯವಹಾರದಲ್ಲಿ ಇದರ ಜ್ಞಾನವು ಉಂಟಾಗುವದಕ್ಕೆ ದೇಹಾಭಿಮಾನವು ಅಡ್ಡಬಂದಿರುತ್ತದೆ. ಆದ್ದರಿಂದ ಪರಮಾತ್ಮನು ಸರ್ವಭೂತಮಯನು ಎಂಬ ಭಾವನೆಯಿಂದ ಎಲ್ಲರಿಗೂ ಸಂತೋಷವಾಗುವಂತೆ ನಡೆದುಕೊಂಡರೆ, ಕೊನೆಯ ಪಕ್ಷಕ್ಕೆ ಯಾರೊಬ್ಬರಿಗೂ ನೋವಾಗದಂತೆ ಪ್ರಯತ್ನಿಸುತ್ತಿದ್ದರೆ, ಭಗವಂತನ ಅನುಗ್ರಹವು ನಮ್ಮ ಮೇಲೆ ಬೀಳುತ್ತದೆ. ಈ ದೃಷ್ಟಿಯಿಂದ ಇದು ದೇವರಪೂಜೆ ಎಂದು ಬಲ್ಲವರು ಇದನ್ನು ಹೊಗಳುತ್ತಾರೆ.

## 37

### 23 – 5 – ಜುಲೈ 1954

**ಪ್ರಶ್ನೆ:-** ಸಂಧ್ಯಾವಂದನೆಯ ತಿರುಳೇನು? ಅದರ ಪ್ರಯೋಜನವು ನಮಗೆ ಆಗುವದಕ್ಕೆ ಮುಖ್ಯವಾಗಿ ಏನು ಮಾಡಬೇಕು?

**ಉತ್ತರ:–** ಗಾಯತ್ರಿಯೇ ಸಂಧ್ಯಾವಂದನೆಯ ತಿರುಳು. ಗಾಯತ್ರೀ

ಜಪವನ್ನು ಮಾಡುವದಕ್ಕೆ ಮುಂಚೆ ಮಾಡುವ ಮಾರ್ಜನ, ಅರ್ಘ್ಯಪ್ರದಾನ-ಮುಂತಾದವುಗಳಿಂದ ಮನಃಶುದ್ಧಿಯನ್ನು ಮಾಡಿಕೊಂಡು ಶ್ರದ್ಧೆಯಿಂದ ಗಾಯತ್ರೀ ಮಂತ್ರವನ್ನು ಜಪಿಸಿರಿ. ಪರಮಾತ್ಮನು ನಮಗೆ ಶುಭಮತಿಯನ್ನಿತ್ತು ಕಾಪಾಡುವನು; ಈ ಮಂತ್ರವನ್ನು ನಾನು ಜಪಿಸುತ್ತಿರುವಾಗ ನನ್ನ ಮನೋವಾಕ್ಕಾಯಗಳ ವ್ಯಾಪಾರವನ್ನು ಈ ದಿವ್ಯಜಪಕ್ಕೆ ನೆರವಾಗುವಂತೆ ಸಹಾಯ ಮಾಡುತ್ತಿರುವ ಆ ದೇವನು ಈಗ ಇಲ್ಲಿಯೇ ನನ್ನ ಹೃದಯದಲ್ಲಿದ್ದುಕೊಂಡು ಪ್ರೇರಿಸುತ್ತಿದಾನೆ ಎಂದು ದೃಢವಿಶ್ವಾಸದಿಂದ ಜಪಿಸಿರಿ. ಉಪಸ್ಥಾನಮಂತ್ರವು ಪರಮೇಶ್ವರನ ಪ್ರಾರ್ಥನೆಯು; ಅದರ ಅರ್ಥವನ್ನು ಬಲ್ಲವರಿಂದ ತಿಳಿದುಕೊಂಡು ಅನುಸಂಧಾನ ಮಾಡಿರಿ.

**ಪ್ರಶ್ನೆ:-** ಗುರೂಪದೇಶವು ಫಲಕಾರಿಯಾಗುವದಕ್ಕೆ ನಾವು ಹೇಗೆ ವರ್ತಿಸಬೇಕು? ಗುರುಗಳೆಂದು ಯಾರನ್ನು ಆರಿಸಿಕೊಳ್ಳಬೇಕು?

**ಉತ್ತರ:-** ಶಾಸ್ತ್ರಾರ್ಥವನ್ನು ಬಲ್ಲವನೂ ಪಾಪರಹಿತನೂ ಕಾಮ, ಕ್ರೋಧಾದಿಗಳಿಗೆ ವಶನಾಗದವನೂ ಆದವನೇ ಗುರುವಾಗಿರುವದಕ್ಕೆ ಅರ್ಹನು. ಯಾವಾತನ ಸನ್ನಿಧಿಯಲ್ಲಿ ನಿಮಗೆ ಮನಃಶಾಂತಿಯೂ ತತ್ತ್ವದಲ್ಲಿ ಆಸಕ್ತಿಯೂ ಉಂಟಾಗುವವೋ ಯಾವಾತನ ಉಪದೇಶದಿಂದ ನಿಮ್ಮ ಅಜ್ಞಾನಮೋಹವು ಕ್ರಮಕ್ರಮವಾಗಿ ತೊಲಗುತ್ತಿರುವದೋ ಆತನು ಸದ್ಗುರುವೆಂದು ನಂಬಬಹುದು.

ಗುರುವು ಮನುಷ್ಯಾಕಾರದಲ್ಲಿರುವದರಿಂದ ಆಯಾ ಶರೀರದ ಪ್ರಾರಬ್ಧ ಕರ್ಮಕ್ಕೆ ತಕ್ಕಂತೆ ಯಾವದಾದರೂ ದೋಷಗಳು ಗೋಚರವಾಗುವದು ಸ್ವಾಭಾವಿಕವಾಗಿದೆ. ಆದರೆ ಇಂಥ ದೋಷಗಳನ್ನೇ ಎತ್ತಿ ಹಿಡಿದು ಮಾತನಾಡುವವರ ಸಂಗವನ್ನು ತೊರೆಯಬೇಕು. ಗುರುವಿನ ಸ್ವಾಭಾವಿಕ ಪ್ರವೃತ್ತಿಯು ಧರ್ಮ ಪ್ರಧಾನವಾಗಿರುವದೊ, ಕಾಮಪ್ರಧಾನವಾಗಿರುವದೊ? – ಎಂಬುದನ್ನು ಮೊದಲೇ ನೋಡಿ ಆತನ ಉಪದೇಶಕ್ಕೆ ಕಿವಿಗೊಡುವದಕ್ಕೆ ಪ್ರಾರಂಭಿಸಬೇಕು. ಆದರೆ ಉಪದೇಶದ ಸತ್ಪರಿಣಾಮವು ಅನುಭವದಲ್ಲಿರುವಾಗ ಆತನಲ್ಲಿ ಕುತಾರ್ಕಿಕ ಬುದ್ಧಿಯಿಂದ ದೋಷಗಳನ್ನು ಕಲ್ಪಿಸುತ್ತಾ ಹೋಗಬಾರದು. ಗುರುವಿನಲ್ಲಿ ಎಂಥ ಭಾವನೆಯಿರುವದೋ ಅಂಥ ಸಿದ್ಧಿಯಾಗುವದು ಎಂದು ಬಲ್ಲವರು ಹೇಳುತ್ತಾರೆ.

## 38

### 23- 6 - ಫೆಬ್ರುವರಿ 1954

**ಪ್ರಶ್ನೆ:-** ಕೆಲವು ವೇಳೆ ನನಗೆ ಏನೂ ಬೇಡವಾಗುವದು; ಕೆಲವು ದುಃಖದ ಘಟನೆಗಳು ನೆನಪಿಗೆ ಬಂದು ಮನಸ್ಸಿಗೆ ಬಹಳ ಭಾರವಾಗುವದು. ಇದಕ್ಕೆ ಪ್ರತೀಕಾರವೇನಾದರೂ ಉಂಟೆ?

**ಉತ್ತರ:-** ಉಂಟು. ಆನಂದಸ್ವರೂಪನಾದ ಪರಮೇಶ್ವರನು ನಮ್ಮೆಲ್ಲರ ಆತ್ಮನು ಎಂಬುದನ್ನು ಮನಸ್ಸಿಗೆ ತಂದುಕೊಳ್ಳಿರಿ. ಅವನು ಈಗಲೇ ಇಲ್ಲಿಯೇ ಇರುತ್ತಾನೆ ಎಂಬ ದೊಡ್ಡವರ ಉಪದೇಶವನ್ನು ಮನಸ್ಸಿಗೆ ತಂದುಕೊಳ್ಳಿರಿ. ಭಗವಂತನ ವಿಚಾರವಾಗಿ ಅನುಭವಿಗಳು ಬರೆದಿರುವ ಗ್ರಂಥವು ಬಳಿಯಲ್ಲಿದ್ದರೆ ಅದರಲ್ಲೊಂದು ಭಾಗವನ್ನು ಓದುವದಕ್ಕೆ ಪ್ರಾರಂಭಿಸಿರಿ. ಅದು ಇಲ್ಲದಿದ್ದರೂ ಭಗವಂತನ ನಾಮವನ್ನು ಮನಃಪೂರ್ವಕವಾಗಿ ಬಿಡದೆ ಉಚ್ಚರಿಸಿರಿ. ಮನಸ್ಸಿಗೆ ಲವಲವಿಕೆಯು ಬಂದುಬಿಡುವದು.

**ಪ್ರಶ್ನೆ:-** ನಮ್ಮವರೆನ್ನುವವರೇ ನಮಗೆ ಕೇಡನ್ನು ಬಯಸಿದಾಗ ಏನು ಮಾಡಬೇಕು? ಆಗ ಮನಸ್ಸಿನಲ್ಲಿ ಎದ್ದುಕೊಳ್ಳುವ ಕೋಪವನ್ನು ತಡೆದುಕೊಳ್ಳುವದು ಸಾಧ್ಯವೆ?

**ಉತ್ತರ:-** ಸಾಧ್ಯ, ನಿಮ್ಮವರು ನಿಮಗೆ ಮೊದಲು ಮಾಡಿದ್ದ ಉಪಕಾರಗಳನ್ನು ಸ್ಮರಿಸಿಕೊಳ್ಳಿರಿ. ನೀವೂ ಅವರಿಗೇನಾದರೂ ಕೆಡಕು ಮಾಡಿದ್ದುಂಟೆ? – ಎಂಬುದನ್ನು ನಿಮ್ಮಲ್ಲಿ ನೀವು ವಿಚಾರಿಸಿಕೊಳ್ಳಿರಿ. ನಿಮ್ಮಲ್ಲಿಯೂ ಅವರಲ್ಲಿಯೂ ಅದೇ ಭಗವಂತನು ಇದಾನೆಂಬುದನ್ನು ಮನದದಂದುಕೊಳ್ಳಿರಿ. ಭಗವಂತನ ನಾಮಸ್ಮರಣೆಯನ್ನು ಮಾಡಿರಿ. ಆಗ ಸ್ವಲ್ಪ ಮನಃಶಾಂತಿಯು ತೋರುವದು. ಆಗ ''ದೇವ, ನಿನ್ನ ನೆನಪನ್ನು ದಯವಿಟ್ಟು ಸತತವೂ ಕೊಡು, ಮತ್ತೊಬ್ಬರನ್ನು ಹಗೆಮಾಡುವ ತಪ್ಪು ಹಾದಿಗೆ ನನ್ನನ್ನು ಬಿಡದಿರು! ನಮ್ಮೆಲ್ಲರಿಗೂ ಸದ್ಬುದ್ಧಿಯನ್ನು ಕೊಡು!'' ಎಂದು ಶ್ರದ್ಧೆಯಿಂದ ಬೇಡಿಕೊಳ್ಳಿ,

**ಪ್ರಶ್ನೆ:-** ನನಗೆ ಕೆಲಸದ ಭರದಲ್ಲಿ ಬಿಡುವೇ ಸಿಕ್ಕುವದಿಲ್ಲ; ಕೆಲಸವನ್ನು ಮಾಡದಿದ್ದರೆ ಹೊಟ್ಟೆಪಾಡು ನಡೆಯುವದಿಲ್ಲ. ಹಗಲೆಲ್ಲ ದುಡಿದುಡಿದು ಸಾಯಂಕಾಲಕ್ಕೆ ಸೋತು ಮನೆಗೆ ಬರುತ್ತೇನೆ. ಈ ಸ್ಥಿತಿಯಿಂದ ಪಾರಾಗಬಹುದೆ?

**ಉತ್ತರ:-** ಕೆಲಸದ ವೇಳೆಯೆಲ್ಲವೂ ನಿಮ್ಮ ವಶದಲ್ಲಿಯೇ ಇದ್ದರೆ, ಎಂದರೆ ನೀವೇ ಸ್ವತಂತ್ರರಾಗಿ ಕೆಲಸವನ್ನು ಮಾಡುತ್ತಿದ್ದರೆ, ಸ್ವಲ್ಪ ಬಿಡುವನ್ನು ಕಲ್ಪಿಸಿಕೊಂಡು ಭಗವತ್ಪ್ರಾರ್ಥನೆಗೆ ಆ ಹೊತ್ತನ್ನು ವಿನಿಯೋಗಿಸಿ. ಪರವಶರಾಗಿ ದುಡಿಯುತ್ತಿದ್ದರೆ ಬೆಳಗ್ಗೆ ಏಳುತ್ತಲೂ ಸಾಯಂಕಾಲ ಮಲಗುವಾಗಲೂ ''ದೇವ, ನಿನ್ನ ಚಿಂತನೆಗೆ ಅವಕಾಶವನ್ನು ಕೊಡು'' ಎಂದು ಬೇಡಿಕೊಳ್ಳಿರಿ. ಕೆಲಸದ ಸಮಯದಲ್ಲಿ ನಾಮಸ್ಮರಣೆ ಮಾಡಿರಿ. ನಿಮ್ಮ ಹೊಟ್ಟೆಪಾಡು ನಿಮ್ಮ ಕೆಲಸದ ಪ್ರಮಾಣಕ್ಕಿಂತಲೂ ಭಗವಂತನನ್ನೇ ಹೆಚ್ಚು ಅವಲಂಬಿಸಿರುತ್ತದೆ.

## 39

## 23 - 7 - ಮಾರ್ಚ್ 1954

**ಪ್ರಶ್ನೆ:-** ಹಣೆಯ ಮೇಲೆ ಭಸ್ಮ, ಗಂಧ, ಅಂಗಾರಾಕ್ಷತೆ– ಮುಂತಾದವುಗಳನ್ನು ಇಡುತ್ತಿದ್ದ ಕಾಲವು ಈಗ ಲುಪ್ತಪ್ರಾಯವಾಗಿದೆ. ಈಗಿನ ಕಾಲದಲ್ಲಿ ಯಾರಾದರೂ ಒಬ್ಬೊಬ್ಬರು ಅವುಗಳನ್ನು ಉಪಯೋಗಿಸಿದರೆ ಮಿಕ್ಕವರು ಅವರನ್ನು ಹಾಸ್ಯಮಾಡುತ್ತಾರೆ. ಇವುಗಳಲ್ಲಿ ಆದರವಿರುವವರು ಇಂಥ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಬೇಕು?

**ಉತ್ತರ:-** ಹಣೆಯ ಮೇಲೆ ಇವುಗಳನ್ನು ಬರಿಯ ಅಲಂಕಾರಕ್ಕೆ, ಅಥವಾ ತೋರುಗಾಣಿಕೆಗೆ ಇಟ್ಟುಕೊಳ್ಳುವವರು ಇವನ್ನು ಕೈಬಿಡುವದೇ ಒಳ್ಳೆಯದು. ಆದರೆ ಇವು ಪರಮೇಶ್ವರನ ಸ್ಮರಣೆಗೆ ಸಹಕಾರಿ ಎಂದು ಭಾವಿಸಿರುವವರು ಮಿಕ್ಕ ಜನರ ಅಭಿಪ್ರಾಯವನ್ನು ಲೆಕ್ಕಿಸಬೇಕಾದದ್ದಿಲ್ಲ. ಆಡಂಬರವಿಲ್ಲದೆ ಇವನ್ನು ಧರಿಸುವದು ಒಳ್ಳೆಯದು. ಅದರಿಂದ ಮನಸ್ಸಿಗೆ ಪರಮೇಶ್ವರನ ನೆನಪು ಬರುತ್ತದೆ; ಈಶ್ವರನಲ್ಲಿ ಶ್ರದ್ಧೆಯನ್ನು ಹೆಚ್ಚಿಸಿಕೊಳ್ಳಬೇಕೆನ್ನುವವರಿಗೆ ಪ್ರೋತ್ಸಾಹವೂ ಆಗುತ್ತದೆ.

**ಪ್ರಶ್ನೆ:-** ಈಶ್ವರನು ಸರ್ವವ್ಯಾಪಿಯೆಂದೂ ಆತ್ಮನು ನಮ್ಮ ಅಜ್ಞಾನವನ್ನು ಕಳೆದು ಸುಖಜೀವನಕ್ಕೆ ಸಹಾಯಮಾಡುವನೆಂದೂ ಯಾವಾಗಲೂ ನೆನಪಿರುವದಕ್ಕೆ ಯಾವದಾದರೊಂದು ಸುಲಭವಾದ ಸಾಧನವನ್ನು ನನಗೆ ತಿಳಿಸಿಕೊಡಿರಿ.

**ಉತ್ತರ:-** ಸೂರ್ಯನ ಕಿರಣಗಳು ಎಲ್ಲೆಲ್ಲಿಯೂ ವ್ಯಾಪಿಸಿಕೊಂಡು ಜಗತ್ತಿನ ವ್ಯವಹಾರಕ್ಕೆ ನೆರವಾಗಿರುವವೆಂಬುದನ್ನು ನೆನಪಿನಲ್ಲಿಡಿರಿ. ಸೂರ್ಯನ ಬಿಸಿ–ಬೆಳಕುಗಳಿಂದ ಭೂಮಿಯ ಮೇಲೆ ಬೆಳೆಯುವ ಪೈರುಪಚ್ಚೆಗಳಿಗೂ ಭೂಮಿಯ ಮೇಲಿರುವ ಪ್ರಾಣಿಗಳಿಗೂ ಆಗುತ್ತಿರುವ ಅಪರಿಮಿತ ಸಹಾಯವನ್ನು ಮನದಂದುಕೊಳ್ಳುತ್ತಿರಿ. ಪರಮೇಶ್ವರನಿಗೆ ಸೂರ್ಯಮಂಡಲವೊಂದು ಉತ್ತಮ ಸಂಕೇತವೆಂದು ವೇದಗಳು ಸಾರುತ್ತಿವೆ. ಸೂರ್ಯನ ಆಸರೆಯಲ್ಲಿರುವವರಿಗೆ ಎಂದಿಗೂ ಕತ್ತಲೆಯ ಅಂಜಿಕೆಯಿಲ್ಲದಿರುವಂತೆ ಪರಮೇಶ್ವರನ ಆಶ್ರಯದಲ್ಲಿರುವವರಿಗೆ ಎಂದಿಗೂ ಅಜ್ಞಾನದ ಅಂಜಿಕೆಯಿರುವದಿಲ್ಲ.

**ಪ್ರಶ್ನೆ:-** ಮನುಷ್ಯನು ಯಾವ ಕೆಲಸವನ್ನು ಅವಶ್ಯವಾಗಿ ಮಾಡಬೇಕು? ಯಾವದನ್ನು ಅವಶ್ಯವಾಗಿ ತಿಳಿಯಬೇಕು?

**ಉತ್ತರ:-** ಯಾವದನ್ನು ಮಾಡಿದರೆ ತನಗೂ ಮತ್ತೊಬ್ಬರಿಗೂ ತೊಂದರೆಯಾಗುವದಿಲ್ಲವೋ ಎಲ್ಲರಿಗೂ ಒಳ್ಳೆಯದೇ ಆಗುವದೋ ಅದೇ ಮಾಡತಕ್ಕ ಕೆಲಸವು. ಯಾವದನ್ನು ಅರಿತರೆ ಮನುಷ್ಯನ ಜೀವನದಲ್ಲಿ ಸ್ವತಂತ್ರಸುಖವು ತೋರಿಕೊಳ್ಳುವದೋ ಅದನ್ನೇ ಅರಿತುಕೊಳ್ಳಬೇಕು.

## 40

### 23 - 9 - ಮೇ 1954

**ಪ್ರಶ್ನೆ:-** ಕಚೇರಿಯಲ್ಲಿ ಕೆಲಸಮಾಡುತ್ತಿರುವಾಗ ನಡುನಡುವೆ ಬಿಡುವಾದಾಗ ಅಧ್ಯಾತ್ಮವಿಚಾರವು ಮನಸ್ಸಿಗೆ ಬರುವದಕ್ಕೆ ಏನು ಮಾಡಲಿ?

**ಉತ್ತರ:-** ನಿಮ್ಮೆದುರಿಗೆ ನಿಮ್ಮ ಗುರುಗಳ ಚಿತ್ರವನ್ನು ಇಟ್ಟುಕೊಳ್ಳಿರಿ. ಬಿಡುವಾದಾಗ ಅದರ ಕಡೆಗೆ ನೋಡುವ ಅಭ್ಯಾಸವನ್ನು ಮಾಡಿಕೊಳ್ಳಿರಿ. ಅದನ್ನು ನೋಡಿದಾಗಲೆಲ್ಲ ಅವರ ಉಪದೇಶದ ನೆನಪು ಬರುವದು. ನಿಮಗೆ ಈವರೆಗೂ ಯಾವ ಗುರುಗಳೂ ಇಲ್ಲದಿದ್ದರೆ, 'ಈಗಲೂ ಇಲ್ಲಿಯೂ ಭಗವಂತನು ಇರುತ್ತಾನೆ' ಎಂದು ದಪ್ಪಕ್ಷರದಲ್ಲಿ ಒಂದು ರಟ್ಟಿನ ಕಾಗದದಮೇಲೆ ಬರೆದಿರುವ ಜ್ಞಾಪಕವಾಕ್ಯವನ್ನು ಎದುರಿಗಿಟ್ಟುಕೊಂಡು ನೋಡುತ್ತಿರಿ.

**ಪ್ರಶ್ನೆ:-** ಯಾವಾಗಲೂ ಪ್ರಯಾಣ ಮಾಡುತ್ತಿರುವವರು ಏನು ಸಾಧನವನ್ನು ಮಾಡಬಹುದು? ನಾನು ಬಹಳಮಟ್ಟಿಗೆ ರೈಲಿನಲ್ಲಿ ಸಂಚರಿಸುತ್ತಿರುತ್ತೇನೆ. ಕೆಲವು ವೇಳೆ ಹಳ್ಳಿಗಳಿಗೂ ಗಾಡಿಯ ಮೇಲೋ ಅಥವಾ ಕಾಲು ನಡಿಗೆಯಿಂದಲೋ ಹೋಗಿ ಬರುತ್ತಿರಬೇಕಾಗುತ್ತದೆ.

**ಉತ್ತರ:-** ರೈಲು ಕಿಟಕಿಯಿಂದ ಇಣಿಕಿ ನೋಡಿದಾಗ ನಿಮಗೆ ಕಾಣುವ ಪ್ರಕೃತಿ ಸೌಂದರ್ಯವು ಭಗವಂತನ ಅನುಗ್ರಹವೆಂಬುದನ್ನು ಮನಸ್ಸಿಗೆ ತಂದುಕೊಳ್ಳಿರಿ. ರೈಲಿನ ಶಬ್ದದ ಅಥವಾ ಗಾಡಿಯ ಶಬ್ದದ ಜೊತೆಗೆ ತಾಳಮೇಳವಾಗುವಂತೆ ಭಗವನ್ನಾಮದ ಜಪವನ್ನು ಕೂಡಿಸಿಕೊಳ್ಳಿರಿ. ನಾಮವನ್ನು ಗಟ್ಟಿಯಾಗಿ ಉಚ್ಚರಿಸಬೇಕೆಂಬುದೇನೂ ಇಲ್ಲ, ಮನಸ್ಸಿನಲ್ಲಿ ನಾಮಾಕ್ಷರಗಳನ್ನು ಸ್ಮರಿಸಿಕೊಂಡರೂ ಸಾಕು.

**ಪ್ರಶ್ನೆ:-** ತಿರುಕರ ಕಾಟವು ಹೆಚ್ಚಾಗಿರುವಾಗ ಹೇಗೆ ವರ್ತಿಸಬೇಕು? ಅವರಿಗೆ ಏನಾದರೂ ಕೊಟ್ಟರೆ ಕಾಟವು ಹೆಚ್ಚಾಗುತ್ತದೆ; ಕೊಡದೆ ಇದ್ದರೆ ಮನಸ್ಸು ಕಠಿಣವಾಗಿ ಅಧ್ಯಾತ್ಮ ಸಾಧನಕ್ಕೆ ಅಡ್ಡಿಯಾಗುತ್ತದೆ.

**ಉತ್ತರ:-** ಕೈಯಲ್ಲಿದ್ದ ಅಲ್ಪಸ್ವಲ್ಪವನ್ನು ಅವಶ್ಯವಾಗಿ ಕೊಡುವದೇ ಒಳ್ಳೆಯದು. ಈಶ್ವರನ ಅನುಗ್ರಹವನ್ನು ನೆನಪಿಗೆ ತಂದುಕೊಂಡಂತಾಗುತ್ತದೆ. ಕೊಡುವದಕ್ಕೆ ಏನೂ ಇಲ್ಲದಿದ್ದರೆ, ಅಥವಾ ಅವಕಾಶವಿಲ್ಲದಿದ್ದರೆ, ಮೃದುವಾದ ಮಾತುಗಳನ್ನಾದರೂ ಆಡಬೇಕು. ಭಗವಂತನನ್ನು ಅವಶ್ಯವಾಗಿ ಆಗ ಸ್ಮರಿಸಿಕೊಳ್ಳಬೇಕು.

## 41

### 23 - 11 - ಜುಲೈ 1954

**ಪ್ರಶ್ನೆ:-** ಗುರುಪೂರ್ಣಿಮೆಯ ದಿನ ಗುರುಗಳಿಗೆ ಏನನ್ನು ಅರ್ಪಿಸುವದು ಯುಕ್ತ?

**ಉತ್ತರ:-** ಶಿಷ್ಯನು ಅಮಾಯಿಕವಾಗಿ ತನ್ನ ಹೃದಯವನ್ನು ಅರ್ಪಿಸಿ ಬಿಡಬೇಕು. 'ಸಹ ನಾವವತು। ಸಹ ನೌ ಭುನಕ್ತು। ಸಹವೀರ್ಯಂ ಕರವಾವಹೈ' ಎಂಬ ಶಾಂತಿಮಂತ್ರದ ಅಭಿಪ್ರಾಯವನ್ನು ಮನಸ್ಸಿನಲ್ಲಿ ತಂದುಕೊಂಡು ಇನ್ನು ಮುಂದೆ ಎಂದೆಂದಿಗೂ ನಮ್ಮಿಬ್ಬರ ಹೃದಯಗಳು ಎರಡಾಗಿರದೆ ಇರಲಿ! –ಎಂದು ಪ್ರಾರ್ಥಿಸಿಕೊಳ್ಳಬೇಕು. ಸದ್ಗುರುವಿನ ಹೃದಯವೇ ಈಶ್ವರನ ಹೃದಯವು; ನಿಮ್ಮ ಹೃದಯವೆಂಬ ಕುಂಟೆಗೂ ಗುರುಹೃದಯವೆಂಬ ಮಹಾಸರೋವರಕ್ಕೂ ನಡುವೆಯೇನೂ ಇಲ್ಲದಂತಾಗಲೆಂದು ಮನಃಪೂರ್ವಕವಾಗಿ ಪ್ರಾರ್ಥಿಸಿಕೊಳ್ಳಿರಿ.

**ಪ್ರಶ್ನೆ:-** ಚಾತುರ್ಮಾಸ್ಯದಲ್ಲಿ ನಾಲಗೆಯನ್ನು ತಡೆಯುವ ಕೆಲವು ವ್ರತಗಳನ್ನು ಮಾಡುವ ಪದ್ಧತಿಯಿದೆ. ಅವುಗಳಿಂದ ಪ್ರಯೋಜನವುಂಟೆ?

**ಉತ್ತರ:-** ಉಂಟು. ಅಷ್ಟು ದಿನದವರೆಗಾದರೂ ನಾಲಗೆಗೆ ಸವಿಸವಿ ಯೂಟದ ಚಟವನ್ನು ತಪ್ಪಿಸಿದಂತೆ ಆಗುತ್ತದೆ. ಆದರೆ ಮನಸ್ಸಿನಲ್ಲಿ ವಾಸನೆಯಿದ್ದರೆ ಈ ವ್ರತಕಾಲವು ಮುಗಿದಕೂಡಲೆ ವೇಗದಿಂದ ಸವಿಯೂಟಕ್ಕೆ ಅದು ಹರಿಯ ಬಹುದು. ಎಲ್ಲಾ ಇಂದ್ರಿಯಗಳೂ ಅಷ್ಟೆ. ಈ ಕಾಲದಲ್ಲಿ ಇಂದ್ರಿಯಗಳನ್ನು ಬಿಗಿಹಿಡಿಯಬೇಕು ಎಂಬುದು ಸರಿ; ಆದರೆ ರಸಸ್ವರೂಪನಾದ ಪರಮಾತ್ಮನ ಕಡೆಗೆ ಮನಸ್ಸು ಒಲಿಯುವಂತೆ ಮಾಡಬೇಕು. ಗುರುಪೂಜೆ, ದೇವತಾರ್ಚನೆ, ಭಗವನ್ನಾಮಸ್ಮರಣೆ, ಸತ್ಕಥಾಶ್ರವಣ, ಭಗವಚ್ಚಿಂತನ– ಮುಂತಾದವುಗಳಿರಬೇಕು. ಭಗವಂತನ ರಸವನ್ನು ಕಂಡುಕೊಂಡರೆ ವಿಷಯರಸವು ಮಾಯವಾಗಿಬಿಡುತ್ತದೆ.

## 42

### 24 - 3 - ನವೆಂಬರ್ 1954

**ಪ್ರಶ್ನೆ:-** ನನಗೆ ಈಗ ಸಪ್ತಮ ಶನಿಯ ಕಾಟವಂತೆ. ಸಂಸಾರದಲ್ಲಿ ಕೆಲವು ತೊಂದರೆಗಳೂ ತಲೆದೋರಿವೆ. ಈಗ ಶನಿಗ್ರಹದ ಮಂತ್ರಜಪ ಮಾಡಬಹುದೆ? ಕೆಲವರು 'ಇದೆಲ್ಲ ಮೂಢಭಾವನೆ; ಇದೆಲ್ಲ ಕರ್ಮಾನುಸಾರ ಆಗುತ್ತದೆ, ದೇವರನ್ನು ಮೊರೆಹೊಕ್ಕರೆ ಇವು ತಮ್ಮಿಂದ ತಾವೇ ಸರಿಯಾಗುತ್ತವೆ'– ಎನ್ನುತ್ತಾರೆ. ಅವರ ಮಾತು ನಿಜವೆ?

**ಉತ್ತರ:-** ಅವಶ್ಯ ಜಪಮಾಡಿರಿ. ವ್ಯವಹಾರದೃಷ್ಟಿಯಿಂದ ಗ್ರಹಗತಿಯ ಫಲವಾಗುವದೆಂಬುದೂ ಸರಿಯೇ. ಆದರೆ ದೇವರನ್ನು ಮೊರೆಹೊಕ್ಕರೆ ಎಲ್ಲವೂ ಸರಿಹೋಗುತ್ತದೆ ಎನ್ನುವವರು ನಿಮ್ಮ ಪರಮಮಿತ್ರರು. ಎಲ್ಲಾ ಗ್ರಹಗಳೂ ಈಶ್ವರನ ಆಜ್ಞೆಗೆ ಒಳಪಟ್ಟವರು. ಕರ್ಮಕ್ಕೆ ತಕ್ಕಂತೆ ಫಲವಾಗುವದೆಂಬುದೂ ನಿಜ; ಆದರೂ ಕೆಟ್ಟಕರ್ಮಕ್ಕೆ ದಂಡನೆಯಾಗಿ ಕೆಟ್ಟಫಲವಾಗುವದೆಂದು ತಿಳಿಯಬಾರದು. ಈಶ್ವರನ ಕಡೆಗೇ ತಿರುಗಿರಿ ಎಂದು ಅದು ಎಚ್ಚರಿಕೆಕೊಡುತ್ತದೆ. ಭಗವನ್ನಾಮಜಪ, ಭಗವದ್ವಿಚಾರ, ಭಗವಂತನ ಪ್ರಾರ್ಥನೆ– ಇವುಗಳಿಗೆ ಕಾಲವನ್ನು ವಿನಿಯೋಗಿಸುವದು ಸರ್ವೋತ್ತಮವಾದದ್ದು. ವ್ಯವಹಾರವೂ ಚೆನ್ನಾಗಿ ಸಾಗುತ್ತದೆ, ಪರಮ ಪುರುಷಾರ್ಥಕ್ಕೂ ಪರಂಪರೆಯಿಂದ ಕಾರಣವಾಗುತ್ತದೆ.

**ಪ್ರಶ್ನೆ:-** ಜನ್ಮಾಂತರವುಂಟೆ? ಜೀವನು ಸತ್ತಬಳಿಕ ಹೇಗೆ, ಎಲ್ಲಿಗೆ ಹೋಗುತ್ತಾನೆ? ದಯವಿಟ್ಟು ತಿಳಿಸಿರಿ.

**ಉತ್ತರ:-** ಶಾಸ್ತ್ರದಲ್ಲಿ ಹೇಳಿರುವದೇನೆಂದರೆ ಜೀವನು ತನ್ನ ಕರ್ಮಜ್ಞಾನಗಳಿಗೆ ಅನುಗುಣವಾಗಿ ಒಳ್ಳೆಯ ಅಥವಾ ಕೆಟ್ಟಲೋಕಗಳಲ್ಲಿ ಮತ್ತು ಜನ್ಮಗಳಲ್ಲಿ ಫಲವನ್ನು ಅನುಭವಿಸುತ್ತಾನೆ. ಇದರ ವಿವರವನ್ನು ಪುರಾಣಗಳಲ್ಲಿ ಬರೆದಿದೆ. ಬೃಹದಾರಣ್ಯಕೋಪನಿಷತ್ತಿನಲ್ಲಿರುವದನ್ನು ನೋಡಬಹುದು. ಆದರೆ ಜನ್ಮಾಂತರದಲ್ಲಿ ಕರ್ಮಫಲವನ್ನು ಹೇಗೆ ಪಡೆಯುವೆನೋ ಎಂದು ಯೋಚಿಸುವದಕ್ಕಿಂತ ಈಗಲೇ ಸುಕೃತವನ್ನು ಮಾಡಿದರಾಯಿತು. ಯಾವ ಅಂಜಿಕೆಯೂ ಇಲ್ಲ, ಭಗವಂತನ ನಾಮಸ್ಮರಣೆ, ಅರ್ಚನೆ, ಧ್ಯಾನ– ಇವುಗಳಿಂದ ದುಷ್ಕರ್ಮಗಳ ಫಲವನ್ನು ತಪ್ಪಿಸಿಕೊಂಡು ಸುಖಿಸಬಹುದು. ತತ್ತ್ವಜ್ಞಾನದಿಂದ ಜನನಮರಣಗಳ ಪ್ರವಾಹವನ್ನೇ ದಾಟಬಹುದು. ಈ ಜನ್ಮದಲ್ಲಿ ಉತ್ತಮ ಸಾಧನಗಳನ್ನು ಮಾಡದೆ ದುಃಖಪಡುತ್ತಿರುವವನು ಮುಂದಿನ ಜನ್ಮದಲ್ಲಿ ನನಗೆ ಏನಾಗುವದೋ ಎಂಬ ಚಿಂತನೆಯನ್ನು ಮನಸ್ಸಿಗೆ ಹತ್ತಿಸಿಕೊಂಡರೂ ಒಂದೇ, ಬಿಟ್ಟರೂ ಒಂದೇ.

## 43

### 24 - 4 - ಡಿಸೆಂಬರ್ 1954

**ಪ್ರಶ್ನೆ:-** ಈ ಕಾಲದಲ್ಲಿ ಕೂಡ ಶ್ರೀರಾಮನನ್ನು ಕಠೋರತಪಸ್ಸಿನಿಂದ ಹುಡುಕಿ ತೆಗೆಯಬಹುದೆಂದು ನನ್ನ ಬಲವಾದ ನಂಬಿಕೆಯಿದೆ. ಈ ನನ್ನ ತಿಳಿವಳಿಕೆಯು ಸರಿಯೊ, ತಪ್ಪೊ?

**ಉತ್ತರ:-** ತಪಸ್ಸಿನಿಂದ ಪರಮೇಶ್ವರನನ್ನು ಅರಿತುಕೊಳ್ಳಬೇಕೆಂದು ಶ್ರುತಿಯಲ್ಲಿ ಹೇಳಿದೆ. ಆದರೆ ಅದಕ್ಕಾಗಿ 'ಕಠೋರತಪಸ್ಸು' ಬೇಕಾಗಿಲ್ಲ. ತಪಸ್ಸೆಂದರೆ ಇಂದ್ರಿಯಗಳನ್ನೂ ಮನಸ್ಸನ್ನೂ ಶುದ್ಧಿಗೊಳಿಸಿಕೊಂಡು ಹಿಡಿತದಲ್ಲಿಟ್ಟುಕೊಳ್ಳುವದು. ನಿಮ್ಮ ಸ್ಥಾನಕ್ಕೆ ವಿಹಿತವಾಗಿರುವ ಕರ್ಮಗಳಿಂದ ಪರಮೇಶ್ವರನನ್ನು ಆರಾಧನೆ ಮಾಡಿರಿ. ಯಮನಿಯಮಗಳನ್ನು ಪಾಲಿಸುತ್ತಾ ಬನ್ನಿರಿ. ಪರಮಾತ್ಮನ ಗುಣಕರ್ಮಗಳನ್ನೂ ಪರಮಾತ್ಮತತ್ತ್ವವನ್ನೂ ಕುರಿತು ದೊಡ್ಡವರಲ್ಲಿ ವಿಚಾರಮಾಡಿರಿ, ಹಾಗಾದರೆ ಅವಶ್ಯವಾಗಿ ನೀವು ಶ್ರೀರಾಮನನ್ನು ಕಾಣಬಹುದು.

**ಪ್ರಶ್ನೆ:-** ಈಗಿನ ಕಾಲದಲ್ಲಿ ತಾನು ಶ್ರೀರಾಮನ ಅವತಾರವೆಂದು ಯಾವನಾದರೂ ಎಂದುಕೊಂಡು ಮುಂದೆ ಬಂದರೆ ನಾವೇನು ಮಾಡಬೇಕು?

**ಉತ್ತರ:-** ನಿಮಗೆ ಮತ್ತೊಬ್ಬರ ಗೊಡವೆಯೇಕೆ? ಶ್ರೀರಾಮನೇ ನನಗೆ ಬೇಕೆಂಬ ಹಂಬಲಿಕೆಯನ್ನು ಸಂಪಾದಿಸಿಕೊಳ್ಳಿರಿ. ಶ್ರೀರಾಮನು ನಿಮ್ಮ ಹೃದಯದಲ್ಲಿಯೇ ತನ್ನ ಪರಮಾರ್ಥರೂಪದಿಂದ ಇರುತ್ತಾನೆ. ಆತನ ಅನುಗ್ರಹದಿಂದ ನಿಮಗೆ ಭಗವದ್ಭಕ್ತಿಯು ಬೆಳೆಯುವದು; ಆತನ ಅನುಗ್ರಹದಿಂದಲೇ ತತ್ತ್ವಜ್ಞಾನವೂ ಲಭಿಸುವದು. ಇಹಪರಗಳೆಲ್ಲಕ್ಕೂ ಆತನ ಭಕ್ತಿಯೇ ಸಾಕಾಗಿರುತ್ತದೆ.

**ಪ್ರಶ್ನೆ:-** ಗಾಯತ್ರೀಮಂತ್ರವನ್ನು ಪ್ರತಿದಿನವೂ ಒಂದು ಸಾವಿರ ಜಪ ಮಾಡಬೇಕೆಂದು ನನ್ನ ಮನಸ್ಸು ಇದೆ. ಅದನ್ನು ಹೇಗೆ ಯಾವ ವೇಳೆಯಲ್ಲಿ ಮಾಡಲಿ? ದಯವಿಟ್ಟು ತಿಳಿಸಬೇಕು.

**ಉತ್ತರ:-** ನೀವು ಸಂಧ್ಯಾವಂದನೆ ಮಾಡುವಾಗ ಮಡಿಯಲ್ಲಿದ್ದು ಬೆಳಗ್ಗೆ ಅಥವಾ ಸಾಯಂಕಾಲ– ನಿಮಗೆ ವಿರಾಮವಿದ್ದರೆ ಬೆಳಗ್ಗೆ ಒಳ್ಳೆಯದು– ಜಪವನ್ನು ಮಾಡಬಹುದು. ಪರಮಾತ್ಮನು ''ಸರ್ವಲೋಕಾತ್ಮನು; ಆ ದೇವನ ದಿವ್ಯಚೈತನ್ಯಜ್ಯೋತಿಯನ್ನು ಧ್ಯಾನ ಮಾಡುತ್ತೇವೆ. ಆತನೇ ನಮ್ಮಗಳಿಗೆ ಅಂತಃಕರಣದಲ್ಲಿ ಶುಭವೃತ್ತಿಗಳನ್ನು ಪ್ರೇರಿಸಲಿ!'' ಎಂಬ ಅರ್ಥವನ್ನು ಸರ್ವದಾ ಅನುಸಂಧಾನ ಮಾಡಿರಿ. ಮಿಕ್ಕ ಕಾಲಗಳಲ್ಲಿ ಪರಮಾತ್ಮನ ಚಿಂತನೆಯನ್ನು ಬಿಡುವು ಸಿಕ್ಕಾಗಲೆಲ್ಲ ಮಾಡುತ್ತಿರಿ. ನಿಮ್ಮ ಬುದ್ಧಿಯು ಇದರಿಂದ ಶುದ್ಧವಾಗುವದು. ವ್ಯವಹಾರವೂ ಸುಖಮಯವಾಗುವದು.

## 44

### ಸಂಪುಟ 24- ಸಂಚಿಕೆ 5- ಜನವರಿ 1955

**ಪ್ರಶ್ನೆ:-** ಹೆಣ್ಣುಮಕ್ಕಳಿಗೂ ಅಧ್ಯಾತ್ಮ ಸಾಧನವು ಸುಲಭಸಾಧ್ಯವೆ? ಈಗಿನ ಕಾಲದಲ್ಲಿ ಓದಿದ ಮಹಿಳೆಯರಿಗೆ ಬಹಳಮಟ್ಟಿಗೆ ಯಾವದಾದರೊಂದು ಉದ್ಯೋಗವೇ ಇರುತ್ತದೆ. ಓದದೆ ಇರುವವರಿಗೆ ಮನೆಗೆಲಸದಲ್ಲಿಯೇ ಕಾಲವು ಕಳೆದುಹೋಗುತ್ತದೆ. ಇಂಥವರು ಅಧ್ಯಾತ್ಮದಲ್ಲಿ ಪ್ರವೇಶಮಾಡುವದು ಹೇಗೆ?

**ಉತ್ತರ:-** ಪರಮಾತ್ಮನು ಗಂಡಸಲ್ಲ, ನಪುಂಸಕನೂ ಅಲ್ಲ; ಪ್ರಾಣಿಗಳಿಗೆಲ್ಲ ಆತ್ಮನವನು. ಓದಿದವರು ಗಂಡಸರಂತೆಯೇ ತಮ್ಮ ಓದಿನ ಉಪಯೋಗವನ್ನು ಅಧ್ಯಾತ್ಮವಿಚಾರಕ್ಕೂ ಸಾಧಕವಾಗಿ ಮಾಡಿಕೊಳ್ಳಬಹುದಾಗಿದೆ. ಗೃಹಿಣಿಯಾಗಿರುವವರು ತಮ್ಮ ಗೃಹಕಾರ್ಯವನ್ನು ಕರ್ಮಯೋಗವಾಗಿ ಮಾರ್ಪಡಿಸಿಕೊಂಡು ಈಶ್ವರಾರಾಧನೆಗೆ ಉಪಯೋಗಿಸಿಕೊಳ್ಳಬಹುದು. ಹೆಚ್ಚಿನ ಓದುಬರಹಗಳಿಲ್ಲದಿದ್ದರೂ ಪುರಾಣಶ್ರವಣ, ಹರಿಕೀರ್ತನ, ಸಾಧುಗಳ ಉಪದೇಶಶ್ರವಣ, ಅತಿಥಿಸತ್ಕಾರ– ಇಂಥ ಸಾಧನಗಳಲ್ಲಿ ಅವರಿಗೆ ಸ್ವಲ್ಪವಾದರೂ ಅವಕಾಶವಿದ್ದೇ ಇರುತ್ತದೆ.

**ಪ್ರಶ್ನೆ:-** ನಾನು ಕಡುಬಡವ. ನನಗೆ ಅಷ್ಟಾಗಿ ವಿದ್ಯೆಯಿಲ್ಲ. ನಾನೊಬ್ಬನೇ ಇರುವದರಿಂದ ಅವರಿವರಲ್ಲಿ ಯಾಚನೆಮಾಡುವದು, ಅಡಿಗೆ ಮಾಡಿಕೊಂಡು ಊಟ ಮಾಡುವದು, ನಾನಿರುವ ಕೋಣೆಯನ್ನು ಚೊಕ್ಕಟವಾಗಿಟ್ಟುಕೊಳ್ಳುವದು– ಇವಕ್ಕೇ ಹೆಚ್ಚುಕಾಲವನ್ನು ಕಳೆಯಬೇಕಾಗಿದೆ. ನಾನು ಅಧ್ಯಾತ್ಮಸಾಧನವನ್ನು ಹೇಗೆ ಮಾಡಲಿ?

**ಉತ್ತರ:-** ಮನೆಯ ಕೆಲಸವನ್ನು ಮಾಡುವದಕ್ಕೆ ನಿಮಗೆ ಬರುತ್ತದೆ ಎಂದಾಯಿತು. ಯಾರಾದರೂ ಶ್ರೀಮಂತರಿಗೆ ನಿಮ್ಮ ಕೈಯಲ್ಲಾದ ಕೆಲಸವನ್ನು ಮಾಡಿಕೊಟ್ಟು ಮೊದಲು ದಿನಕ್ಕೆ ಇಂತಿಷ್ಟುಕಾಲವೆಂದು ವಿರಾಮವನ್ನು ಕಲ್ಪಿಸಿಕೊಳ್ಳಿರಿ. ಆ ಕಾಲವನ್ನು ಭಗವನ್ನಾಮಜಪ, ಸತ್ಸಂಗ, ದೊಡ್ಡವರ ಉಪದೇಶಶ್ರವಣ – ಮುಂತಾದವುಗಳಿಗೆ ಉಪಯೋಗಿಸುತ್ತಾ ಬನ್ನಿರಿ. ಮುಂದಕ್ಕೆ ನಿಮಗೆ ಸಾಧನ ಮಾರ್ಗಗಳು ಪರಮೇಶ್ವರನ ಅನುಗ್ರಹದಿಂದ ಹೊಳೆಯುವವು.

**ಪ್ರಶ್ನೆ:-** ನನ್ನ ಶರೀರವು ಬಹುಕಾಲದಿಂದಲೂ ರೋಗದಿಂದ ನರಳುತ್ತಲೇ ಇದೆ. ಔಷಧೋಪಚಾರಗಳಿಗೆ ಏರ್ಪಾಡುಮಾಡಿಕೊಳ್ಳುವ ಚೈತನ್ಯವೂ ಕಡಿಮೆ. ನಾನು ಯಾವಾಗ ಏನು ಸಾಧನಮಾಡಬಹುದು?

**ಉತ್ತರ:-** ಈ ಶರೀರವು ಅನಿತ್ಯವಾದದ್ದು, ಸುಖರಹಿತವಾದದ್ದು– ಎಂಬ ನೆನಪು ಭಗವಂತನ ಅನುಗ್ರಹದಿಂದ ನಿಮಗೆ ಇದ್ದೇ ಇದೆ. ನಿತ್ಯನೂ ಆನಂದ ರೂಪನೂ ಆಗಿರುವ ಪರಮಾತ್ಮನ ಅಂಶವು ನಾನೆಂಬುದನ್ನು ಆಗಾಗ್ಗೆ ನೆನಪಿಗೆ ತಂದುಕೊಳ್ಳಿರಿ. ಭಗವಂತನ ನಾಮಸ್ಮರಣೆ ಮಾಡುತ್ತಿರಿ.

## 45

### 24 - 6 - ಫೆಬ್ರುವರಿ 1955

**ಪ್ರಶ್ನೆ:-** ಪರಮಾತ್ಮನು ಎಲ್ಲರ ಹೃದಯದಲ್ಲಿಯೂ ಇರುತ್ತಾನಂತೆ, ಆದರೂ ಒಬ್ಬೊಬ್ಬರ ಸ್ವಭಾವ ಒಂದೊಂದು ರೀತಿಯಿದೆಯಲ್ಲ?

**ಉತ್ತರ:-** ಎಲ್ಲೆಲ್ಲಿಯೂ ವಿದ್ಯುಚ್ಛಕ್ತಿಯಿದ್ದರೂ ಅದನ್ನು ಕ್ರಮವರಿತು ಉಪಯೋಗಿಸಿಕೊಂಡವರಿಗೇ ಅದರಿಂದಾಗುವ ಪ್ರಯೋಜನವು ದೊರೆಯುವದು. ಈಶ್ವರನ ಸಂನ್ನಿಧಿಯ ಫಲವೂ ಹೀಗೆಯೇ.

**ಪ್ರಶ್ನೆ:-** ನಾನು ರಾಮನಾಮಸ್ಮರಣೆ ಮಾಡುತ್ತೇನೆ, ಮಹಾವಿಷ್ಣುವಿನ ತಸಬೀರು ಯಾವಾಗಲೂ ನನ್ನ ಬಳಿ ಇರುತ್ತದೆ. ರಾಮಭಕ್ತನಿಗೆ ರಾಮಚಂದ್ರನ ಫೋಟೋ ಇರಬೇಕೆಂದು ಅನೇಕರು ಹೇಳುತ್ತಾರೆ. ರಾಮನೂ ವಿಷ್ಣುವೂ ಒಬ್ಬನೇ ಅಲ್ಲವೆ?

**ಉತ್ತರ:-** ಪರಮೇಶ್ವರನು ಒಬ್ಬನೇ ಸರಿ. ಆದರೆ ಅವನ ನಾಮರೂಪಗಳು ಬೇರೆಬೇರೆ. ಯಾವ ನಾಮರೂಪಗಳಿಂದ ಆರಾಧಿಸುವೆವೋ, ಆ ನಾಮರೂಪಗಳಿಂದ ಪರಮೇಶ್ವರನು ತೋರಿಸಿದ ಲೀಲೆಗಳೂ ಆ ಅವತಾರಕ್ಕೆ ಸಂಬಂಧಪಟ್ಟ ಗುಣಗಳೂ ನಮಗೆ ನೆನಪಿಗೆ ಬರುವವು. ಈ ದೃಷ್ಟಿಯಿಂದ ನೋಡಿದರೆ ಶ್ರೀರಾಮ ಚಿತ್ರವು ಹೆಚ್ಚು ಸಹಾಯಕವಾಗುವದು. ಅದು ನಿಮ್ಮಲ್ಲಿ ಇಲ್ಲದಿದ್ದರೆ ಭಾವನೆಯಿಂದಲೇ ಕಲ್ಪಿಸಿಕೊಂಡರೂ ಆಗುವದು.

**ಪ್ರಶ್ನೆ:-** ನನ್ನ ವ್ಯವಹಾರವು ಬೆಳಗಿನಿಂದ ಸಾಯಂಕಾಲದವರೆಗೂ ದುಡಿಯುವದನ್ನೇ ಬಯಸುತ್ತಿದೆ. ಓದುವದು ಅಥವಾ ದೇವರಪೂಜೆ–ಯಾವದಕ್ಕೂ ನನಗೆ ಬಿಡುವೇ ಇಲ್ಲ. ಇಷ್ಟಾದರೂ ನನ್ನ ಜೀವನವು ಸಾಗುವದು ಕಷ್ಟವಾಗಿದೆ. ಇದಕ್ಕೇನು ಮಾಡಬೇಕು?

**ಉತ್ತರ:-** ವ್ಯವಹಾರದಲ್ಲಿ ಬಿಡುವು ಸಿಕ್ಕುವದಿಲ್ಲ, ನಾವೇ ವಿಶ್ರಾಂತಿಯನ್ನು ಕಲ್ಪಿಸಿಕೊಳ್ಳಬೇಕು. ಆದರೆ ವಿಶ್ರಾಂತಿಯೆಂದರೆ ಆಲಸಿಕೆಯಿಂದ ಸುಮ್ಮನೆ ಕೂಡುವದಲ್ಲ, ನಿಜವಾದ ವಿಶ್ರಾಂತಿ ಎಂದರೆ ಮನಸ್ಸನ್ನು ಈಶ್ವರನಡಿಯಲ್ಲಿ ನಿಲ್ಲಿಸುವದು. ಇಂಥ ವಿಶ್ರಾಂತಿಯಿಂದ ನಿಮ್ಮ ಜೀವನಕ್ರಮಕ್ಕೆ ಅಡ್ಡಿಯಾಗಲಾರದು. ಈಶ್ವರನ ದಯೆಯಿಂದ ನಿಮಗೆ ಜೀವನಸೌಕರ್ಯಗಳು ದೊರಕುತ್ತಿವೆಯೇ ಹೊರತು ಬರಿಯ ನಿಮ್ಮ ಶ್ರಮದಿಂದಲ್ಲ. ಈಶ್ವರಧ್ಯಾನದಿಂದ ಚಿತ್ತಕ್ಕೆ ಸ್ಥೈರ್ಯವೂ ಶರೀರೇಂದ್ರಿಯಗಳಿಗೆ ಉತ್ಸಾಹವೂ ದೊರಕುವವು.

**ಪ್ರಶ್ನೆ:-** ನಮ್ಮ ಊರಿನಲ್ಲಿ ನನಗೆ ಸತ್ಸಹವಾಸವು ದೊರೆಯುವದು ಕಷ್ಟವಾಗಿದೆ. ಯಾರ ಬಳಿಯಲ್ಲಿ ಸ್ವಲ್ಪ ಕುಳಿತಿದ್ದರೂ ಸಲ್ಲದ ಹರಟೆ, ಮತ್ತೊಬ್ಬರ ಮೇಲಿನ ಚಾಡಿದೂರು–ಮುಂತಾದವುಗಳನ್ನು ಕುರಿತು ಮಾತಾಡುವವರೇ ಬಹಳ. ಇದನ್ನು ಹೇಗೆ ತಪ್ಪಿಸಿಕೊಳ್ಳಲಿ?

**ಉತ್ತರ:-** ಅಂಥ ಸಂದರ್ಭಗಳಲ್ಲಿ ಭಗವನ್ನಾಮವನ್ನು ಸ್ಮರಿಸಿಕೊಳ್ಳುವದಕ್ಕೆ ಯತ್ನಿಸಿರಿ. ಕಾಲಕ್ರಮದಲ್ಲಿ ಅದರಿಂದ ನಿಮ್ಮ ಸುತ್ತಮುತ್ತಲಿನವರ ಮೇಲೂ ಒಳ್ಳೆಯ ಪರಿಣಾಮವನ್ನುಂಟುಮಾಡುವದು.

## 46

### 24 - 7 - ಮಾರ್ಚ್ 1955

**ಪ್ರಶ್ನೆ:-** ನಾನಿರುವದೊಂದು ಮಹಾಕ್ಷೇತ್ರವೆಂದು ಬೇರೆ ಊರಿನಿಂದ ಅನೇಕ ಜನರು ಬಂದುಹೋಗುತ್ತಿದ್ದಾರೆ. ಅವರಿಗೆ ತೀರ್ಥಯಾತ್ರೆಯಿಂದ ಇಂಥಿಂಥ ಫಲವು ದೊರಕಿತು ಎಂದೂ ಹೇಳಿಕೊಳ್ಳುತ್ತಾರೆ. ನನಗೆ ಮಾತ್ರ ಈ ಕ್ಷೇತ್ರದ ಮಹಿಮೆಯು ಏನೂ ತಿಳಿಯಲಿಲ್ಲವಲ್ಲ!

**ಉತ್ತರ:-** ತೀರ್ಥಕ್ಷೇತ್ರಗಳಲ್ಲಿ ವಾಸಮಾಡಿಕೊಂಡಿದ್ದ ಮಾತ್ರದಿಂದ ಆದರ ಫಲವು ದೊರಕುವದಿಲ್ಲ. ಗಂಗೆಯಲ್ಲಿರುವ ಮೀನುಗಳಿಗೆ ಗಂಗಾಸ್ನಾನದ ಫಲವು ಬಂದೀತೆ? ನೀವಿರುವದೊಂದು ಕ್ಷೇತ್ರವಾಗಿರಬಹುದು; ಆದರೆ ನಿಮಗೆ ಕ್ಷೇತ್ರದ ಪ್ರಯೋಜನವು ಬೇಕೆಂಬ ಹಂಬಲ ಇಲ್ಲದೆ ಇರಬಹುದು. ನಿಮಗೆ ಮತ್ತೊಂದು ಕ್ಷೇತ್ರದ–ಉದಾಹರಣೆಗೆ ನಿಮ್ಮ ಶರೀರದ ಅಥವಾ ಹೊಲದ ಚಿಂತೆಯು ಹೆಚ್ಚಾಗಿರಬಹುದು. ನಿಮ್ಮ ಊರಿನ ಕ್ಷೇತ್ರಮಹಾತ್ಮೆಯನ್ನು ಶ್ರವಣಮಾಡಿರಿ; ಭಗವಂತನು ಅಲ್ಲಿ ಯಾವಯಾವ ಲೀಲೆಗಳನ್ನು ಭಕ್ತರ ಅನುಗ್ರಹಕ್ಕಾಗಿ ತೋರಿಸಿರುವನೆಂಬುದನ್ನು ಮನದಂದುಕೊಳ್ಳಿರಿ. ಅಂದಿನಿಂದ ನಿಮಗೆ ಕ್ಷೇತ್ರವಾಸವು ಪ್ರಾರಂಭವಾಗುವದು.

**ಪ್ರಶ್ನೆ:-** ಮತಾಂತರಗೊಳಿಸುವದರಿಂದ ಜನರಿಗೆ ಪ್ರಯೋಜನವಾಗುವದೆ? ಜನರು ತಮ್ಮತಮ್ಮ ಮತವನ್ನು ಬಿಟ್ಟು ಬೇರೊಂದು ಮತವನ್ನು ಅಂಗೀಕರಿಸುವದರಿಂದ ಯಾವ ಪ್ರಯೋಜನವಾದರೂ ಉಂಟೆ?

**ಉತ್ತರ:-** ಇದಕ್ಕೆ ಮತಾಂತರಗೊಳಿಸುವ ದೀಕ್ಷಾಗುರುಗಳೂ ಮತಾಂತರ ವನ್ನು ಪಡೆಯುವ ಹಂಬಲಿರುವ ಜನರೂ ಉತ್ತರಹೇಳಬೇಕು. ನಮ್ಮ ಅಭಿಪ್ರಾಯದಲ್ಲಿ

ಯಾವ ಮತವೇ ಆಗಲಿ ಬರಿಯ ಅದರ ಹೊರಗಿನ ಆಚಾರಗಳಿಂದಲೂ ವೇಷಭೂಷಾದಿಗಳಿಂದಲೂ ಸಾಧಕನಿಗೆ ಪುರುಷಾರ್ಥವನ್ನು ಕೊಡಲಾರದು. ಯಾವನ ಹೃದಯದಲ್ಲಿ ಪರಮೇಶ್ವರನ ಪ್ರೇಮವು ಉಕ್ಕುತ್ತಿರುವದೊ ಅವನೇ ಮತದ ಸವಿಯನ್ನು ಕಂಡವನು. ಪರಮೇಶ್ವರನು ಯಾವದೊಂದು ಮತದಲ್ಲಿಯೂ ಪಕ್ಷಪಾತವನ್ನಿಟ್ಟುಕೊಂಡಿಲ್ಲ. ಮುಮುಕ್ಷುಗಳಾದ ಎಲ್ಲರಿಗೂ ಅಧ್ಯಾತ್ಮಜೀವನದ ಆನಂದವು ದೊರೆಯಲೆಂಬುದೇ ಪರಮೇಶ್ವರನ ಇಚ್ಛೆ. ಹಿಂದು, ಮುಸಲ್ಮಾನ, ಕ್ರಿಸ್ತಿಯನ್, ಯಹೂದಿ, ಬೌದ್ಧ, ಜೈನ– ಎಂದು ಬೇರೆಬೇರೆಯ ಮತದವರಿಗೆ ಬೇರೆಬೇರೆಯ ಪುರುಷಾರ್ಥಗಳನ್ನು ಪರಮೇಶ್ವರನು ಕಟ್ಟಿಟ್ಟಿಲ್ಲ; ಅವನು ಎಲ್ಲರಿಗೂ ಒಂದೇ ಪರಮಪುರುಷಾರ್ಥವನ್ನೇ ದಯಪಾಲಿಸುತ್ತಾನೆ.

## 47

### 24 - 12 - ಆಗಸ್ಟ್ 1955

**ಪ್ರಶ್ನೆ:-** ಶ್ರೀರಾಮಕೃಷ್ಣಪರಮಹಂಸರು, ವಿವೇಕಾನಂದರು, ಅರವಿಂದರು, ರಮಣಮಹರ್ಷಿಗಳು, ಸಾಯಿಬಾಬಾ– ಎಂದು ದೊಡ್ಡವರೆಂದು ಪ್ರಸಿದ್ಧರಾದ ಮಹನೀಯರನ್ನು ಜನರು ಆಯಾ ಕಾಲಕ್ಕೆ ಗೌರವಿಸುವರು; ಅವರು ಅಸ್ತರಾದರೆ ಅವರನ್ನು ಮರೆತುಬಿಡುವರು. ಇದರಿಂದ ಏನು ತಿಳಿಯಬೇಕು?

**ಉತ್ತರ:-** ಸಾಮಾನ್ಯ ಜನರಿಗೆ ಹೊಸ ಸುದ್ದಿಗಳಲ್ಲಿಯೂ ಹೊಸ ಹೆಸರಿನಲ್ಲಿಯೂ ಪ್ರೀತಿ ಹೆಚ್ಚು; ತತ್ತ್ವದಲ್ಲಿ ಆದರ ಕಡಿಮೆ. ಯಾರಾದರೊಬ್ಬ ಪ್ರಖ್ಯಾತರ ಮರೆಯಲ್ಲಿದ್ದು ತಾವು ಹೆಸರುವಾಸಿಯಾಗಬೇಕೆಂಬ ಆಶೆಯಿರುತ್ತದೆ; ತಾವೇ ತಮ್ಮ ಹೆಚ್ಚುಗಾರಿಕೆಯಿಂದ ಯಶಸ್ಸನ್ನು ಸಂಪಾದಿಸುವ ಆಯಾಸವು ಅವರಿಗೆ ಬೇಡ. ಗಿಣಿಯಂತೆ ಮತ್ತೊಬ್ಬರ ಮಾತನ್ನು ಆಡುವದು ಅವರಿಗೆ ಮೆಚ್ಚಾಗಿರುತ್ತದೆ; ತಾವೇ ಸ್ವಂತವಾಗಿ ಕಷ್ಟಪಟ್ಟು ತತ್ತ್ವವಿಚಾರವನ್ನು ಮಾಡಲು ಅವರು ಒಲ್ಲರು.

**ಪ್ರಶ್ನೆ:-** ಸಾಧುಗಳು, ತತ್ತ್ವಜ್ಞಾನಿಗಳು, ಯೋಗಿಗಳು– ಇಂಥವರ ಸೇವೆಯಿಂದ ಪ್ರಯೋಜನವೇನು?

**ಉತ್ತರ:-** ಅವರ ದರ್ಶನ, ಸೇವೆ– ಮುಂತಾದವುಗಳಿಂದ ಪಾಪವು ಸವೆಯುವದು. ಅವರ ಸದ್ಗುಣಗಳ ಅನುಕರಣೆಯಿಂದ ಸಾಧಕರಿಗೆ ಸಂಸ್ಕಾರ ವಾಗುವದು. ಅವರ ಉಪದೇಶವನ್ನು ಅರಿತುಕೊಂಡು ಅನುಷ್ಠಾನಕ್ಕೆ ತಂದು ಕೊಳ್ಳುವದರಿಂದ ಶ್ರೇಯಸ್ಸಾಗುವದು. ಆದರೆ ಒಬ್ಬರಾಗುತ್ತಲೂ ಒಬ್ಬ ಮಹಾತ್ಮ

ರನ್ನು ಕುತೂಹಲದಿಂದ ನೋಡಿಕೊಂಡು ಅಡ್ಡಾಡುತ್ತಿರುವವರಿಗೆ ಈ ಯಾವ ಪ್ರಯೋಜನಗಳೂ ದೊರಕಲಾರವು.

**ಪ್ರಶ್ನೆ:-** ವೇಷಭಾಷೆಗಳಿಂದಲೇ ಒಬ್ಬರನ್ನು ಮಹಾತ್ಮರೆಂದು ತಿಳಿಯುವದಕ್ಕೆ ಬರುತ್ತದೆಯೆ? ಕಪಟವೇಷಧಾರಿಸಾಧುಗಳೂ ಉಪದೇಶಕರೂ ನಮ್ಮನ್ನು ವಂಚಿಸದಂತೆ ಏನು ಮಾಡಬೇಕು?

**ಉತ್ತರ:-** ಆಡಂಬರವಿಲ್ಲದ ವೇಷ, ಸತ್ಯಪ್ರಿಯಹಿತವಾದ ಭಾಷೆ– ಇವುಗಳು ಮಹಾತ್ಮರ ಗುರುತಾಗಿರುವವು. ಆದರೆ ನುಡಿಗಿಂತಲೂ ನಡೆಗೆ ಹೆಚ್ಚು ಪ್ರಾಮುಖ್ಯವನ್ನು ಕೊಡಬೇಕು. ಯಾರು ಸ್ವಾರ್ಥಸಾಧನೆಗೆ ಹವಣಿಸುತ್ತಿರುವರೋ ಅವರಿಗೆ ಹೆಸರುವಾಸಿ, ಅರ್ಥಲಾಭ, ಪೂಜೆ– ಇವೇ ಬೇಕಾಗಿರುವವಾದ್ದರಿಂದ ಅವರ ನಿಜವು ಬೇಗನೆ ಹೊರಗೆ ಬೀಳುವದು. ನಾವು ಮನಃಪೂರ್ವಕವಾಗಿ ತತ್ತ್ವವನ್ನು ಹುಡುಕುತ್ತಿದ್ದರೆ, ಬೋಧನೆಗಿಂತ ಸಾಧನಕ್ಕೆ ಹೆಚ್ಚು ಬೆಲೆಯನ್ನು ಕೊಡುತ್ತಿದ್ದರೆ, ನಮ್ಮನ್ನು ಯಾರೂ ವಂಚಿಸಲಾರರು.

## 48

### 25 - 1 - ಸೆಪ್ಟೆಂಬರ್ 1955

**ಪ್ರಶ್ನೆ:-** ಸಿನೆಮಾಗಳನ್ನು ನೋಡುವದು ತಪ್ಪೆಂದು ಕೆಲವರು, ಅವುಗಳಲ್ಲಿ ಭಗವದ್ಭಕ್ತರ ಚರಿತ್ರೆಗಳು ಪ್ರದರ್ಶಿತವಾದರೆ ನೋಡುವದು ತಪ್ಪಲ್ಲವೆಂದು ಕೆಲವರು. ಈ ವಿಷಯಕ್ಕೆ ಯಾರ ಅಭಿಪ್ರಾಯವನ್ನು ಜಿಜ್ಞಾಸುಗಳು ಹಿಡಿಯಬೇಕು?

**ಉತ್ತರ:-** ಸದ್ಯದ ಸ್ಥಿತಿಯಲ್ಲಿ ಭಕ್ತಿಗೆ ಉತ್ತೇಜಕವಾಗಿರುವ ಚಲನಚಿತ್ರಗಳು ಬಹಳ ಕಡಿಮೆ ಅಥವಾ ಇಲ್ಲವೆನ್ನಬಹುದು. ಭಕ್ತರ, ಮಹಾತ್ಮರ ಮತ್ತು ಋಷ್ಯಾದಿಗಳ ಕಥೆಯನ್ನು ಮನಬಂದಂತೆ ಮಾರ್ಪಡಿಸಿ ತಿಳಿಸುವ ಚಿತ್ರಗಳು ಹೇರಳವಾಗಿವೆ. ಶೃಂಗಾರಪ್ರಧಾನವಾದ ದೃಶ್ಯಗಳಿಂದ ಪೂರ್ಣವಾಗಿರುವ ಚಲನ ಚಿತ್ರಗಳನ್ನು ಭಕ್ತಿಯ ನೆಪದಿಂದ ನೋಡಬೇಕೆಂಬ ಹಠವನ್ನು ತೊಡದಿರುವದೇ ಮೇಲೆಂದು ಈಗ್ಗೆ ಹೇಳದೆ ಗತ್ಯಂತರವಿಲ್ಲವಾಗಿದೆ.

**ಪ್ರಶ್ನೆ:-** ಭಜನೆಯಲ್ಲಿಯೂ ಸಂಗೀತವಿದ್ದೇ ಇರುವದಷ್ಟೆ? ಅದರಲ್ಲಿ ಭಾಗವನ್ನು ವಹಿಸುವದು ಸರಿಯೊ, ತಪ್ಪೊ?

**ಉತ್ತರ:-** ಭಜನೆಯು ಭಜನೆಯಾಗಿದ್ದರೆ ತಪ್ಪಲ್ಲ. ಬರಿಯ ಸಂಗೀತವೇ

ಆಗಿದ್ದರೆ ಸಾಧಕರಿಗೆ ಅದೂ ಒಂದು ಅಡ್ಡಿಯೇ. ಭಗವದ್ಭಕ್ತರೇ ಏರ್ಪಡಿಸುವ ಭಜನೆಯಲ್ಲಿ ಸಂಗೀತವಿದ್ದರೆ ಅದು ಶಾಂತರಸವನ್ನೇ ಪುಷ್ಟೀಕರಿಸುತ್ತದೆ. ನಿಮ್ಮನ್ನು ಭಜನೆಗೆ ಹಚ್ಚುವವರು ಭಕ್ತಿವೈರಾಗ್ಯಗಳಿಗೆ ಪ್ರಾಧಾನ್ಯವನ್ನು ಕೊಟ್ಟಿರುವವರೋ ಮೊದಲು ನೋಡಿಕೊಳ್ಳಿರಿ. ರಾಗತಾಳಗಳಿದ್ದ ಮಾತ್ರದಿಂದ ಯಾವ ಅಪರಾಧವೂ ಆಗುವದಿಲ್ಲ. ಆದರೆ ಮನಸ್ಸಿಗೆ ಶೃಂಗಾರವಿಕಾರವನ್ನುಂಟುಮಾಡುವ ಯಾವ ಸಾಮಗ್ರಿಗೂ ಭಜನೆಯಲ್ಲಿ ಅವಕಾಶವಿರಬಾರದು.

**ಪ್ರಶ್ನೆ:-** ಜಪವನ್ನು ಏಕಾಂತದಲ್ಲಿ ಕುಳಿತು ಒಬ್ಬೊಬ್ಬರೇ ಮಾಡುವದು ಒಳ್ಳೆಯದೊ, ಸಾಮೂಹಿಕವಾಗಿ ಮಾಡುವದು ಒಳ್ಳೆಯದೊ?

**ಉತ್ತರ:-** ಉತ್ಕೃಷ್ಟವಾದ ಮನೋಧರ್ಮಗಳುಳ್ಳ ಸಾತ್ತ್ವಿಕರಾದ ಭಗವದ್ಭಕ್ತರುಗಳು ಒಂದುಗೂಡಿರುವ ಕಡೆಯಲ್ಲಿ ನಾವೂ ಜಪಕ್ಕೆ ಕುಳಿತರೆ ಮನಸ್ಸಿಗೆ ಶಾಂತಿಯು ದೊರಕುವದು; ಬಹಿರ್ಮುಖತೆಯು ಬೇಗ ತೊಲಗುವದು. ಅಂಥವರ ಸತ್ಸಂಗವು ದೊರಕಿದರೆ ಅವಶ್ಯವಾಗಿ ಸಾಮೂಹಿಕವಾದ ಅನುಷ್ಠಾನಕ್ಕೆ ಅಂಗವಾಗಿರಿ. ಇಲ್ಲದಿದ್ದರೆ ನಿಮಗೆ ಭಕ್ತಿವೈರಾಗ್ಯಗಳ ನೆನಪು ಬರುವ ಶಾಂತ ವಾತಾವರಣದಲ್ಲಿ ಏಕಾಂತದಲ್ಲಿದ್ದುಕೊಂಡು ಜಪಮಾಡುವದೇ ಸರ್ವೋತ್ತಮ.

## 49

### 25 - 2- ಅಕ್ಟೋಬರ್ 1955

**ಪ್ರಶ್ನೆ:-** ಈಶ್ವರನನ್ನು ಸಾಕಾರವಾಗಿ ನೋಡುವದು ಶಕ್ಯವಿದೆಯೆ?

**ಉತ್ತರ:-** ಶಕ್ಯವಿದೆಯೆಂದು ಭಕ್ತರು ತಿಳಿಸಿರುತ್ತಾರೆ. ಅವರ ಉಪಾಸನೆಯ ಬಲದಿಂದ ಪರಮೇಶ್ವರನು ಉಪಾಸ್ಯಮೂರ್ತಿಯ ಆಕಾರದಿಂದಲೇ ಅವರಿಗೆ ದರ್ಶನವನ್ನು ಕೊಟ್ಟನಂತೆ. ನಿಮಗೆ ಅದು ಸಾಧ್ಯವಾಗದಿದ್ದರೂ ಚಿಂತೆಯಿಲ್ಲ. ಸಾಕಾರವಾಗಿ ಕಾಣುವ ಜೀವರೆಲ್ಲರೂ ನಿಜವಾಗಿ ಈಶ್ವರಾಂಶರೆಂದೇ ತಿಳಿಯಿರಿ.

**ಪ್ರಶ್ನೆ:-** ಪರಮೇಶ್ವರನನ್ನು ದೇವಾಲಯಗಳಲ್ಲಿ ಬೇರೆಬೇರೆಯ ಆಕಾರ ಗಳಿಂದ ಪೂಜಿಸುತ್ತಾರಷ್ಟೆ? ನಿರಾಕಾರಪರಮೇಶ್ವರನಲ್ಲಿ ವಿಶ್ವಾಸವಿರುವವರು ಆ ಆಕಾರಗಳನ್ನು ಏನೆಂತ ಭಾವಿಸಬೇಕು?

**ಉತ್ತರ:-** ಬಣ್ಣವಿಲ್ಲದ ಆಕಾಶವು ನೀಲವರ್ಣವುಳ್ಳದ್ದಾಗಿ ಕಾಣುವಂತೆ, ನಿರಾಕಾರಪರಮೇಶ್ವರನೇ ಸಾಕಾರನಾಗಿ ಕಾಣುವನೆಂಬುದನ್ನು ತಿಳಿಯಿಸಿಕೊಡುವ ಚಿಹ್ನೆಗಳು ಅವೆಂದು ಭಾವಿಸಬೇಕು. ಯಾವ ಆಕಾರದಲ್ಲಿಯೇ ಆಗಲಿ, ನಿರಾಕಾರ ಪರಮೇಶ್ವರನೇ ತುಂಬಿ ತುಳುಕುತ್ತಿರುತ್ತಾನೆಂಬುದನ್ನು ನೆನಪಿನಲ್ಲಿಡಬೇಕು.

**ಪ್ರಶ್ನೆ:-** ಮೂರ್ತಿಪೂಜೆಯನ್ನು ದ್ವೇಷಿಸುವವರು ಕೆಲವರು ಇದ್ದಾರೆ. ಅವರ ಎದುರಿಗೆ ಮೂರ್ತಿಗಳನ್ನು ಪೂಜಿಸುವ ಹಠವನ್ನು ತೊಡುವದು ಒಳ್ಳೆಯದೆ?

**ಉತ್ತರ:-** ಒಳ್ಳೆಯದಲ್ಲ, ಪೂಜೆ ಎಂಬುದು ಮನಸ್ಸಿಗೆ ಸಂಬಂಧಪಟ್ಟದ್ದು, ಆದ್ದರಿಂದ ಪೂಜೆಯನ್ನು ಎಷ್ಟು ರಹಸ್ಯವಾಗಿ ಆದರೆ ಅಷ್ಟು ರಹಸ್ಯವಾಗಿ ಮಾಡಿ ತನ್ನ ಮನಸ್ಸಿಗೆ ಆನಂದವನ್ನು ತಂದುಕೊಳ್ಳಬೇಕು. ಆದರೆ ಮೂರ್ತಿಪೂಜಾ ದ್ವೇಷಕರು ನಿಜವಾಗಿ ದೇವರಭಕ್ತರಲ್ಲ. ಏಕೆಂದರೆ ರಾಗದ್ವೇಷಗಳು ಶರೀರದಲ್ಲಿರುವ ಮನಸ್ಸಿಗೆ ಸೇರಿರುತ್ತದೆ. ಶರೀರಾಭಿಮಾನವನ್ನು ತಳೆದು ನಾನು ಮೂರ್ತಿಯನ್ನು ಪೂಜಿಸು ವದಿಲ್ಲವೆನ್ನುವವನು ಆತ್ಮವಂಚಕನೇ; ಏಕೆಂದರೆ ಅವನು ಶರೀರವೆಂಬ ಮೂರ್ತಿ ಯನ್ನೇ ಪೂಜಿಸುತ್ತಿರುತ್ತಾನೆ.

**ಪ್ರಶ್ನೆ:-** ಮನಸ್ಸಿನಲ್ಲಿ ಕಲ್ಪಿತವಾದ ದೇವರ ಮೂರ್ತಿಯನ್ನು ಪೂಜಿಸುವದು ಮೇಲೊ, ಬಾಹ್ಯಮೂರ್ತಿಯನ್ನು ಪೂಜಿಸುವದು ಮೇಲೊ?

**ಉತ್ತರ:-** ಮನಸ್ಸಿನಲ್ಲಿ ಮೂರ್ತಿಯು ಸ್ಥಿರವಾಗಿದ್ದರೆ ಅದೇ ಮೇಲು; ಏಕೆಂದರೆ ಅದು ನಮ್ಮ ಜೊತೆಯಲ್ಲಿಯೇ ಯಾವಾಗಲೂ ಇರುತ್ತದೆ. ಬಾಹ್ಯ ಮೂರ್ತಿಯು ಕಲ್ಪಿತವಲ್ಲವೆಂಬ ಭ್ರಮೆ ಬೇಡ. ಯಾವ ಮೂರ್ತಿತಾನೇ ಮನಸ್ಸಿಗೆ ಸಂಬಂಧಪಡದೆ ತೋರುತ್ತದೆ?

## 50

### 25 - 3 - ನವೆಂಬರ್ 1955

**ಪ್ರಶ್ನೆ:-** ನಮ್ಮೂರಿನಲ್ಲಿ ನಮ್ಮ ಜಾತಿಯ ಜನರೇ ಬಹಳವಿರುತ್ತಾರೆ. ಅವರು ಕುಲಪದ್ಧತಿಯಂತೆ ನಿತ್ಯಗಟ್ಟಲೆಯ ಪೂಜಾದಿಗಳನ್ನು ಮಾಡುತ್ತಾರಾದರೂ ಬಲು ಮಟ್ಟಿಗೆ ಜಗಳವಾಡುವದರಲ್ಲಿಯೇ ಕಾಲವನ್ನು ಕಳೆಯುತ್ತಾರೆ. ಇದನ್ನು ಕಂಡು ನನಗೆ ಬೇಸರವಾಗಿದೆ. ಇದಕ್ಕೇನು ಮಾಡಲಿ?

**ಉತ್ತರ:-** ನೀವು ಜಗಳದಲ್ಲಿ ಭಾಗಿಗಳಾಗದೆ ಇರಿ. ಯಾರೊಬ್ಬರಿಗೂ ಬುದ್ಧಿ ಹೇಳುವದಕ್ಕೆ ಹೋಗಬೇಡಿ. ಆದರೆ ನಿಮ್ಮ ನಿತ್ಯಕರ್ತವ್ಯಗಳನ್ನು ನೆರವೇರಿಸುತ್ತಾ ಭಗವಂತನ ಸ್ಮರಣೆಯಲ್ಲಿ ಕಾಲವನ್ನು ಕಳೆಯುತ್ತಿರಿ. ಹಾಗಾದರೆ ಕಾಲಕ್ರಮದಲ್ಲಿ ಜನರು ನಿಮ್ಮನ್ನು ಜಗಳಕ್ಕೆ ಕರೆಯುವದಿಲ್ಲ; ನಿಮ್ಮಲ್ಲಿ ಅವರಿಗೆ ಗೌರವವೂ ಉಂಟಾಗುವದು.

**ಪ್ರಶ್ನೆ:-** ನಮ್ಮೂರ ದೇವಸ್ಥಾನದಲ್ಲಿ ಊರ ಜನರು ಆಗಾಗ್ಗೆ ಸೇರುವ

ದುಂಟು. ಆದರೆ ಅಲ್ಲಿಯೂ ಜಗಳ, ಜೂಜು– ಮುಂತಾದ ತುಚ್ಛಕಾರ್ಯಗಳೇ ಹೆಚ್ಚಾಗಿ ಕಾಣಬರುತ್ತವೆ. ನಾನು ದೇವಾಲಯಕ್ಕೆ ಹೋಗಲೆ, ಬೇಡವೆ?

**ಉತ್ತರ:-** ಇದನ್ನು ಸ್ಥಳಸಂನಿವೇಶದ ದೃಷ್ಟಿಯಿಂದ ನಿಶ್ಚಯಿಸಬೇಕಾಗುವದು. ಯಾರೂ ಇಲ್ಲದ ಕಾಲಕ್ಕೆ ದೇವರ ದರ್ಶನಪೂಜಾದಿಗಳಿಗೆ ಹೋಗಿಬರಬಹುದಾದರೆ ಅವಶ್ಯವಾಗಿ ಹಾಗೆ ಮಾಡಿ. ಆದಾಗದಿದ್ದರೆ ಚಿಂತಿಸಬೇಕಿಲ್ಲ. ಪರಮೇಶ್ವರನು ನಿಮ್ಮ ಮನೆಯಲ್ಲಿಯೂ ಇರುತ್ತಾನೆ; ಅವನನ್ನು ಅಲ್ಲಿ ಅರ್ಚಿಸಿರಿ. ವಿಶೇಷವಾಗಿ ನಿಮ್ಮ ಹೃದಯದಲ್ಲಿರುತ್ತಾನೆ; ಅಲ್ಲಿ ಆತನನ್ನು ಪೂಜಿಸುವದಕ್ಕೂ ಧ್ಯಾನಿಸುವದಕ್ಕೂ ಪ್ರಯತ್ನಿಸಿರಿ. ಇದರಿಂದ ನಿಮ್ಮ ದೇಹವೇ ಒಂದು ದೇವಾಲಯವಾಗುವದು.

**ಪ್ರಶ್ನೆ:-** ದಿನದಿನವೂ ನನ್ನಿಂದ ಕೆಲವು ಅಪರಾಧಗಳು ಆಗುತ್ತಲೇ ಇರುವವು. ಕೆಲವು ದಿನಗಳು ಅವು ಹೆಚ್ಚಾಗಿ ಆಗುವವು, ಕೆಲವು ದಿನಗಳಲ್ಲಿ ಕಡಿಮೆ. ಇವುಗಳಿಂದ ಪಾರಾಗುವದಕ್ಕೆ ಉಪಾಯವುಂಟೇನು?

**ಉತ್ತರ:-** ನಿಮ್ಮಿಂದ ನೀವು ತಿಳಿದಷ್ಟೇ, ಅಪರಾಧಗಳಾಗುವವೆಂದು ತಿಳಿಯಬಾರದು. ಕೆಲವು ನಿಮ್ಮ ಲಕ್ಷ್ಯಕ್ಕೇ ಬಂದಿರುವದಿಲ್ಲ, ಮತ್ತೆ ಕೆಲವು ಬಂದಿರುತ್ತವೆ. ದಿನದಿನವೂ ಸಾಯಂಕಾಲದಲ್ಲಿ ನೀವು ಮಾಡಿರಬಹುದಾದ ತಪ್ಪುಗಳನ್ನು ಬರೆದಿಡುವ ಪದ್ಧತಿಯನ್ನು ಮಾಡಿಕೊಳ್ಳಿರಿ. ರಾತ್ರೆ ಮಲಗಿಕೊಳ್ಳುವ ಮುಂಚೆ 'ದೇವ, ನನ್ನಿಂದ ಈ ತಪ್ಪುಗಳಾಗದಂತೆ ಅನುಗ್ರಹಿಸು!' ಎಂದು ಸಾದರವಾಗಿ ಪ್ರಾರ್ಥಿಸಿಕೊಳ್ಳಿರಿ. ವ್ಯವಹಾರಕ್ಕೆ ಹೊರಡುವಾಗಲೂ ಹಾಗೆಯೇ ಪ್ರಾರ್ಥಿಸಿಕೊಳ್ಳಿರಿ. ವ್ಯವಹಾರಮಾಡುತ್ತಿರುವಾಗ 'ಈಗಲೂ ಇಲ್ಲಿಯೂ ಈಶ್ವರನಿದ್ದಾನೆ' ಎಂಬುದನ್ನು ಸ್ಮರಿಸಿಕೊಳ್ಳಿರಿ.

## 51

## 25 - 4 - ಡಿಸೆಂಬರ್ 1955

**ಪ್ರಶ್ನೆ:-** ನಾನು ವಿವಾಹವಾಗಿಲ್ಲ. ಒಬ್ಬನೇ ಇದ್ದು ನನ್ನ ಅಡಿಗೆಯನ್ನು ನಾನೇ ಮಾಡಿಕೊಳ್ಳುತ್ತಿದ್ದೇನೆ. ಮಧ್ಯವಯಸ್ಸಾಗಿದೆ. ಸಂನ್ಯಾಸಾಶ್ರಮವನ್ನು ಸ್ವೀಕರಿಸಬೇಕೆಂಬ ಮನಸ್ಸು ಆಗಾಗ್ಗೆ ಬರುತ್ತಿದೆ. ಆಶ್ರಮಸ್ವೀಕಾರವು ನನಗೆ ಪ್ರಯೋಜನಕಾರಿಯಾದೀತೆ?

**ಉತ್ತರ:-** ಸಂನ್ಯಾಸವೆಂಬುದು ವ್ಯವಹಾರದಲ್ಲಿ ಬೇಸತ್ತವರ ಅನುಕೂಲ

ಕ್ಕಾಗಿ ಏರ್ಪಟ್ಟ ಆಶ್ರಮವಲ್ಲ. ಶಾಸ್ತ್ರೋಕ್ತಕರ್ಮಗಳನ್ನು ಮಾಡಿ ಇನ್ನು ಮೇಲೆ ಅವು ಗಳಿಂದಾಗುವ ಇಹಪರಫಲಗಳ ಆಶೆಯಿಲ್ಲದೆ ತತ್ತ್ವವನ್ನು ತಿಳಿದುಕೊಳ್ಳುವದಕ್ಕೆ ಹಾತುವರಿಯುತ್ತಿರುವವರೇ ಪರಮಹಂಸಪಾರಿವ್ರಾಜ್ಯವನ್ನು ಸ್ವೀಕರಿಸಬೇಕು– ಎಂದು ಶಾಸ್ತ್ರದಲ್ಲಿದೆ. ನಿಮಗೆ ಒಬ್ಬರೇ ಇರುವದಕ್ಕೆ ಬೇಸರವಾಗಿದ್ದರೆ ನಿಮ್ಮ ಮನೋ ವೃತ್ತಿಗೆ ಅನುಗುಣವಾಗಿರುವ ಬಂಧುಗಳ ಅಥವಾ ಸ್ನೇಹಿತರನ್ನು ಜೊತೆಯಲ್ಲಿರು ವದಕ್ಕೆ ಸೇರಿಸಿಕೊಳ್ಳಿರಿ. ಯಾವದಾದರೊಂದು ಉದ್ಯೋಗವನ್ನು ಕೈಕೊಳ್ಳಿರಿ. ಆದರೆ ಸದ್ವ್ಯವಹಾರವನ್ನೂ ಸದ್ವಿಚಾರವನ್ನೂ ಮಾಡುವದನ್ನು ಬಿಡಬೇಡಿ.

**ಪ್ರಶ್ನೆ:-** ನಾನು ನನ್ನ ಉಪಯೋಗಕ್ಕಾಗಿ ಒಂದೆರಡು ವೇದಾಂತ ಗ್ರಂಥ ಗಳನ್ನು ಹಲವು ಸಾರಿ ಓದಿರುತ್ತೇನೆ. ಅದರ ವಿಷಯವನ್ನು ಕೇಳಿದವರಿಗೆಲ್ಲ ಹೇಳು ತ್ತಲೂ ಇರುತ್ತೇನೆ. ಇತ್ತೀಚೆಗೆ ಜನರು ನನ್ನನ್ನು ಗುರುಸ್ಥಾನದಲ್ಲಿಟ್ಟು ಪೂಜಾದಿ ಗಳನ್ನು ಮಾಡಬೇಕೆನ್ನುತ್ತಾರೆ. ಅವರ ಇಚ್ಛೆಯನ್ನು ಪೂರ್ತಿಮಾಡುವದು ಸರಿಯೊ, ಸರಿಯಲ್ಲವೊ?

**ಉತ್ತರ:-** ನೀವು ಹೇಳಿಕೊಟ್ಟ ವಿಷಯಗಳಿಗಾಗಿ ಜನರು ನಿಮಗೆ ಕೃತಜ್ಞತೆ ಯನ್ನು ತೋರಿಸಿದರೆ ತಪ್ಪಲ್ಲ. ಆದರೆ ಜ್ಞಾನವೈರಾಗ್ಯಗಳು ನಿಮಗೆ ಇನ್ನೂ ಅಳವಟ್ಟಿಲ್ಲವಾದರೆ ಸ್ಪಷ್ಟವಾಗಿ ಹಾಗೆಂದು ಜನರಿಗೆ ಹೇಳಿಬಿಡಿ. 'ನಾನು ಗುರುವಾಗ ಬೇಕೆಂದು ಗ್ರಂಥಾಭ್ಯಾಸವನ್ನು ಮಾಡಿಲ್ಲ; ತತ್ತ್ವಜ್ಞಾನಕ್ಕಾಗಿ ಪ್ರಯತ್ನಿಸುತ್ತಿದ್ದೇನೆ. ನಿಮ್ಮಂತೆಯೇ ನಾನು ಅನುಭವಿಗಳಾದ ಸದ್ಗುರುವನ್ನು ಹುಡುಕುತ್ತಿದ್ದೇನೆ' ಎಂದು ಸ್ಪಷ್ಟೋಕ್ತಿಗಳಿಂದ ತಿಳಿಸಿರಿ. ಇದರಿಂದ ಎಲ್ಲರಿಗೂ ಕ್ಷೇಮವಾಗುವದು.

**ಪ್ರಶ್ನೆ:-** ಮಂತ್ರೋಪದೇಶ, ತತ್ತ್ವೋಪದೇಶ–ಇವುಗಳನ್ನು ಯಾರಿಂದ ಪಡೆದುಕೊಳ್ಳಬೇಕು?

**ಉತ್ತರ:-** ಮಂತ್ರವನ್ನು ಚೆನ್ನಾಗಿ ಪುರಶ್ಚರಣೆಮಾಡಿ ಅದರಿಂದ ಸಿದ್ಧಿಯನ್ನು ಹೊಂದಿದವರಿಂದ ಉಪದೇಶಮಾಡಿಸಿಕೊಳ್ಳಿರಿ; ಕೂಡಲೆ ಅದರ ಪ್ರಯೋಜನವು ನಿಮಗೆ ಕಾಣಿಸುವದು. ಯಾರಿಂದ ತತ್ತ್ವೋಪದೇಶವನ್ನು ಪಡೆದರೆ ನಿಮ್ಮ ಅಜ್ಞಾನವು ತೊಲಗುವದೋ ಅವರೇ ಆ ಉಪದೇಶಕ್ಕೆ ತಕ್ಕ ಗುರುಗಳು.

## 52

### 25 - 6 - ಫೆಬ್ರವರಿ 1956

**ಪ್ರಶ್ನೆ:-** ನಾನು ಹೆಂಗಸು. ಹೆಂಗಸರಿಗೆ ವೇದಾಧಿಕಾರವಿಲ್ಲವೆಂದು ದೊಡ್ಡವರು ಹೇಳುತ್ತಾರೆ. ನನಗೆ ಈಗ ಮನೆಯ ಕೆಲಸವಾಗಲಿ, ವ್ಯವಹಾರದ ಹೊಣೆಗಾರಿಕೆಯಾಗಲಿ ಇರುವದಿಲ್ಲ. ಪರಮಾರ್ಥಚಿಂತನೆಗೆ ನನಗೆ ಯಾವ ಉಪಾಯವಿದೆ?

**ಉತ್ತರ:-** ವೇದಕ್ಕೆ ಅಧಿಕಾರವಿದೆ ಎನ್ನುವವರೂ ಈಗ ವೇದಾಧ್ಯಯನವನ್ನು ಮಾಡುತ್ತಿಲ್ಲ. ಆದ್ದರಿಂದ ವೇದಾಧಿಕಾರವಿಲ್ಲವಲ್ಲ!– ಎಂಬ ಚಿಂತೆಯನ್ನು ಬಿಡಿ. ವೇದಾರ್ಥವನ್ನು ಪುರಾಣಾದಿಗಳಿಂದಲೂ ಸದ್ಗುರುಗಳಿಂದಲೂ ಶ್ರವಣಮಾಡಿ ಉತ್ತಮವಾದ ಭಕ್ತಿವೈರಾಗ್ಯಗಳನ್ನು ಅಳವಡಿಸಿಕೊಳ್ಳಿರಿ.

**ಪ್ರಶ್ನೆ:-** ವೇದಾಂತವೆಂದರೇನೆಂಬುದೇ ನಮಗೆ ತಿಳಿಯದಂತೆ ಆಗಿದೆ. ಅದ್ವೈತವೇದಾಂತಿಗಳೆನ್ನಿಸಿಕೊಂಡವರು ಒಬ್ಬೊಬ್ಬರು ಒಂದೊಂದು ಗ್ರಂಥವನ್ನಿಟ್ಟುಕೊಂಡು ಹೇಳುತ್ತಾರೆ. ಒಬ್ಬರ ವಾದವನ್ನು ಒಬ್ಬರು ಖಂಡಿಸುತ್ತಿದ್ದಾರೆ. ತತ್ತ್ವವು ತಿಳಿಯುವದಕ್ಕೆ ನಾನು ಏನುಮಾಡಬೇಕು!

**ಉತ್ತರ:-** ನಿಮಗೆ ಗ್ರಂಥಗಳನ್ನು ಓದಿ ಅರ್ಥಮಾಡಿಕೊಳ್ಳುವದಕ್ಕೆ ಬರುತ್ತದೆಯೋ ಇಲ್ಲವೋ–ನೀವು ತಿಳಿಸಿಲ್ಲ. ಬರುತ್ತಿದ್ದರೆ ಶಂಕರಾಚಾರ್ಯ ಗ್ರಂಥಗಳನ್ನೇ ನೇರಾಗಿ ಓದಿರಿ. ಈಗ ಅವುಗಳು ಕನ್ನಡಕ್ಕೆ ಅನುವಾದವಾಗಿರುತ್ತವೆ. ಚೆನ್ನಾಗಿ ಓದಿ ಅರ್ಥಮಾಡಿಕೊಳ್ಳಲಾರದೆ ಇದ್ದರೆ ಬಲ್ಲವರಲ್ಲಿ ಸದ್ವಿಚಾರವನ್ನು ಮಾಡಿರಿ. ಆದರೆ ಅನುಭವಕ್ಕೆ ಹೊಂದಿಕೆಯಾಗದ ಯಾವ ಮಾತನ್ನೂ ನಂಬುವ ದಿಲ್ಲವೆಂದು ಮೊದಲು ಸಂಕಲ್ಪಮಾಡಿಕೊಳ್ಳಿರಿ. ವಾದಕ್ಕೆ ಹೋಗಬೇಡಿ. ಪರಮೇಶ್ವರನನ್ನು ಭಕ್ತಿಯಿಂದ ಭಜಿಸಿರಿ; ಆತನ ಅನುಗ್ರಹದಿಂದ ನಿಮಗೆ ತತ್ತ್ವಜ್ಞಾನವು ಲಭಿಸುವದು.

**ಪ್ರಶ್ನೆ:-** ಭಕ್ತಿಯು ಹೆಚ್ಚೋ, ಜ್ಞಾನವು ಹೆಚ್ಚೋ? ಈಗ ಕೆಲವು ದಿನಗಳ ಕೆಳಗೆ ನಮ್ಮೂರಿನಲ್ಲಿ ಈ ವಿಷಯದಲ್ಲಿ ದೊಡ್ಡ ವಿವಾದವಾಯಿತು. ಅದರಿಂದ ನಮಗೆಲ್ಲ ಬುದ್ಧಿಯು ಕದಡಿಹೋಗಿದೆ.

**ಉತ್ತರ:-** ಜಗಳವಾಡುವವರಿಗೆ ಭಕ್ತಿಯೂ ಸಿಕ್ಕುವದಿಲ್ಲ, ಜ್ಞಾನವೂ ದೊರಕುವದಿಲ್ಲ. ಯಾರಿಗೆ ಅಮಾನಿತ್ವಾದಿಸಾಧನಗಳಿರುವವೋ, ಯಾರು ಭಕ್ತಿ ಯಿಂದ ಪರಮೇಶ್ವರನನ್ನು ಬಿಡದೆ ಉಪಾಸನೆಮಾಡುತ್ತಿರುವರೋ, ಯಾರು ತತ್ತ್ವವನ್ನು ಅರಿತುಕೊಂಡು ಕೃತಾರ್ಥರಾಗಬೇಕೆಂದು ಹಂಬಲಿಸುತ್ತಿರುವರೋ ಅಂಥವರಿಗೆ ಮಾತ್ರ ಪರಮಾರ್ಥವು ದೊರಕುತ್ತದೆ. ಕುತರ್ಕವನ್ನು ಬಿಟ್ಟು ದೂರನಿಲ್ಲಿರಿ! ಸತ್ಸಂಗವನ್ನು ಮಾಡಿ ಬಲ್ಲವರಿಂದ ಶ್ರವಣಮಾಡಿಯೇ ತತ್ತ್ವವನ್ನು ತಿಳಿದುಕೊಳ್ಳುವದಕ್ಕೆ ಹವಣಿಸಿರಿ!

## 53

### 25 - 8 - ಏಪ್ರಿಲ್ 1956

**ಪ್ರಶ್ನೆ:-** ನನಗೆ ಚಹಾ ಕುಡಿಯುವದು, ಸಿಗರೇಟು ಸೇದುವದು, ಒಂದೆರಡು ಕೆಟ್ಟಮಾತುಗಳನ್ನು ಆಗಾಗ್ಗೆ ಆಡುವದು—ಇವುಗಳ ಹವ್ಯಾಸವು ಬೆನ್ನು ಹತ್ತಿರುತ್ತದೆ. ನಾನು ಅವುಗಳನ್ನು ತಪ್ಪಿಸಿಕೊಳ್ಳಲಿಕ್ಕೆ ಎಷ್ಟೆಷ್ಟು ಪ್ರಯತ್ನ ಮಾಡುತ್ತೇನೋ ಅವುಗಳ ನೆನಪು ಅಷ್ಟಷ್ಟು ಬಲವಾಗಿ ಆಗುತ್ತಿರುತ್ತದೆ. ಇದರಿಂದ ಪಾರಾಗುವದಕ್ಕೆ ಯಾವದಾದರೂ ಸುಲಭೋಪಾಯವಿದೆಯೆ?

**ಉತ್ತರ:-** ಇದೆ. ಚಹಾ ಮಾರುವ ಅಂಗಡಿ, ಚಹಾ ಕುಡಿಯುವ ಜನರು— ಇವರ ಸಂಗವನ್ನು ದೂರಮಾಡಿರಿ. ಮನೆಯಲ್ಲಿ ಚಹಾತಯಾರಿಸುವ ಪದ್ಧತಿಯಿದ್ದರೆ ಆ ಹೊತ್ತಿಗೆ ಮನೆಯಿಂದ ಹೊರಗೆ ಇರಿ, ಸಾಧ್ಯವಿದ್ದರೆ ಆ ಕಾಲವನ್ನು ಹತ್ತಿರವಿರುವ ದೇವಾಲಯಕ್ಕೆ ಹೋಗಿಬರುವದಕ್ಕೆ ಉಪಯೋಗಿಸಿಕೊಳ್ಳಿರಿ. ನಿಮಗೆ ಚಹಾಪಾನದ ನೆನಪು ಬಂದಕೂಡಲೆ ಶುದ್ಧವಾದ ನೀರಿನಿಂದ ಪೌರಾಣಿಕಾಚಮನವನ್ನು ಮಾಡಿರಿ. ಈ ಆಚಮನದ ನೀರು ಭಗವಂತನ ಕೇಶವಾದಿನಾಮೋಚ್ಚಾರಣೆಯಿಂದ ಪವಿತ್ರವಾಗಿರುತ್ತದೆಯಾದ್ದರಿಂದ ದುರ್ವ್ಯಸನವನ್ನು ದೂರವಾಗಿರಿಸುತ್ತದೆ; ಭಗವನ್ನಾಮೋಚ್ಚಾರಣೆಯ ಫಲವಾಗಿ ಕೆಟ್ಟಮಾತಿಗೆ ಅವಕಾಶವೂ ಕಡಿಮೆಯಾಗುತ್ತದೆ. ಕೂಡಿದಮಟ್ಟಿಗೂ ಮೌನವನ್ನು ಆಚರಿಸುವದು, ಭಗವಂತನ ನಾಮೋಚ್ಚಾರಣೆ ಮಾಡುವದು— ಇವುಗಳಿಂದ ಕೆಟ್ಟ ಹವ್ಯಾಸಗಳು ಬಲುಬೇಗನೆ ತೊಲಗುವವು.

**ಪ್ರಶ್ನೆ:-** ವೇದಾಂತಗ್ರಂಥಗಳಲ್ಲಿರುವ ವಿಷಯವು ಒಂದಕ್ಕೊಂದು ವಿರುದ್ಧವಾಗಿ ಕಂಡುಬಂದರೆ ಯಾವದನ್ನು ಪ್ರಬಲವೆಂದು ಗ್ರಹಿಸಬೇಕು? ಉಪದೇಶಕರು ತಮ್ಮ ಮೆಚ್ಚಿಕೆಯ ಒಂದೊಂದು ಗ್ರಂಥವನ್ನೇ ಪ್ರಮಾಣವೆಂದು ಹೇಳುತ್ತಾರಲ್ಲ!

**ಉತ್ತರ:-** ಯಾವ ಗ್ರಂಥದ ಉಪದೇಶವು ಸಾರ್ವತ್ರಿಕಾನುಭವಕ್ಕೆ ಹೊಂದುಗೆಯಾಗುವದೋ ಅದೇ ಪ್ರಮಾಣವು. ಪ್ರಮಾಣವು ಉಪದೇಶಿಕರ ಅಧಿಕಾರವಾಣಿಗೆ ಸಂಬಂಧಿಸಿದ್ದಲ್ಲ; ಎಲ್ಲಾ ಪ್ರಮಾಣಕ್ಕೂ ಅನುಭವವೇ ಗುರಿಯಾದ್ದರಿಂದ ಅದೇ ಕಟ್ಟಕಡೆಯ ನಿರ್ಣಯಕ್ಕೆ ಸಾಕು.

**ಪ್ರಶ್ನೆ:-** ವೇದಾಂತಜ್ಞಾನಕ್ಕೆ ಸಾಧನವು ಬೇಕೆ, ಬೇಡವೆ? ಭಕ್ತಿಗೂ ಜ್ಞಾನಕ್ಕೂ ಏನು ಸಂಬಂಧವಿದೆ?

**ಉತ್ತರ:-** ಅಂತಃಕರಣವು ಜ್ಞಾನಕ್ಕೆ ತಕ್ಕ ಯೋಗ್ಯತೆಯನ್ನು ಕೊಡುತ್ತದೆ. ಅದಕ್ಕಾಗಿ ಶಮದಮಾದಿಗಳೂ ಕರ್ಮಯೋಗವೂ ಅಮಾನಿತ್ವಾದಿಗಳೂ ಬೇಕೆಂದು

ಶ್ರುತಿಸ್ಮೃತಿಗಳಲ್ಲಿ ಹೇಳಿದೆ. ಪರಮಾತ್ಮನಲ್ಲಿರುವ ಪ್ರೇಮಕ್ಕೆ ಭಕ್ತಿ ಎಂದು ಹೆಸರು. ಪರಮಾತ್ಮನನ್ನು ನಿತ್ಯವೂ ಭಜಿಸುತ್ತಿರುವವನಿಗೇ ಆತನ ಅನುಗ್ರಹದಿಂದ ಜ್ಞಾನವು ಲಭಿಸುವದು, ಆತ್ಮಜ್ಞಾನವು ನೆಲೆನಿಂತಾಗ ಅದಕ್ಕೆ ಜ್ಞಾನನಿಷ್ಠೆ ಎಂದು ಹೆಸರು. ಅದು ಪರಭಕ್ತಿಯೂ ಆಗಿರುತ್ತದೆ; ಏಕೆಂದರೆ ಆಗ ಪರಮಾತ್ಮನಲ್ಲಿ ಅಹೈತುಕವಾದ ಪ್ರೇಮವು ಇದ್ದುಕೊಂಡಿರುತ್ತದೆ.

## 54

### 25 - 9 - ಮೇ 1956

**ಪ್ರಶ್ನೆ:-** ಸತ್ಸಂಗದಿಂದ ಆಗುವ ಮುಖ್ಯವಾದ ಲಾಭವು ಯಾವದು? ನಮ್ಮಂಥವರು ಸತ್ಪುರುಷರೆಂದು ಯಾರನ್ನು ಆರಿಸಿಕೊಳ್ಳಬೇಕು?

**ಉತ್ತರ:-** ಯಾರ ಸಂಗದಿಂದ ವಿಷಯಸಂಗವು ದೂರವಾಗುವದೋ ಅವರೇ ಸತ್ಪುರುಷರು, ಯಾರು ಸತ್ಪುರುಷರಿರಬಹುದು?–ಎಂಬ ಕುತೂಹಲಕ್ಕೆ ಅವಕಾಶವನ್ನು ಕೊಡಬೇಡಿರಿ. ಸದ್ರೂಪನಾದ ಪರಮಾತ್ಮನ ವಿಚಾರ, ಅದನ್ನು ಮತ್ತೊಬ್ಬರಿಗೆ ಹೇಳುವದು, ವೈರಾಗ್ಯಯುಕ್ತರಾಗಿರುವದು–ಇವು ಯಾರಲ್ಲಿದ್ದರೂ ಅವರನ್ನು ಆದರರಿಂದ ಸೇವಿಸಿರಿ.

**ಪ್ರಶ್ನೆ:-** ಸ್ತೋತ್ರಪಾಠಗಳನ್ನು ಹೇಗೆ ಮಾಡಬೇಕು? ನಾನೇ ಮನೆಗೆ ಯಜಮಾನನಾಗಿದ್ದರೂ ಮನೆಯ ಕೆಲಸದಲ್ಲಿಯೂ ಸ್ಕೂಲುಪಾಠಗಳನ್ನು ಗಟ್ಟಿ ಮಾಡುವದರಲ್ಲಿಯೂ ಇರುವ ಕುಟುಂಬದವರಿಗೆ ನನ್ನ ಸ್ತೋತ್ರಪಾಠದಿಂದ ಅಡಚಣೆಯಾಗಬಹುದೆಂದು ನನಗೆ ತೋರುತ್ತಿದೆ.

**ಉತ್ತರ:-** ಹಾಗೆ ಭಾವಿಸಬೇಡಿ. ಪ್ರತಿದಿನವೂ ಊಟಮಾಡುವ ಮುಂಚೆ ಕಾಲುಘಂಟೆ ಅಥವಾ ಅರ್ಧಘಂಟೆ ಮನೆಯವರೆಲ್ಲರೂ ಸೇರಿಯೇ ಸ್ತೋತ್ರಪಾಠವನ್ನು ಹೇಳುವ ಪದ್ಧತಿಯನ್ನು ಮಾಡಿಕೊಳ್ಳಿರಿ. ನಿಮ್ಮಲ್ಲಿ ಅರ್ಥವು ಸ್ಫೂರ್ತಿಯಾಗುವಂತೆ ರಾಗದಿಂದ ಸ್ತೋತ್ರವನ್ನು ಹೇಳಬಲ್ಲವರು ಒಂದೊಂದು ಪಾದವಾಗಿ ಸ್ತೋತ್ರವನ್ನು ಹೇಳಿರಿ; ಮಿಕ್ಕವರೆಲ್ಲ ಒಟ್ಟಿಗೆ ಹೇಳಲಿ. ಇದು ಊಟದ ರುಚಿಯನ್ನೂ ಹೆಚ್ಚಿಸುವದು. ಹುಡುಗರಿಗೆ ಪಾಠದಲ್ಲಿ ಅಭಿರುಚಿಯನ್ನೂ ಹೆಚ್ಚಿಸುವದು.

**ಪ್ರಶ್ನೆ:-** ನಮ್ಮ ಮನೆಗೆ ಅತಿಥಿಗಳು ಆಗಾಗ್ಗೆ ಬರುತ್ತಾರೆ. ಅದರಿಂದ ನಾವು ಯಾವ ಲಾಭವನ್ನು ಪಡೆದುಕೊಳ್ಳಬಹುದು.

**ಉತ್ತರ:-** ಅತಿಥಿಸತ್ಕಾರವು ಒಂದು ಮಹಾಪುಣ್ಯಪ್ರದವಾದ ಸಾಧನವೆಂದು ಶಾಸ್ತ್ರದಲ್ಲಿ ಹೇಳಿದೆ. ಆದ್ದರಿಂದ ನಿಮಗೆ ಈ ಸಾಧನಕ್ಕೆ ಈಶ್ವರನು ಅವಕಾಶವನ್ನು ಕಲ್ಪಿಸಿದ್ದರೆ ಅದೇ ಒಂದು ಮಹಾಪ್ರಯೋಜನವು. ಆದರೆ ವೇದಶಾಸ್ತ್ರಾಧ್ಯಯನವನ್ನು ಮಾಡಿರುವ ಮಹಾಪುರುಷರು, ವಿರಕ್ತರಾಗಿ ಭಗವದ್ಭಕ್ತರಾಗಿರುವ ಮಹಾತ್ಮರು– ಇಂಥವರು ಬಂದರೆ ಆ ದಿನವನ್ನು ಒಂದು ಹಬ್ಬವಾಗಿ ಎಣಿಸಿ ಅವರ ಉಪದೇಶಕ್ಕೆ ಮನೆಯವರೆಲ್ಲರೂ ಕಿವಿಗೊಡುವ ಅಭ್ಯಾಸವನ್ನು ಮಾಡಿರಿ. ಅತಿಥಿಸತ್ಕಾರವನ್ನು ದುಂದುವೆಚ್ಚದ ಭಾಗವಾಗಿ ಮಾಡಿಕೊಳ್ಳದೆ ವಾಸಕ್ಕೆ ಮನೆ, ಸ್ನಾನ, ಉಪಾಹಾರ– ಮುಂತಾದವುಗಳ ಆವಶ್ಯಕತೆಯಿರುವವರ ಸೇವೆಯಾಗಿ ಇಟ್ಟುಕೊಳ್ಳುವವರಿಗೆ ನರರೂಪಿಯಾದ ನಾರಾಯಣನ ಕೈಂಕರ್ಯದ ಫಲವು ದೊರಕುವದು.

*****

# ಮನಸ್ಸಿಗೆ ಉಪದೇಶ

## 1.

### 26 - 1 - ಸೆಪ್ಟೆಂಬರ್ 1956[1]

1. ಎಲೆ ಮನಸ್ಸೇ, ಮತ್ತೊಬ್ಬರ ಗೊಡವೆಯನ್ನು ಬಿಡು; ನಿನ್ನ ಯೋಚನೆಯನ್ನು ಹತ್ತಿಸಿಕೊ. ಮನೆಗೆ ಮಾರಿ, ಹೆರರಿಗೆ ಉಪಕಾರಿ ಎನ್ನಿಸಿಕೊಳ್ಳಬೇಡ.

2. ಒಬ್ಬರ ಸುದ್ದಿಯನ್ನು ಮತ್ತೊಬ್ಬರಿಗೆ ಹೇಳುವದರಿಂದ ನಿನಗೆ ಏನು ಪ್ರಯೋಜನ? ಮತ್ತೊಬ್ಬರಲ್ಲಿ ಗುಣವನ್ನು ಕಂಡರೆ ಅವಶ್ಯವಾಗಿ ಆರಿಸಿಕೊ, ಆದರೆ ಅವರ ದೋಷವನ್ನು ಕುರಿತು ವಿಚಾರಮಾಡುವದರಿಂದ ನಿನಗೆ ಬರಿಯ ಆಯಾಸವು ಮಾತ್ರ ಉಂಟಾದೀತು. ಇದನ್ನು ಮರೆಯಬೇಡ!

3. ಜನರನ್ನು ನಮ್ಮವರು, ಅನ್ಯರು; ಮಿತ್ರರು, ಶತ್ರುಗಳು; ಪ್ರಿಯರು, ದ್ವೇಷ್ಯರು– ಎಂದುಮುಂತಾಗಿ ವಿಂಗಡಿಸಿಕೊಂಡು ಹಲುಬಬೇಡ. ಆ ವಿಂಗಡವು ಬಹಳಮಟ್ಟಿಗೆ ನಿನ್ನ ಸ್ವಭಾವದಿಂದಲೇ ಆಗಿರುತ್ತದೆಯೆಂಬುದನ್ನು ನೆನಪಿಗೆ ತಂದುಕೊಳ್ಳುತ್ತಿರು.

4. ನಿನಗೆ ಒಳ್ಳೆಯದು ಆದರೆ, ಮತ್ತೊಬ್ಬರಿಂದ ಆಯಿತೆನ್ನದಿರು; ಕೆಟ್ಟದ್ದಾದರಂತೂ ಮತ್ತೊಬ್ಬರನ್ನು ಹೊಣೆಯಾಗಿ ಎಣಿಸಲೇಬೇಡ. ನಿನ್ನ ಸ್ವಭಾವವು ಒಳ್ಳೆಯದಾದರೆ ನಿನಗೆ ಒಳ್ಳೆಯದೇ ಆಗುತ್ತಿರುವದು, ನಿನ್ನ ಮನಸ್ಸಿನಲ್ಲಿ ಕೆಟ್ಟ ವೃತ್ತಿಗಳು ಎದ್ದುಕೊಳ್ಳುತ್ತಿದ್ದರೆ ನಿನ್ನ ಸುತ್ತಲೂ ಕೆಟ್ಟದ್ದೇ ಕಾಣಿಸಿಕೊಳ್ಳುತ್ತಿರುವದು.

5. ನಿನ್ನ ಮುಂದೆ ಇರುವ ಕೆಲವು ವಸ್ತುಗಳು ಪ್ರಿಯವೆಂದೂ ಮತ್ತೆ ಕೆಲವು ಅಪ್ರಿಯವೆಂದೂ ಮಾಡಿಕೊಂಡಿರುವೆಯಷ್ಟೆ? ಹಿಂದೆ ಇವುಗಳೊಳಗೇ ಕೆಲಕೆಲವು ಇದಕ್ಕೆ ವಿಪರೀತವಾಗಿದ್ದವೆಂಬುದು ನಿನಗೆ ನೆನಪಿನಲ್ಲಿದೆಯೆ? ಈಗ ನಿನಗೆ ಬೇಕಾಗಿರುವ ಕೆಲವು ವಸ್ತುಗಳು ನಿನಗೆ ಹಿಂದೆ ಬೇಕಾಗಿರಲಿಲ್ಲ; ಈಗ ಬೇಡದ ಹಲವು ವಸ್ತುಗಳು ಆಗ ಬೇಕಾಗಿದ್ದವು. ಇದಕ್ಕೇನು ಕಾರಣ? ಆ ವಸ್ತುಗಳಲ್ಲಿ ಆದ ಮಾರ್ಪಾಡೊ, ನಿನ್ನಲ್ಲಿ ಆದ ಮಾರ್ಪಾಡೊ? ಯೋಚಿಸಿನೋಡು.

6. ಎಲೆ ಮನಸ್ಸೆ, ನಿನಗೆ ನೇರಾಗಿ ಹೊರಗಿನ ವಸ್ತುಗಳನ್ನು ನೋಡುವ ಯೋಗ್ಯತೆಯೇ ಇಲ್ಲ. ನಿನಗೆ ಇಂದ್ರಿಯಗಳು ತಂದು ಒಪ್ಪಿಸುವ ವರದಿಗಳೇ

---

1 ಮೊದಲನೆ ಅಂಕೆ ಸಂಪುಟ, 2ನೆ ಅಂಕೆ ಸಂಚಿಕೆ ಮತ್ತು 3ನೆ ಅಂಕೆ ತಿಂಗಳು, ಸಂವತ್ಸರಗಳನ್ನು ಸೂಚಿಸುತ್ತವೆ.

ನಿಜವಾಗಿರುತ್ತವೆ. ಆದರೆ ಆ ಇಂದ್ರಿಯಗಳಿಗೆ ಯಾವದು ಮೆಚ್ಚಾಗಿರುವದೋ ಅದೆಲ್ಲ ನಿನಗೆ ಬೇಕೆಂದು ಏತಕ್ಕೆ ಎಣಿಸುತ್ತಿರುವೆ? ಅವುಗಳಿಗೆ ಬೇಡವಾದದ್ದು ನಿನಗೂ ಬೇಡವೆ? ಇದನ್ನು ಚೆನ್ನಾಗಿ ಯೋಚಿಸು.

7. ಇಂದ್ರಿಯಗಳ ಮೂಲಕವೇ ಹೊರಗಿನ ವಿಷಯಗಳನ್ನು ನೋಡಿ, ಅವುಗಳ ಅಭಿಪ್ರಾಯಕ್ಕೇ ರುಜುಹಾಕುತ್ತಾ, ಅವುಗಳ ಹೇಳಿದಂತೆ ಕೇಳುತ್ತಾ ಇರುವ ನಿನ್ನನ್ನು ಇಂದ್ರಿಯಗಳ ದಾಸನೆನ್ನಬೇಕೊ, ಅವುಗಳ ಒಡೆಯನೆನ್ನಬೇಕೊ? ಅವುಗಳ ಹಿಡಿತದಿಂದ ಪಾರಾಗುವದಕ್ಕೆ ಯಾವ ಉಪಾಯವೂ ನಿನಗೆ ಇಲ್ಲವೆ? ಇದನ್ನು ಚೆನ್ನಾಗಿ ಆಲೋಚಿಸು.

## 2

## 26 - 2 - ಅಕ್ಟೋಬರ್ 1956

8. ಎಲೆ ಮನಸ್ಸೆ, ನಿನ್ನ ಹೊರಗೆ ಕಾಣುವ ಆಧಿಭೌತಿಕ ಮತ್ತು ಆಧಿದೈವಿಕ ಜಗತ್ತು ಅನಂತವಾಗಿ ಹರಡಿಕೊಂಡಿದೆ. ಅದರ ವಿಸ್ತಾರವು ಎಷ್ಟು! ಅದು ಎಷ್ಟು ಕಾಲದಿಂದ ಹೀಗೆ ಇದ್ದುಕೊಂಡಿದೆ! ಅದರಲ್ಲಿರುವ ಚಿತ್ರವಿಚಿತ್ರ ವಸ್ತುಗಳ, ಪ್ರಾಣಿಗಳ, ಮನುಷ್ಯರೇ ಮುಂತಾದ ಉತ್ತಮಮಧ್ಯಮಾಧಮ ಜೀವರುಗಳ ಲೆಕ್ಕವಾದರೂ ಸಿಕ್ಕುತ್ತವೆಯೆ? ಹೀಗಿದ್ದರೂ ನೀನೇಕೆ ಈ ಅನಂತವಾದ ವಿಶ್ವದಲ್ಲಿ ಅಲ್ಪಬುದ್ಧಿಯನ್ನು ಮಾಡಿಕೊಂಡು ನರಳುತ್ತಿದ್ದೀಯೆ? ಅಲ್ಪವೇ ಅಳಿವು, ಅನಂತವೇ ಅಮೃತ– ಎಂಬುದನ್ನು ಮರೆಯದಿರು.

9. ಎಲೆ ಕ್ಷುದ್ರಮತಿಯೆ, ಅನಂತವಾದ ವಿಶ್ವದಲ್ಲಿ ಎಲ್ಲವನ್ನೂ ಮರೆತು ಭೂಲೋಕವೊಂದನ್ನೇ ಕುರಿತು ಏತಕ್ಕೆ ಚಿಂತಿಸುತ್ತಿರುವೆ? ವಿಶಾಲವಾದ ಭೂಮಂಡಲದಲ್ಲಿ ಖಂಡಗಳನ್ನು ಮಾಡಿಕೊಂಡು, ಅದರೊಳಗೆ ದೇಶ, ಪ್ರದೇಶ, ಜಿಲ್ಲೆ, ತಾಲ್ಲೂಕು, ಪಟ್ಟಣ, ಹಳ್ಳಿ, ಬೀದಿ, ನೆರೆಮನೆ, ನನ್ನ ಮನೆ ಎಂದು ಮತ್ತೆ ಮತ್ತೆ ಸಂಕೋಚವನ್ನೇ ಮಾಡಿಕೊಂಡಿರುವೆಯಲ್ಲ! ಎಲ್ಲೆಲ್ಲಿಯೂ ಹಬ್ಬಿಕೊಂಡಿರುವದಕ್ಕೆ ನಿನಗೆ ಯಾರು ಯಾವ ಅಡ್ಡಿಯನ್ನು ಮಾಡಿರುತ್ತಾರೆ? ಈ ಅಲ್ಪತನವನ್ನು ಬಿಟ್ಟುಬಿಡು, ನಿನಗೆ ಕ್ಷೇಮವುಂಟಾಗುವದು.

10. ಎಲೆ ಮನಸ್ಸೆ, ಹೊರಗೆ ಕಾಣುವ ವಸ್ತುಗಳು, ಪ್ರಾಣಿಗಳು, ಮನುಷ್ಯರು– ಮುಂತಾದವರಲ್ಲಿ ಕೆಲವರು 'ನನ್ನವರು' ಎಂದು ಮಾಡಿಕೊಳ್ಳುವ ಹವ್ಯಾಸವು ನಿನಗೆ ಅನಾದಿಕಾಲದಿಂದಲೂ ಬಂದಿರುತ್ತದೆ. ಅದಕ್ಕೆ ಕಾರಣವು ನಿನ್ನಲ್ಲಿ

ನಿನಗಿರುವ ಅಪರಿಮಿತವಾದ ಅಭಿಮಾನವೇ ಅಲ್ಲದೆ ಮತ್ತೆ ಬೇರೆ ಯಾವದಿದೆ? 'ನಾನು' ಎಂಬ ಸರ್ವನಾಮದಲ್ಲೇಕೆ ನಿನಗಿಷ್ಟು ಮೋಹ? ನಾನು, ನನ್ನನ್ನು, ನನ್ನಿಂದ, ನನಗೆ, ನನ್ನ, ನನ್ನಲ್ಲಿ– ಎಂದು ಆ ಶಬ್ದದ ವಿಭಕ್ತಿರೂಪಗಳನ್ನೇ ಏತಕ್ಕೆ ಜಪಿಸುತ್ತಿರುವೆ?

11. ಎಲೆ ಬೆಪ್ಪೆ, ಕುರುಡನು ನಿಂತಲ್ಲಿ ನಿಂತುಕೊಂಡು ಕಾಲು ಅಲುಗಾಡಿಸುತ್ತಿದ್ದರೆ ತೀರ್ಥಕ್ಷೇತ್ರಯಾದೀತೆ? ನೀನು ಇದ್ದಲ್ಲಿಯೇ ಇದ್ದುಕೊಂಡು ಹೊರಕ್ಕೆ ಹೋಗಿರುವೆನೆಂದು ಏತಕ್ಕೆ ಕಲ್ಪಿಸಿಕೊಳ್ಳುತ್ತಿರುವೆ? ಇಂದ್ರಿಯಗಳ ಸಹಾಯವಿಲ್ಲದೆ ನಿನಗೆ ಹೊರಕ್ಕೆ ಹೋಗಿ ಸಂಚರಿಸುವ ಶಕ್ತಿಯೇ ಇಲ್ಲ. ಹೀಗಿದ್ದರೂ ಒಳಗೇ ಇದ್ದುಕೊಂಡು 'ನಾನು ಎಲ್ಲವನ್ನೂ ಬಲ್ಲೆನು' ಎಂದೇಕೆ ಹೆಮ್ಮೆ ಪಡುತ್ತಿರುವೆ? ಹಸುರುಕನ್ನಡಕವನ್ನು ಹಾಕಿಕೊಂಡು ನೋಡಿದ್ದು ಹಸುರಾಗಿ ಕಾಣಿಸುವಂತೆ ಇಂದ್ರಿಯಗಳ ಮೂಲಕ ನೋಡಿದ್ದು ನಿನಗೆ ಹೇಗೆ ಕಾಣಿಸುವದೋ ಅದು ಹಾಗೆಯೇ ಇರುವದೆನ್ನುವದಕ್ಕೆ ಪ್ರಮಾಣವೇನಿದೆ?

## 3

## 26 - 3 - ನವೆಂಬರ್ 1956

12. ಎಲೆ ಮನಸ್ಸೆ, ದೇಹದ ಸುತ್ತಲೂ ಹೊಲಕ್ಕೆ ಬೇಲಿಹಾಕಿಕೊಂಡಂತೆ ಸುತ್ತಿಕೊಳ್ಳುವ ಹವ್ಯಾಸವನ್ನು ಬಿಟ್ಟುಬಿಡು. ದೇಹಬುದ್ಧಿಯಿಂದಲೇ ನಿನಗೆ ಮಿಕ್ಕದ್ದೆಲ್ಲವೂ ಹೊರಗಿನದಾಗಿ ಕಾಣಿಸುವದು; ಅದರಿಂದಲೇ ದೇಹವನ್ನು ಕಾಪಾಡಿಕೊಳ್ಳಬೇಕೆಂಬ ಕ್ಷುದ್ರವಿಚಾರವು ನಿನ್ನನ್ನು ಸುತ್ತಿಕೊಳ್ಳುವದು.

13. ನಿನ್ನದೆಂಬ ದೇಹವು ನಿನಗೆ ಹೇಗೆ ಕಾಣಿಸುತ್ತಿರುವದೋ ಹಾಗೆಯೇ ಮಿಕ್ಕವರ ದೇಹಗಳೂ ಕಾಣಿಸುತ್ತಿರುವವು, ಮಿಕ್ಕ ಪ್ರಾಣಿಗಳ ದೇಹವೂ ಕಾಣಿಸುತ್ತಿರುವವು. ಈ ದೇಹದಲ್ಲಿಯೇ ಇಷ್ಟೊಂದು ಅಭಿಮಾನವನ್ನೇಕೆ ಇಟ್ಟು ಕೊಂಡಿರುವೆ? ಇದು ಆರೋಗ್ಯವಾಗಿದೆ, ಸುಂದರವಾಗಿದೆ, ಬಲವಾಗಿದೆ– ಎಂದರೆ ನಿನಗೆ ಸಂತೋಷವಾಗುವಂತೆ ಮತ್ತೊಂದು ದೇಹವು ಆರೋಗ್ಯವಾಗಿದ್ದರೆ, ಸುಂದರವಾಗಿದ್ದರೆ, ಬಲವಾಗಿದ್ದರೆ ಏತಕ್ಕೆ ಸಂತೋಷವಾಗುವದಿಲ್ಲ?

14. 'ಈ ಶರೀರದಲ್ಲಿಯೇ ನನಗೆ ಸುಖದುಃಖಗಳು ಕಾಣಬರುವವು. ಈ ದೇಹದ ಇಂದ್ರಿಯಗಳಿಂದಲೇ ನನಗೆ ಹೊರಗಿನ ವಸ್ತುಗಳ ಅರಿವೂ ಅವುಗಳ ಸಂಪರ್ಕದಿಂದ ಭೋಗವೂ ವ್ಯಥೆಯೂ ಆಗುವದೆಂಬ ವಿಶೇಷವಿದೆ' ಎನ್ನುವೆ ಯೇನು? ಕನಸಿನಲ್ಲಿ ಕಾಣುವ ದೇಹವೂ ಆ ಕಾಲಕ್ಕೆ ಹಾಗೆಯೇ ಇದ್ದಿತಲ್ಲವೆ! ಹೆಚ್ಚೆಂದು

ಆಗ್ಗೆ ತಿಳಿದುಕೊಂಡಿದ್ದೆಯಲ್ಲವೆ? ಈಗ್ಗೆ ಆ ದೇಹವೆಲ್ಲಿ? ಅದರಿಂದಾದ ಅದೇ ಸುಖದುಃಖಗಳೆಲ್ಲಿ?

15. ಈ ದೇಹದ ಸುಖದುಃಖಗಳ ಪ್ರಾಪ್ತಿಪರಿಹಾರಕ್ಕಾಗಿ ಮತ್ತೊಂದು ದೇಹಕ್ಕೆ ಪೀಡೆಯನ್ನಾದರೂ ಮಾಡಬೇಕೆಂಬ ದುರ್ಬುದ್ಧಿಯನ್ನು ಬಿಡು. ಕನಸಿನಲ್ಲಿಯೂ ಹೀಗೆಯೇ ಮಾಡಿದೆಯಲ್ಲವೆ? ಆ ಪ್ರಯತ್ನದ ಫಲವು ಏನಾಯಿತು? ವೃಥಾಶ್ರಮವಾಗುವ ಕಾರ್ಯದಲ್ಲಿ ಏತಕ್ಕೆ ತೊಡಗುತ್ತಿರುವೆ?

16. ಎಲೆ ಮನವೆ, ನಿನ್ನ ಹಾರಾಟದಿಂದಲೇ ಶರೀರ, ಇಂದ್ರಿಯಗಳು, ವಿಷಯಗಳು– ಇವೆಲ್ಲವೂ ತೋರುತ್ತಿರುವವು. ಇದನ್ನು ಮರೆಯದಿರು. ನೀನು ಯಾವದಾದರೊಂದು ವಿಚಾರದಲ್ಲಿ ಮಗ್ನನಾಗಿರುವಾಗ ನಿನಗೆ ಹೊರಗಿನ ಯಾವದರ ಭಾವವೂ ಇರುವದೇ ಇಲ್ಲ. ಅಲ್ಲವೆ? ಹಿಂದೆ ನಿನಗೆ ಬಹುಮುಖ್ಯವೆಂದು ತೋರುತ್ತಿದ್ದ ವಿಷಯವಿಚಾರಗಳು ಈಗ ಮರೆತೇಹೋಗಿವೆ; ಮುಂದಿನವು ಇನ್ನೂ ಹುಟ್ಟಿಯೇ ಇಲ್ಲ. ಇನ್ನು ಈಗಿನವುಗಳು ಮಾತ್ರ ಮುಖ್ಯವೆಂದೇಕೆ ಬಗೆಯುತ್ತಿರುವೆ?

17. ತನಿನಿದ್ರೆಯಲ್ಲಿ ಹಿಂದಿಲ್ಲ, ಮುಂದಿಲ್ಲ, ಈಗಿನ ಕಾಲವೂ ಇಲ್ಲ. ಆಗ ಯಾವ ದೇಹದ ಚಿಂತೆಯಲ್ಲಿದ್ದೆ? ಇದನ್ನು ಚೆನ್ನಾಗಿ ಯೋಚಿಸಿನೋಡು.

## 4

### 26 - 4 - ಡಿಸೆಂಬರ್ 1956

18. ಎಲೆ ಮನಸ್ಸೆ, ಹೆಂಡತಿ, ಮಕ್ಕಳು, ಹೊಲಮನೆ, ದನಕರು, ಹಣಕಾಸು, ನೆಂಟರಿಷ್ಟರು–ಇವರೆಲ್ಲ ನನಗೆ ಹೊಂದಿಕೆಯಾಗಿರುವರು ಎಂದು ಹಿಗ್ಗುವೆಯಲ್ಲ! ಎಂಥ ಮೂಢನು ನೀನು! ಅತ್ಯಂತವಾಗಿ ಹೊರಗೆ ನಿನಗಿಂತ ಬೇರೆಯಾಗಿರುವ ಈ ದೃಶ್ಯಗಳನ್ನು ನಾನು, ನನ್ನದು– ಎಂದುಕೊಳ್ಳುವದಕ್ಕೆ ನಿನಗೆ ಏತಕ್ಕೆ ನಾಚಿಕೆಯಾಗುವದಿಲ್ಲ?

19. ಅವರಿಗೂ ನನಗೂ ಧರ್ಮದ ಸಂಬಂಧವಿದೆ; ಧರ್ಮಕ್ಕೆ ಕಟ್ಟುಬಿದ್ದು ಅವರು ನನಗೂ ಉಪಕಾರವನ್ನು ಮಾಡುತ್ತಿದ್ದಾರೆ, ನಾನೂ ಅವರಿಗೆ ಮಾಡುತ್ತಿದ್ದೇನೆ– ಎನ್ನುವಿಯೇನು? ಆದರೆ ಯಾವ ವಂಚನೆಯೂ ಇಲ್ಲದೆ ನೋಡಿ ಹೇಳು. ನಿನ್ನನ್ನು ಅವರು ಎಂಥ ಕಷ್ಟದಲ್ಲಿಯೂ ಹಿಂಬಾಲಿಸುವರೆ? ನಿನ್ನ ಸ್ಥಿತಿಯು ಎಷ್ಟು ಕೆಳಕ್ಕೆ ಇಳಿದರೂ ಧರ್ಮಕ್ಕೆ ಕಟ್ಟುಬಿದ್ದು ನಿನ್ನನ್ನು ಅವರು ನೋಡಿಕೊಳ್ಳುವದಕ್ಕೆ ಸಿದ್ಧರಾಗಿರುವರೆ? ನೀನೂ ಹಾಗೆಯೇ ನಿನ್ನ ಸ್ವಾರ್ಥವನ್ನು ತೊರೆದು ಅವರಿಗೆಲ್ಲರಿಗೂ

ಯಾವ ಪ್ರತ್ಯುಪಕಾರವನ್ನೂ ಬಯಸದೆ ಉಪಕಾರವನ್ನೇ ಮಾಡುವದಕ್ಕೆ ಸಿದ್ಧವಾಗಿರುವೆಯ? ಇಲ್ಲದಿದ್ದರೆ ಈ ನಟನೆಯ ಧರ್ಮದ ಮಾತೇಕೆ?

20. ಎಲೆ ಮನಸ್ಸೆ, ಧರ್ಮವು ಎಲ್ಲಕ್ಕೂ ಹೆಚ್ಚಿನದು. ತಂದೆತಾಯಿ, ಹೆಂಡತಿ ಮಕ್ಕಳು– ಇವರು ಧರ್ಮಕ್ಕೆ ನೆಪಮಾತ್ರ. ಜನ್ಮಜನ್ಮಕ್ಕೂ ತಂದೆತಾಯಿಗಳೂ ಹೆಂಡತಿಮಕ್ಕಳೂ ಬೇರೆಬೇರೆಯಾಗುವರು. ನಿನ್ನ ಧರ್ಮವು ನಿನ್ನನ್ನೇ ಹಿಂಬಾಲಿಸುವದು, ಅಲ್ಲವೆ? ಆದ್ದರಿಂದ ಧರ್ಮಕ್ಕಾಗಿ ಏನನ್ನಾದರೂ ತ್ಯಜಿಸುವೆನೆಂದು ಸಿದ್ಧವಾಗಿರುವೆಯ?

21. ಈ ಜನ್ಮದ ಶರೀರದ ನೆಪದಿಂದ ಈಗಿನ ಬಂಧುಬಾಂಧವರೂ ಮಿಕ್ಕ ಪರಿವಾರವೂ ನಿನ್ನನ್ನು ಪ್ರೀತಿಸುತ್ತಿರುವರು; ನೀನೂ ಅವರನ್ನು ಆ ನಿಮಿತ್ತದಿಂದಲೇ ಪ್ರೀತಿಸುತ್ತಿರುವೆ. ಆದರೆ ಈ ಶರೀರವನ್ನೇ ಬಿಟ್ಟು ಒಂದಲ್ಲ ಒಂದು ದಿನ ಅವಶ್ಯವಾಗಿ ತೆರಳಬೇಕಾಗುವದೆಂಬುದನ್ನು ಯೋಚಿಸಿರುವೆಯ? ಆಗ ನಿನ್ನನ್ನು ನೋಡಿಕೊಳ್ಳುವದಕ್ಕೆ ಯಾರು? ಪುಣ್ಯಪಾಪಗಳು ಮಾತ್ರ ನಿನ್ನನ್ನು ಹಿಂಬಾಲಿಸುತ್ತಿರುವವು. ಅಲ್ಲವೆ? ಆದ್ದರಿಂದ ನಿನ್ನೊಳಗೆ ನೀನೇ ನೋಡಿಕೊ! ನಿನ್ನ ನೆಂಟರು ಯಾರು? ಪುಣ್ಯಗಳೊ, ಪಾಪಗಳೊ?

## 5

### 26 - 5 - ಜನವರಿ 1957

22. ಎಲೆ ಮನವೆ, ನೀನು ಸ್ವತಂತ್ರನೆಂದೂ ನಿನಗೆ ಬೇಕಾದಂತೆ ಶರೀರೇಂದ್ರಿಯಾದಿಗಳನ್ನು ಉಪಯೋಗಿಸಿಕೊಂಡು ಇಷ್ಟಾರ್ಥಗಳನ್ನು ಪಡೆಯುವೆನೆಂದೂ ಹೆಮ್ಮೆ ಪಡುತ್ತಿರುವೆ. ಆದರೆ ನಿಜವಾಗಿ ವಿಚಾರಮಾಡಿ ನೋಡು! ನೀನು ಹೇಳಿದಂತೆ ದೇಹಾದಿಗಳು ಕೇಳುತ್ತಿರುವವೊ, ಅವು ಹೇಳಿದಂತೆ ನೀನು ಕೇಳುತ್ತಿರುವೆಯೊ?

23. ಮನವೆ, ನೀನು ಮಗುವಾಗಿದ್ದಾಗ ನಿನಗೆ ಯಾವ ದೇಹದ ಅರಿವೂ ಇರಲಿಲ್ಲ. ದೇಹವನ್ನು ರಕ್ಷಿಸಿಕೊಳ್ಳಬೇಕೆಂಬ ಚಿಂತೆಯು ಕೂಡ ನಿನಗೆ ಇರಲಿಲ್ಲ. ನಿನ್ನ ತಾಯಿಯೊ, ತಂದೆಯೊ, ಅಕ್ಕನೊ, ಅಣ್ಣನೊ ಅಥವಾ ಮತ್ತೆ ಯಾವ ಹಿರಿಯರೊ, ನಿನ್ನ ಎಲ್ಲಾ ಯೋಗಕ್ಷೇಮವನ್ನೂ ನೋಡಿಕೊಳ್ಳುತ್ತಿದ್ದರು. ಸ್ವಲ್ಪ ದೊಡ್ಡವನೆನಿಸಿಕೊಂಡ ಮೇಲೆ ಆಗಿನ ದೇಹಕ್ಕೆ ಬೇಕಾದ ಆಟಪಾಟಗಳ ಸಾಮಗ್ರಿಗಳು, ಆಹಾರಪದಾರ್ಥಗಳು– ಇವುಗಳ ಸಂಗ್ರಹಕ್ಕೆ ಮನಸೋತಿದ್ದೆ. ಇನ್ನೂ ದೊಡ್ಡವನಾದ ಮೇಲೆ ದೇಹವನ್ನೇ ಅಲ್ಲದೆ ದೇಹಕ್ಕೆ ಸಂಬಂಧಪಟ್ಟ ಹೆಂಡತಿ ಮಕ್ಕಳು, ಹೊಲಮನೆ,

ಹಣ, ವಿದ್ಯೆ, ದೇಶ, ಭಾಷೆ– ಮುಂತಾದವುಗಳ ಅಭಿಮಾನವನ್ನೂ ಮಾಡಿಕೊಂಡೆ. ಈಗ ಹೇಳು! ನೀನು ನಿಜವಾಗಿ ಸ್ವತಂತ್ರನೆ?

24. ಬಾಲ್ಯ, ಯೌವನ, ಕೌಮಾರ– ಮುಂತಾದ ಅವಸ್ಥೆಗಳಲ್ಲಿ ಶರೀರವು ಹೇಗೆ ಇದ್ದರೆ ಅದಕ್ಕೇ ನೀನು ಹೊಂದಿಕೊಳ್ಳಬೇಕಾಗಿರುತ್ತದೆ. ಇಂದ್ರಿಯಗಳು ಯಾವ ಸ್ಥಿತಿಯಲ್ಲಿದ್ದರೆ ಆ ಸ್ಥಿತಿಯಲ್ಲಿಯೇ ಅವುಗಳ ಮೂಲಕ ಆಗುವ ಜ್ಞಾನದಿಂದ ತೃಪ್ತನಾಗಿ ಆಯಾ ಸುಖದುಃಖಗಳಿಗೆ ಹೊಂದಿಕೊಳ್ಳುತ್ತಿರುವೆ. ನಿನಗೆ ಯಾವ ದೇಹದ ಮೇಲೆ ಯಾವಾಗ ಸ್ವಾತಂತ್ರ್ಯವಿರುತ್ತದೆ?

25. ದಿನದಿನವೂ ನೀನು ಕನಸುಗಳನ್ನೂ ಕಾಣುತ್ತಿರುವೆಯಷ್ಟೆ? ಆಗ ಈ ನಿನ್ನ ಎಚ್ಚರದ ದೇಹವೇ ಇದೇ ಸ್ಥಿತಿಯಲ್ಲಿರುವದೆಂಬ ಭರವಸೆಯಿದೆಯೆ? ಆದರೂ ಆ ದೇಹಕ್ಕೂ ಅದಕ್ಕೆ ಅಂಟಿಕೊಂಡಿರುವ ಇಂದ್ರಿಯಗಳಿಗೂ ಹೊಂದಿಕೊಂಡೇ ನಡೆಯುತ್ತಿರುವೆಯಲ್ಲವೆ? ಆಗ ನಿನ್ನ ಸ್ವಾತಂತ್ರ್ಯ ಎಲ್ಲಿರುವದು?

26. ಎಲೆ ಬೆಪ್ಪುಮನವೆ, ಧರ್ಮಾಧರ್ಮಗಳ ಬಲದಿಂದ ನಿನಗೆ ಒದಗಿ ಬರುವ ಯಾವ ದೇಹವೇ ಆಗಲಿ, ಯಾವ ಇಂದ್ರಿಯಗಳೇ ಆಗಲಿ, ನಿನ್ನ ಮೇಲೆ ತಮ್ಮ ಅಧಿಕಾರವನ್ನು ಚಲಾಯಿಸುತ್ತಲೇ ಇರುವವು. ಇದಲ್ಲದೆ ನಿನಗೆ ಮನುಷ್ಯ ದೇಹವೇ ಯಾವಾಗಲೂ ದೊರಕುವದೆಂಬ ಭರವಸೆಯಂತೂ ಇಲ್ಲವೇ ಇಲ್ಲ. ದೇಹಾದ್ಯಭಿಮಾನವಿರುವವರೆಗೆ ನಿನಗೆ ಸ್ವಾತಂತ್ರ್ಯದ ವಾಸನೆಕೂಡ ಇಲ್ಲವೆಂಬುದನ್ನು ನಿಶ್ಚಯಮಾಡಿಕೊ. ಸುಮ್ಮನೆ ಹಗಲುಗನವರಿಕೆ ಮಾಡಿಕೊಂಡು ಮೋಸ ಹೋಗಬೇಡ!

## 6

### 26 - 6 - ಫೆಬ್ರವರಿ 1957

27. ಎಲೆ ಮನಸ್ಸೆ, ಅಜ್ಞಾನವನ್ನು ಜ್ಞಾನವೆಂದೂ ರಾಗದ್ವೇಷಗಳನ್ನೇ ವೈರಾಗ್ಯವೆಂದೂ ಕಾಮವನ್ನು ಭಕ್ತಿಯೆಂದೂ ತಿಳಿದುಕೊಂಡಿರುವ ನಿನ್ನ ಮೌಢ್ಯವನ್ನು ನೀನು ತಿಳಿದುಕೊಳ್ಳಲಾರದೆ ಇರುವೆ. ತನ್ನನ್ನುಳಿದು ಮಿಕ್ಕವರೆಲ್ಲರೂ ಹುಚ್ಚರೆಂದು ಭಾವಿಸಿರುವ ಕಡುಹುಚ್ಚನಂತೆ ಇದೆ ನಿನ್ನ ವರ್ತನವು. ಆದ್ದರಿಂದ ಈ ಮಹಾಮೋಹವನ್ನು ಕಳೆದುಕೊಳ್ಳುವದಕ್ಕೆ ಮೊದಲು ಪ್ರಯತ್ನಿಸು!

28. ವ್ಯವಹಾರಕ್ಕೆ ಬೇಕಾದ ವಸ್ತುಗಳ ಮತ್ತು ಬೇಡವಾದ ವಸ್ತುಗಳ ವಿವೇಕವೇ ಜ್ಞಾನವೆಂದು ನಿನ್ನ ಭಾವನೆ! ಆದರೆ ವ್ಯವಹಾರವೇ ನಿನ್ನ ಜೀವನದ

ಹೆಗ್ಗುರಿ ಎಂದು ಏತರಮೇಲೆ ನಿಶ್ಚಯಿಸಿದೆ? ನಿನಗೆ ಸರಿಯೆಂದು ತೋರುವದೇ ಸರಿಯಾದ ವ್ಯವಹಾರ, ನಿನಗೆ ತಪ್ಪೆಂದು ತೋರುವದೇ ತಪ್ಪು ವ್ಯವಹಾರ– ಎಂದು ತೀರ್ಮಾನಿಸಿಕೊಂಡಿರುವೆಯಲ್ಲವೆ? ಆದರೆ ನಿನಗೆ ಈಗ ಯಾವ ವ್ಯವಹಾರವು ಸರಿಯೆಂದು ತೋರುತ್ತಿರುವದೋ ಅದು ಹಿಂದೆ ತಪ್ಪೆಂದು ತೋರುತ್ತಿತ್ತು. ಇನ್ನು ಮುಂದೆ ಯಾವ ವ್ಯವಹಾರವು ಸರಿಯೆಂದು ನಿನಗೆ ತೋರುವದೋ ಯಾರು ಬಲ್ಲರು? ಹೀಗಿರುವಲ್ಲಿ ಈ ವ್ಯವಹಾರವೆಂಬ ಅಳತೆಯ ಕೋಲಿನಿಂದ ವಸ್ತುಗಳ ಯೋಗ್ಯತೆಯನ್ನು ಅಳೆಯುವದು ವಿವೇಕವೊ, ಅವಿವೇಕವೊ? ನೀನೇ ವಿಚಾರಮಾಡಿ ನೋಡು!

29. ನೀನು ಇಂದ್ರಿಯಗಳೆಂಬ ಕಿಟಕಿಗಳಿಂದ ಕಾಣುವಂತೆಯೇ ಪ್ರಪಂಚ ವಿರುವದೆಂದು ನೀನು ಬಗೆದಿರುವೆಯಷ್ಟೆ. ಈ ಕಿಟಕಿಗಳಿಗೆ ಒಂದೊಂದಕ್ಕೆ ಒಂದೊಂದು ಬಣ್ಣದ ಗಾಜು ಹಾಕಿದೆ. ಅದರಿಂದಲೇ ನಿನಗೆ ಒಂದರಿಂದ ಶಬ್ದ, ಇನ್ನೊಂದರಿಂದ ಸ್ಪರ್ಶ, ಮತ್ತೊಂದರಿಂದ ರೂಪ– ಹೀಗೆ ತೋರುತ್ತಿವೆ. ಹೊರಗಿನ ಪ್ರಪಂಚವು ಶಬ್ದರೂಪವೊ, ಸ್ಪರ್ಶರೂಪವೊ, ರೂಪರೂಪವೊ ನಿನಗೆ ಹೇಗೆ ಗೊತ್ತು? ಆ ಪ್ರಪಂಚವನ್ನು ಶಬ್ದಸ್ಪರ್ಶಾದಿಗಳ ಒಟ್ಟೆಂದು ನಿಶ್ಚಯಿಸಿಕೊಂಡು ಮೋಹಪಡುತ್ತಿರುವೆಯಲ್ಲ! ನಿನ್ನ ಮರುಳುತನಕ್ಕೇನೆನ್ನೋಣ!

30. ಮರಳುಮನಸ್ಸೆ, ನೀನು ಕಲ್ಪಿಸಿಕೊಂಡಿರುವ ಪ್ರಪಂಚದಲ್ಲಿ ಇದು ಬೇಕು, ಇದು ಬೇಡ– ಎಂಬ ದುರಾಗ್ರಹವನ್ನು ಮಾಡಿಕೊಂಡು ದಿನದಿನಕ್ಕೂ ನಿನ್ನನ್ನು ನೀನೇ ಮೈಲಿಗೆ ಮಾಡಿಕೊಳ್ಳುತ್ತಿರುವೆಯಲ್ಲ! ಇದು ಜ್ಞಾನವೊ, ಅಜ್ಞಾನವೊ? ವಿಚಾರಿಸಿ ನೋಡು!

31. ನಿನಗೆ ನಿನ್ನ ವಿಷಯದಲ್ಲಿಯೇ ತಿಳಿವಳಿಕೆಯಿಲ್ಲ. ನೀನು ಯಾವಾಗ ಯಾವ ಸ್ಥಿತಿಯಲ್ಲಿದ್ದೆ, ಯಾವಾಗ ಯಾವ ಸ್ಥಿತಿಯಲ್ಲಿರುವೆ?– ಎಂಬುದೇ ನಿನಗೆ ತಿಳಿಯದು. ಘಳಿಗೆಗೊಂದು ಬಣ್ಣವನ್ನು ತಾಳುತ್ತಿರುವ ನಿನ್ನ ಸ್ವರೂಪದ ವಿಷಯವಾಗಿ ಯಾದರೂ ವಿಚಾರಮಾಡಬಾರದೆ?

32. ನಿನಗೆ ಯಾವ ಆಹಾರವಿಹಾರ, ವೇಷಭಾಷೆಗಳು ಬೇಕೆನಿಸುವವೋ ಅವು ಸಾತ್ತ್ವಿಕ. ನಿನಗೆ ಯಾವ ಆಹಾರಾದಿಗಳು ಬೇಡವೆನಿಸುವವೋ ಅವು ರಾಜಸ, ತಾಮಸ– ಎಂದುಕೊಳ್ಳುತ್ತಿರುವೆ. ನಿನಗೆ ಬೇಕಿಲ್ಲದ ವಸ್ತುಗಳನ್ನು ಬಿಡುವದು ವೈರಾಗ್ಯವೆನಿಸುವದೆ? ವಿರಕ್ತರಾದ ಪರಮಹಂಸರ ಅಥವಾ ಯೋಗಿಗಳ ಬಾಹ್ಯ ವೇಷವನ್ನು ಅನುಕರಿಸಿದ ಮಾತ್ರಕ್ಕೆ ನೀನು ನಿಜವಾಗಿ ವಿರಕ್ತನೆನಿಸುವೆಯ?

33. ಕೌಪೀನ, ಕಾಷಾಯವಸ್ತ್ರ, ಜಪ, ರುದ್ರಾಕ್ಷಭಸ್ಮಾದಿಧಾರಣ,

ಏಕಾಂತವಾಸ– ಮುಂತಾದವುಗಳ ತೋರುಗಾಣಿಕೆಯು ವಿರಕ್ತಿಯ ಗುರುವೆಂದು ತಿಳಿದು ಮೋಸಹೋಗದಿರು, ಅವುಗಳಲ್ಲಿ ಕೂಡ ನಿನಗೆ ರಾಗದ್ವೇಷಗಳಿರಬಹುದು. ಕನಸಿನಲ್ಲಿ ಕಾಣುವ ತೋರಿಕೆಗಳಲ್ಲಿ ಕೂಡ ನಿನಗೆ ರಾಗದ್ವೇಷಗಳಿರುವದಿಲ್ಲವೆ? ಆಗ್ಗೆ ನೀನು ಎಚ್ಚರದ ಪ್ರಪಂಚವನ್ನು ವೈರಾಗ್ಯದಿಂದ ಬಿಟ್ಟಿರುವೆಯೇನು?

34. ಪರಮೇಶ್ವರನ ಮೂರ್ತಿಗಳಿಗೆ ಅಲಂಕಾರವನ್ನು ಮಾಡಿಸುವದು, ಪಂಚಭಕ್ಷ್ಯಪರಮಾನ್ನದ ನೈವೇದ್ಯವನ್ನು ಮಾಡಿಸುವದು, ಬ್ರಾಹ್ಮಣ ಸುವಾಸಿನಿಯರಿಗೆ ಸಂತರ್ಪಣೆಯನ್ನು ಕಲ್ಪಿಸುವದು, ತೀರ್ಥಕ್ಷೇತ್ರಗಳ ದರ್ಶನ, ಭಜನ, ಕೀರ್ತನಗಳ ಏರ್ಪಾಡು– ಇವುಗಳು ಯಾವಾಗಲೂ ಭಕ್ತಿಯ ಗುರುತುಗಳೆಂದು ತಪ್ಪಾಗಿ ತಿಳಿದುಕೊಳ್ಳದಿರು. ಈ ವ್ಯವಹಾರಗಳು ಪರಮೇಶ್ವರನ ಆರಾಧನೆಗೊ, ನಿನ್ನ ಅಥವಾ ನೀನು ಕಲ್ಪಿಸಿಕೊಂಡಿರುವ ಇಂದ್ರಿಯಗಳ ತೃಪ್ತಿಗೊ?– ಇದನ್ನು ಮೊದಲು ವಿಚಾರಮಾಡು. ಕಾಮಕ್ಕೂ ಈಶ್ವರಪ್ರೇಮಕ್ಕೂ ಬಲು ದೂರ!

35. ಸರ್ವಭೂತಗಳಿಗೂ ಸಂತೋಷವನ್ನುಂಟುಮಾಡಿದರೆ ಆಯಿತು, ಅದೇ ಈಶ್ವರಪೂಜೆಯು ಎಂದು ಹೇಳಿಕೊಳ್ಳುತ್ತಾ ದಾಂಭಿಕತನದ ದಯಾಪ್ರದರ್ಶನವನ್ನು ಮಾಡಬೇಡ, ರಾಜಸದಾನಗಳಿಂದ ಜನರನ್ನು ಮೋಸಮಾಡಿ ಆತ್ಮವಂಚನೆ ಮಾಡಿಕೊಳ್ಳಬೇಡ; ಅತಿಥಿಸತ್ಕಾರ, ದೀನಾಂಧಬಧಿರಾದಿಗಳ ಸೇವೆ – ಎಂಬ ಹೆಸರಿನಿಂದ ತೋರುಗಾಣಿಕೆಯ ಕೃತ್ಯಗಳನ್ನೆಸಗಿ ಕೀರ್ತಿಗೆ ಹವಣಿಸಿದರೆ, ಅದು ಈಶ್ವರಪ್ರೀತ್ಯರ್ಥವೆನಿಸೀತೆ? ಯೋಚಿಸಿನೋಡು!

36. ಪರಮಾತ್ಮನ ಪರಮಾರ್ಥ ಸ್ವರೂಪವನ್ನು ಅರಿತುಕೊಳ್ಳುವದೇ ನಿಜವಾದ ಜ್ಞಾನವು, ಪರಮಾತ್ಮನನ್ನು ಗಂಗಾಪ್ರವಾಹದಂತೆ ಎಡೆಬಿಡದೆ ಪ್ರೇಮದಿಂದ ಕಂಡು ನಲಿಯುವ ಚಿತ್ತವೃತ್ತಿಸಂತಾನವೇ ಭಕ್ತಿಯು, ಆತ್ಮರತಿಗೆ ಅಡ್ಡವಾಗಿರುವ ಇಹಪರಭೋಗಗಳ ಅಸಾರತೆಯನ್ನು ನಿಶ್ಚಯಿಸಿ ಭಗವದ್ಭಕ್ತಿಗೆ ಸಿದ್ಧನಾಗುವದೇ ವೈರಾಗ್ಯವು. ಈ ಮೂರು ಸೂತ್ರವಾಕ್ಯಗಳನ್ನು ಜಪಿಸುತ್ತಿರು. ಅದರಿಂದ ನಿನಗೆ ಕ್ಷೇಮವುಂಟು.

## 7

### 26 – 7 – ಮಾರ್ಚ್ 1957

37. ಎಲೆ ಮನಸ್ಸೆ, ಶಾಂತಿಗೆಂದು ನೀನು ಕೈಗೊಂಡ ಯಾವ ಉಪಾಯವೂ ಜಯಶೀಲವಾಗಿಲ್ಲ; ಅದರಿಂದ ನಿನಗೆ ಅಶಾಂತಿಯೇ

ಉಂಟಾಗಿರುತ್ತದೆ. ಇದನ್ನು ಕಂಡಾದರೂ ಇವುಗಳು ಶಾಂತಿಗೆ ಉಪಾಯವಲ್ಲ ಎಂದು ತಿಳಿದುಕೊಳ್ಳಬಾರದೆ? ಸುಮ್ಮನೆ ಏತಕ್ಕೆ ಆಯಾಸಪಡುತ್ತಿರುವೆ?

38. ಹೊಲ, ಮನೆ, ಹಣಕಾಸು– ಮುಂತಾದವುಗಳನ್ನು ಸಂಪಾದಿಸಿ ಕೊಳ್ಳುವದು, ಸಂಸ್ಥೆಯ ಸ್ಥಾಪನೆ, ಅಧಿಕಾರಲಾಭ, ಕೀರ್ತಿಯನ್ನು ಸಂಪಾದಿಸಿ ಕೊಳ್ಳುವದು–ಇಂಥ ಉಪಾಯಗಳಿಂದ ನಿನಗೆ ಶಾಂತಿಯು ದೊರಕಿಲ್ಲ. ಆದರೂ ಮತ್ತೆ ಮತ್ತೆ ಅದೇ ಉಪಾಯಗಳನ್ನು ಅನುಸರಿಸುತ್ತಿರುವೆಯಲ್ಲ! ನೀನೇನು ತಿಳಿದವನೋ, ತಿಳಿಯದವನೊ?

39. ಕುಟುಂಬ, ನೆಂಟರಿಷ್ಟರು, ಗೆಳೆಯರು, ನನ್ನವರು–ಎಂದು ಅವರ ಪೋಷಣೆಗೆ ಹಾತುವರಿಯುತ್ತಿರುವೆ. ಅವುಗಳಿಂದ ನಿನಗೆ ದಿನದಿನಕ್ಕೂ ಅಶಾಂತಿಯೇ ಹೆಚ್ಚುತ್ತಿದೆ. ಇದನ್ನು ತಿಳಿದೂ ತಿಳಿದೂ ಮತ್ತೆ ಅವುಗಳಿಂದಲೇ ಶಾಂತಿಯಾಗುವ ದೆಂದು ನಂಬಿರುವೆಯಲ್ಲ! ಎಂಥ ಮೂರ್ಖನು ನೀನು!

40. ಅಶಾಂತಿಯನ್ನು ಮರೆಮಾಚುವದಕ್ಕಾಗಿ ಮಾಡಬಾರದ ಕೃತ್ಯಗಳನ್ನು ಕೆಲಕಾಲ ಮಾಡಿರುವೆ. ಜೂಜು, ಮದ್ಯಪಾನ, ದುಷ್ಟಸಹವಾಸ, ಶೃಂಗಾರದ ಸಂಗೀತ, ನಾಟಕ, ಸಿನೆಮ– ಮುಂತಾದವುಗಳ ಸೇವನೆ, ಬೇರೆ ಬೇರೆ ದೃಶ್ಯಗಳನ್ನು ನೋಡಿ ಬರುವದು– ಇವುಗಳಿಂದ ಅಶಾಂತಿಯನ್ನು ದೂರಮಾಡಿಕೊಳ್ಳಬೇಕೆಂದು ಹವಣಿಸಿದೆ. ಆದರೆ ಅವುಗಳಿಂದ ಸ್ವಲ್ಪ ಕಾಲ ಮರೆಯಾದಂತಿದ್ದ ಅಶಾಂತಿಯು ಮತ್ತು ಬಲವಾಗಿ ಮರುಕಳಿಸಿತು. ಅಂದಮೇಲೆ ಅವು ಶಾಂತಿಗೆ ಹೇಗೆ ಉಪಾಯವಾದಾವು?

41. ನಿನಗೆ ಇಷ್ಟವೆಂದು ತೋರಿದ್ದರ ಪ್ರಾಪ್ತಿ, ಅನಿಷ್ಟವೆಂದು ತೋರಿದ್ದರ ಪರಿಹಾರ–ಇವುಗಳು ಆಗಲು ಸ್ವಲ್ಪಹೊತ್ತು ಏನೂ ಮಾಡದೆ ಇದ್ದೆ. ಆಗ ಶಾಂತಿ ಯಿದ್ದಂತೆ ಕಂಡುಬಂತು. ಆದರೆ ಮತ್ತೆ ಇಷ್ಟಪ್ರಾಪ್ತಿ, ಅನಿಷ್ಟನಿವೃತ್ತಿ– ಇವುಗಳ ಬೇಟೆಗೆ ಹೋಗಬೇಕೆಂದೇ ಹವಣಿಸಿದೆ. ಅಂಥ ಸಂದರ್ಭಗಳಲ್ಲಿ ನಿನಗೆ ಶಾಂತಿ ಏತಕ್ಕೆ ಬಂತೆಂಬುದನ್ನು ಯೋಚಿಸಬಾರದೆ? ಗಾಢನಿದ್ರೆಯಿದ್ದಾಗಲೂ ನಿನಗೆ ಶಾಂತಿಯಿತ್ತು. ಆಗ ಯಾವ ಸಾಧನದಿಂದ ಶಾಂತಿ ಬಂದಿತ್ತು? ಅದನ್ನು ಯೋಚಿಸು!

42. ಬೆಪ್ಪುಮನವೆ, ಶಾಂತಿಯು ನಿನ್ನ ಬೆನ್ನಹಿಂದೆಯೇ ಇದೆ. ಅದಕ್ಕೇ ಪರಮಾತ್ಮನೆಂದು ಹೆಸರು. ಅದನ್ನು ಬಿಟ್ಟು ಮುಂದುಮುಂದಕ್ಕೆ ಏತಕ್ಕೆ ಓಡುತ್ತಿರುವೆ? ಉಪ್ಪು ನೀರನ್ನು ಕುಡಿದರೆ ನೀರಡಿಕೆ ಹೋದೀತೆ?. ಸಾಕು, ಹಿಂತಿರುಗು! ಶಾಂತಿಯ ಗೂಡು ನಿನ್ನೊಳಗೇ ಇದೆ.

## 8

### 26 - 8 - ಏಪ್ರಿಲ್ 1957

43. ಮನಸ್ಸೆ, ನಿನಗೆ ಅಳವಡದ, ಅಥವಾ ಮತ್ತೊಬ್ಬರಿಗೆ ಹೊಂದುಗೆಯಾಗಿರುವದರಿಂದ ಯುಕ್ತವೆಂದು ತೋರುವ, ಆಚರಣೆಯನ್ನು ಸಾಧಿಸುವದಕ್ಕೆ ಹೋಗುವದನ್ನು ಬಿಡು; ನಿನಗೆ ಒಗ್ಗುವ ಧರ್ಮವನ್ನೇ ಅಭ್ಯಾಸವನ್ನು ಮಾಡುತ್ತಿರು. ಅದರಿಂದ ನಿನಗೆ ಶ್ರೇಯಸ್ಸಾಗುವದು.

44. ಹುಡುಗತನದಲ್ಲಿ ದೊಡ್ಡವರಂತೆ ನಟಿಸುವದಕ್ಕೆ ಹೋಗುವದೂ ದೊಡ್ಡವನಾದ ಮೇಲೂ ಹುಡುಗರಂತೆ ಚೆಲ್ಲಾಟವಾಡುವದೂ ಎಂದಿಗೂ ಸರಿಯಲ್ಲ. ನಿನ್ನ ಸ್ಥಿತಿಯು ಎಷ್ಟರಮಟ್ಟಿಗೆ ಪಕ್ವವಾಗಿದೆಯೋ ಅದನ್ನು ಅನುಸರಿಸಿ ನಿನ್ನ ನಡೆನುಡಿಗಳಿಗೆ ಅವಕಾಶವನ್ನು ಕೊಡು.

45. ಹೆಂಗಸು ಗಂಡುಬೀರಿಯಾಗಿ ನಡೆಯುವದೂ ಗಂಡಸು ಹೆಂಗಳ ನಡೆಯನ್ನು ಅನುಸರಿಸುವದೂ ಸರಿಯಾದೀತೆ? ನೀನು ಯಾವ ಸ್ಥಿತಿಯಲ್ಲಿರುವೆಯೋ ಅದನ್ನು ಆಲೋಚಿಸು.

46. ಬ್ರಹ್ಮಚಾರಿಯಾಗಿದ್ದಾಗ ಗೃಹಸ್ಥನಂತೆ ಭೋಗಾಸಕ್ತನಾಗುವದಕ್ಕೆ ಹೋಗುವದೂ ಗೃಹಸ್ಥನಾದಮೇಲೆ ಬ್ರಹ್ಮಚಾರಿಯಂತೆ ನಿಷ್ಠುರವಾದ ಬ್ರಹ್ಮಚರ್ಯೆಯನ್ನವಲಂಬಿಸುವದೂ ತರವಲ್ಲ. ಕುಟುಂಬಿಯಾಗಿರುವಾಗ ಶರೀರವನ್ನು ಅನವಶ್ಯವಾಗಿ ದಂಡಿಸುವದೂ ವಾನಪ್ರಸ್ಥನ ಸ್ಥಿತಿಗೆ ಏರಿದಾಗಲೂ ಕುಟುಂಬಿಯ ಸುಖಗಳನ್ನು ಬಯಸುವದೂ ಎಂದಿಗೂ ಒಪ್ಪಲಾರದು. ತ್ರಿವರ್ಗವನ್ನು ಅನುಭವಿಸುವದಕ್ಕೆ ಮಾತ್ರ ಯೋಗ್ಯತೆಯಿರುವಾಗ ಪರಿವ್ರಾಜಕನಂತೆ ನಟಿಸುವದೂ ಪರಿವ್ರಾಜಕನೆಂದುಕೊಂಡು ಮಿಕ್ಕ ಮೂರು ಆಶ್ರಮಗಳ ಧರ್ಮವನ್ನವಲಂಬಿಸುವದಕ್ಕೆ ಹೋಗುವದೂ ಎಂದಿಗಾದರೂ ಸರಿಯಾದೀತೆ? ಆಲೋಚಿಸು.

47. ಲೋಕವ್ಯಾಪಾರದಲ್ಲಿಯೇ ನಿರತನಾಗಿರು, ವಿರಕ್ತನಾಗಿ ಪರತತ್ತ್ವ ಚಿಂತನೆಗೇ ತನುಮನೋಧನಗಳನ್ನು ಒಪ್ಪಿಸು. ಹೇಗೇ ಇದ್ದರೂ ಧರ್ಮವನ್ನು ಬಿಡಬೇಡ. ಪ್ರವೃತ್ತಿಧರ್ಮವನ್ನೊ ನಿವೃತ್ತಿಧರ್ಮವನ್ನೊ ಕಾಲಕ್ಕೂ ಸ್ಥಿತಿಗೂ ತಕ್ಕಂತೆ ಅವಲಂಬಿಸುವದಕ್ಕೆ ಪ್ರಯತ್ನಿಸುತ್ತಿರು.

48. ಮತ್ತೊಬ್ಬರ ವೇಷವನ್ನಾಗಲಿ ಆಚಾರವನ್ನಾಗಲಿ ಅನುಕರಿಸಿದ ಮಾತ್ರದಿಂದ ನಿನಗೆ ಶ್ರೇಯಸ್ಸಾಗುವದೆಂಬ ಭ್ರಾಂತಿಯನ್ನು ತೊಲಗಿಸಿಕೊ. ನಿನ್ನ ಅಂತಸ್ತು ಯಾವದೋ ಅದಕ್ಕೆ ತಕ್ಕ ನಡೆನುಡಿಗಳನ್ನು ಅನುಸರಿಸುವದರಿಂದ ನಿನಗೆ ಎಂದೆಂದಿಗೂ ಶ್ರೇಯಸ್ಸಾಗುವದು. ಹಾಗೆ ಮಾಡುವಂತೆ ಅನುಗ್ರಹಿಸೆಂದು ಭಗವಂತನನ್ನು ಪ್ರಾರ್ಥನೆಮಾಡುತ್ತಿರು.

## 9

### 26 - 9 ಮಾರ್ಚ್ 1957

49. ಮನಸ್ಸೆ, ನಿನಗೆ ಎಷ್ಟೋ ಸಲ 'ಕೃತಕೃತ್ಯನಾದೆನು, ತಿಳಿಯತಕ್ಕದ್ದನ್ನು ತಿಳಿದೆನು' ಎಂಬ ಹುಸಿ ತೃಪ್ತಿಯಾಗಿದೆ. ಸ್ವಲ್ಪಕಾಲದೊಳಗಾಗಿ ಮತ್ತೆ ಇದನ್ನು ಮಾಡಬೇಕು, ಅದನ್ನು ಮಾಡಬೇಕು– ಎಂಬ ಸಂಕಲ್ಪವುಂಟಾಗುತ್ತದೆ; ಇದನ್ನು ಅರಿತುಕೊಳ್ಳಬೇಕು, ಅದನ್ನು ಅರಿತುಕೊಳ್ಳಬೇಕು–ಎಂಬ ತಹತಹವುಂಟಾಗುತ್ತದೆ. ಇದೇ ಅವಿದ್ಯಾಕಾಮಗಳ ಗುರುತು – ಎಂದು ತಿಳಿದುಕೊ.

50. ವಿಷಯಗಳನ್ನು ಒಂದೊಂದಾಗಿ ಎಷ್ಟು ತಿಳಿದುಕೊಂಡರೂ ಎಲ್ಲವನ್ನೂ ಅರಿತಂತೆ ಆಗಲಾರದು. ಕರ್ಮವನ್ನು ಒಂದೊಂದಾಗಿ ಎಷ್ಟು ಮಾಡಿದರೂ ಎಲ್ಲವನ್ನೂ ಮಾಡಿದಂತೆ ಆಗಲಾರದು. ಅಜ್ಞಾನವು ಸಂಪೂರ್ಣವಾಗಿ ಕಳೆಯ ಬೇಕಾದರೆ ಪೂರ್ಣತತ್ತ್ವದ ಜ್ಞಾನವೇ ಬೇಕು, ಕೃತಕೃತ್ಯತೆಯುಂಟಾಗಬೇಕಾದರೆ ಕಾಮದ ಮೂಲವೇ ಹೋಗಿಬಿಡಬೇಕು. ಇದನ್ನು ಮೊದಲು ನಿರ್ಣಯಿಸಿಕೊ.

51. ಎಲ್ಲವನ್ನೂ, ನಿನ್ನನ್ನು ಕೂಡ, ವ್ಯಾಪಿಸಿಕೊಂಡಿರುವ ಪರಮಾರ್ಥವೇ ಪೂರ್ಣವು. ಅದನ್ನು ಅರಿತಾಗ ಮಾತ್ರ ಪೂರ್ಣದ ಜ್ಞಾನವಾಗುವದು. ಅಜ್ಞಾನವು ಆತ್ಯಂತಿಕವಾಗಿ ನಾಶವಾಗುವದು, ಅಲ್ಲಿಯವರೆಗೆ ಎಷ್ಟು ಶಾಸ್ತ್ರಗಳನ್ನು ತಿಳಿದರೂ ಪರಿಚ್ಛಿನ್ನಜ್ಞಾನವೇ ಆಗಿರುತ್ತದೆ. ಆದ್ದರಿಂದ ಅರಿಯಬೇಕಾದದ್ದು ಉಳಿದುಕೊಂಡೇ ಇರುತ್ತದೆ, ಅಜ್ಞಾನವು ಇದ್ದೇ ಇರುತ್ತದೆ. ಇದನ್ನು ಮರೆಯದಿರು.

52. ಕಾಮಗಳು ಹೊರಗೆ ಅನಂತವಾಗಿವೆ ಎಂಬ ತಿಳಿವಳಿಕೆಯಿರುವವರೆಗೆ ಅವುಗಳ ಪ್ರಾಪ್ತಿಗೆಂದು ಮಾಡುವ ಕರ್ಮಗಳೂ ಇದ್ದೇ ಇರುತ್ತವೆ. ಕಾಮಿಗೆ ಎಂದೂ ಕೃತಕೃತ್ಯತೆಯಿಲ್ಲ. ಕೆಲಸವನ್ನು ಮಾಡಿ ಸೋತು ಸುಮ್ಮನಿರುವದು ಕೃತಕೃತ್ಯತೆ ಎಂದು ಭ್ರಮಿಸಬೇಡ.

53. ಪರಮಾತ್ಮನನ್ನು ಕಂಡುಕೊಳ್ಳದೇ ಇರುವವರೆಗೆ ಕಾಮಗಳು ಹೊರಗೆ ಕಾಣಿಸುತ್ತಲೇ ಇರುತ್ತವೆ. ಅಜ್ಞಾತನಾದ ಪರಮಾತ್ಮನೇ ಕಾಮಜನಕನು, ಜ್ಞಾತನಾದ ಪರಮೇಶ್ವರನೇ ಕಾಮಹರನು.

54. ಆದ್ದರಿಂದ ಪರಮಾತ್ಮನನ್ನು ಅರಿತುಕೊಳ್ಳುವದಕ್ಕೆ ಹವಣಿಸು, ಪರಮಾತ್ಮ ಪ್ರಾಪ್ತಿಗೆ ನಿನ್ನ ಪ್ರಯತ್ನವನ್ನೆಲ್ಲ ವಿನಿಯೋಗಿಸು. ಪರಮಾತ್ಮ ಜ್ಞಾನವೇ ಸಕಲ ಅಜ್ಞಾನದ ನಾಶ; ಪರಮಾತ್ಮನ ಪ್ರಾಪ್ತಿಯೇ ಸಕಲಕಾಮ ಪ್ರಾಪ್ತಿ, ಸಕಲಕರ್ಮ ನಿವೃತ್ತಿ. ಈ ಗುಟ್ಟನ್ನು ಅರಿತವನಿಗೆ ನಾನು ಬುದ್ಧಿವಂತನು, ಕೃತಕೃತ್ಯನು– ಎಂಬ ಭ್ರಾಂತಿಯು ಹಾರಿಹೋಗುವದು.

## 10

### 26 - 10 - ಜೂನ್ 1957

55. ಎಲೆ ಮನಸ್ಸೆ, ಪರಮೇಶ್ವರನ ದಯೆಯೆಂಬ ನದಿಯಿಂದ ಸದ್ಗುರುವೆಂಬ ಕಾಲುವೆಯನ್ನು ಮಾಡಿಕೊಂಡು ನಿನ್ನ ಕ್ಷೇತ್ರಕ್ಕೆ ಆತನ ಪ್ರೇಮಾಮೃತ ಪ್ರವಾಹವನ್ನು ಹಾಯಿಸಿಕೊ. ಅದರಿಂದ ನಿನ್ನಲ್ಲಿ ಸದ್ಗುಣಗಳ ಬೆಳೆಯು ಹುಲುಸಾಗಿ ಬಿಡುವದು.

56. ಪರಮೇಶ್ವರನ ಮೂಲರೂಪವನ್ನು ನೀನು ನೋಡಲಾರೆ. ಆದರೆ ಆತನು ಸದ್ಗುರುವಿನ ರೂಪದಿಂದ ನಿನಗೆ ಮಾಡುವ ಬೋಧೆಗೆ ಕಿವಿಗೊಟ್ಟರೆ, ನಿನಗೆ ಆತನ ಸಗುಣರೂಪವನ್ನಾಗಲಿ ನಿರ್ಗುಣರೂಪವನ್ನಾಗಲಿ ಕಾಣುವದು ಕಷ್ಟವಾಗಲಾರದು.

57. ಗುರುವೆಂಬವನು ಪರಮೇಶ್ವರನ ಪತ್ರವನ್ನು ತರುವ ಟಪ್ಪಾಲಿನ ಆಳೆಂದು ಎಂದಿಗೂ ತಿಳಿಯದಿರು. ಸೂರ್ಯನು ಮೊದಲು ಅರುಣೋದಯ ರೂಪವಾಗಿಯೂ ಆಮೇಲೆ ಸ್ಫುಟಪ್ರಕಾಶರೂಪವಾಗಿಯೂ ತೋರುವಂತೆ ಪರಮೇಶ್ವರನೇ ನಿನಗೆ ಮೊದಲು ಸದ್ಗುರುವಿನ ರೂಪದಿಂದ ದರ್ಶನವನ್ನು ಕೊಡುವನೆಂದು ಭಾವಿಸು.

58. ಎಲೆ ಮನಸ್ಸೆ, ಗುರುವು ಮನುಷ್ಯನ ಆಕಾರದಿಂದ ಕಂಡಮಾತ್ರದಿಂದ ಅವನನ್ನು ಮನುಷ್ಯನೆಂದು ಭಾವಿಸದಿರು. ಗುರುವಿನಲ್ಲಿ ಮನುಷ್ಯಶರೀರಕ್ಕೆ ತೋರುವ ಪರಿಚ್ಛೇದಕ ಗುಣಗಳನ್ನು ಕಂಡು ಅವನನ್ನು ಸಾಧಾರಣಮನುಷ್ಯನೆಂದು ತಿಳಿಯದಿರು. ಗಂಗೆಯ ಪವಿತ್ರೋದಕವನ್ನು ಸಣ್ಣ ಥಾಲಿಯಲ್ಲಿಟ್ಟುಕೊಂಡಿದ್ದ ಮಾತ್ರದಿಂದ ಅದನ್ನು ಪಾವಿತ್ರ್ಯದಲ್ಲಿ ಕಡಿಮೆಯೆಂದು ತಿಳಿಯಬಹುದೇನು?

59. ತೀರ್ಥ, ದೇವತಾವಿಗ್ರಹ, ಮಂತ್ರ, ಗುರು–ಇವರುಗಳಲ್ಲಿ ನೀನು ಎಂಥ ಭಾವವನ್ನು ಮಾಡುವೆಯೋ ಅಂಥ ಸಿದ್ಧಿಯೇ ನಿನಗೆ ಆಗುವದು. ತೀರ್ಥವನ್ನು ನೀರೆಂದು ಭಾವಿಸಿದರೆ ಬಾಯಾರಿಕೆಯನ್ನು ಮಾತ್ರ ಹಿಂಗಿಸುವದು; ವಿಗ್ರಹವನ್ನು ಶಿಲೆಯೆಂದು ಅಥವಾ ಲೋಹವೆಂದು ಎಣಿಸಿದರೆ ಕಲ್ಲಿನ ಅಥವಾ ಲೋಹದ ಪ್ರಯೋಜನವನ್ನು ಮಾತ್ರ ಮಾಡಿಕೊಡುವದು; ಮಂತ್ರವನ್ನು ಬರಿಯ ಶಬ್ದವೆಂದು ಭಾವಿಸಿದರೆ ಅದು ಧ್ವನಿಮಾತ್ರವಾಗಿಯೇ ನಿನ್ನ ಕಿವಿಗೆ ಬೀಳುವದು. ಹಾಗೆಯೇ ಗುರುವೂ ಮನುಷ್ಯನೆಂದು ಭಾವಿಸಿದರೆ ಅವನು ಒಬ್ಬ ನೆರೆಯ ಮನುಷ್ಯನಾಗಿ ಮಾತ್ರವೇ ನಿನಗೆ ಪ್ರಯೋಜನವನ್ನುಂಟುಮಾಡಿಯಾನು.

## 11

### 26 - 11 - ಜುಲೈ 1957

60. ಎಲೆ ಮನಸ್ಸೆ, ಈ ಶರೀರವೆಂಬುದೆಲ್ಲ ನಿನ್ನ ಕಲ್ಪನೆ, ನೋಡು. ಒಂದೊಂದು ಕನಸಿನಲ್ಲಿ ಒಂದೊಂದು ಶರೀರವನ್ನು ಕಾಣುತ್ತಿರುವೆ; ಇವುಗಳೊಳಗೆ ಯಾವದು ನಿಜವಾಗಿ ನಿನ್ನದು? ಛೀ ಬೆಪ್ಪೆ! ಇದಕ್ಕೇತಕ್ಕೆ ಅಂಟಿಕೊಂಡಿದ್ದೀಯೆ?

61. ಶರೀರಕ್ಕೆ ಅಂಟಿಕೊಂಡಿರುವಾಗ ಅದರ ರೂಪು, ಆಕಾರ, ಬಣ್ಣ, ಗಾತ್ರ, ವಯಸ್ಸು, ಆರೋಗ್ಯ ಅಥವಾ ಬೇನೆ– ಇವುಗಳೆಲ್ಲವೂ ನಿನ್ನದೇ ಎನ್ನುತ್ತಿರುವೆ. ಶರೀರವು ದಿನದಿನಕ್ಕೂ ಬದಲಾಯಿಸುತ್ತಿದ್ದರೂ ನೀನೇಕೆ ಅದೇ ನೀನೆಂದುಕೊಂಡು ಬವಣೆಬಡುತ್ತಿರುವೆ?

62. ನೀನು ಕಟ್ಟಿಕೊಂಡಿರುವ ಶರೀರಕ್ಕೆ ಯಾರಾದರೂ ಒಂದಿಷ್ಟು ಆಹಾರ ವನ್ನು ಹಾಕಿದರೆ, ಯಾರಾದರೂ ಒಂದಿಷ್ಟು ಉಪಚಾರಮಾಡಿದರೆ, ಯಾರಾದರೂ ಒಂದಿಷ್ಟು ಮಾನಮರ್ಯಾದೆ ತೋರಿಸಿದರೆ, ನಿನಗೆ ಎಂಥ ಹಿಗ್ಗು! ಅಯ್ಯೊ ಬೆಪ್ಪೆ! ನಿನ್ನದೆಂದು ತಿಳಿದುಕೊಂಡಿರುವ ಈ ಶರೀರದ ಕಾಲಿಗೆ ಯಾರಾದರೂ ಬಿದ್ದರೆ, ನೀನು ಎಷ್ಟು ಉಬ್ಬುತ್ತಿರುವೆ! ಇದಕ್ಕೆ ಒಂದಿಷ್ಟು ಅಪಚಾರವಾದರೆ ಎಷ್ಟು ರೇಗುತ್ತಿರುವೆ?

63. ನೀನು ಈ ಕಲ್ಪಿತಶರೀರಕ್ಕಾಗಿ ಎಷ್ಟು ದುಡಿದರೂ ಸಾಲದು, ಎಷ್ಟು ಅದರ ಯೋಚನೆ ಹತ್ತಿಸಿಕೊಂಡರೆ ನಿನಗೆ ಹೆಚ್ಚೆನಿಸದು! ಆಹ! ಒಂದೊಂದು ಕನಸಿನಲ್ಲಿಯೂ ಅಲ್ಲಿರುವ ದೇಹದ ಮೋಹವನ್ನು ಹೀಗೆಯೇ ಅಂಟಿಸಿಕೊಂಡಿರುವೆ ಯಲ್ಲವೆ? ಇದನ್ನೇನು ಜಾಣತನವೆನ್ನಲೊ, ಹೆಡ್ಡತನವೆನ್ನಲೊ?

64. ಎಲೆ, ನಿನಗೆ ಎಷ್ಟು ಜನ್ಮಗಳಲ್ಲಿ ಎಷ್ಟು ಶರೀರಗಳು ಬಂದಿವೆಯೋ ಒಂದೊಂದು ಜನ್ಮದಲ್ಲಿ ಆಯಾ ಶರೀರವು ಎಷ್ಟು ಅವಸ್ಥೆಗಳನ್ನು ಅನುಭವಿಸಿರು ವದೋ, ಆ ಶರೀರದಲ್ಲಿದ್ದಾಗ ನಿನಗೆ ಎಷ್ಟು ಕನಸುಗಳು ಆಗಿವೆಯೋ, ಆ ಕನಸು ಗಳಲ್ಲಿ ಎಷ್ಟು ಶರೀರಗಳನ್ನು ನಾನು, ನನ್ನದು–ಎಂದು ಮೋಹಗೊಂಡಿರುವೆಯೋ ಅದರ ಲೆಕ್ಕವಾದರೂ ನಿನಗೆ ಸಿಕ್ಕಿದೆಯೆ?

65. ಈ ಒಂದೊಂದು ಶರೀರಕ್ಕೆ ಸಂಬಂಧಪಟ್ಟಿರುವ ಹೆಂಡತಿ, ಮಕ್ಕಳು, ಮನೆ, ಹೊಲ, ಹಣ, ಆಳುಕಾಳು– ಇವುಗಳಲ್ಲಿ ಎಷ್ಟು ಮೋಹವನ್ನು ತೋರಿ ಸಿರುವೆ! ಅದನ್ನಿಷ್ಟು ಯೋಚಿಸಿಕೊಳ್ಳಬಾರದೆ?

66. ಎಲೆ ಮನಸ್ಸೆ, ನಿನ್ನ ಹರಿದಾಟಕ್ಕೆಲ್ಲ ಆಸರೆಯನ್ನು ಕೊಟ್ಟಿರುವ ಶ್ರೀ ಹರಿ ನಿನ್ನ ಹಿಂತಡಿಕೆಯಾಗಿಯೇ ಎಂದೆಂದಿಗೂ ಇರುತ್ತಾನೆ. ಆತನನ್ನು ಒಮ್ಮೆ ಯಾದರೂ ಕಾಣಬೇಕೆಂಬ ಹಂಬಲ ನಿನಗೇಕೆ ಬರಲಿಲ್ಲ?

## 12

### 26 - 12 - ಆಗಸ್ಟ್ 1957

67. ಎಲೆ ಮನವೆ, ನಿನಗೆ ಯಾವದರಲ್ಲಿ ಪ್ರೇಮವಿರುವದೋ ಅದನ್ನೇ ನೀನು ಹೆಚ್ಚಾಗಿ ನೋಡುತ್ತಿರುವೆ. ಅದರಲ್ಲಿಯೇ ಇರಬೇಕೆಂದು ಹಂಬಲಿಸುವೆ; ಅದರ ಆಕಾರವನ್ನೇ ತಳೆದುಬಿಡುವೆ. ಇದು ನಿನ್ನ ಸ್ವಭಾವವೆಂಬುದನ್ನು ಮರೆಯದಿರು.

68. ನಿನಗೆ ಹೊಸಹೊಸದಾದ ರೂಪಗಳು, ಶಬ್ದಗಳು, ಸ್ಪರ್ಶಗಳು– ಬೇಕೆನ್ನಿಸುತ್ತಿರುವವು. ಆದ್ದರಿಂದ ಅವುಗಳ ಚಿಂತನೆಯಿಂದ ಅವುಗಳ ಆಕಾರವನ್ನೇ ಹೊಂದುತ್ತಿರುವೆ. ನಿಜವಾಗಿ ನೀನು ಪಡೆದುಕೊಂಡ ಯಾವ ಶಬ್ದಸ್ಪರ್ಶ ರೂಪಾದಿಗಳೂ ನಿನ್ನ ಹೊರಗೆ ಇಲ್ಲ. ಎಲ್ಲವೂ ನೀನು ಹಾಕಿಕೊಂಡ ವೇಷಮಾತ್ರವೇ ಆಗಿರುತ್ತದೆ.

69. ನೀನು ಗೆಳೆಯರು, ಹಗೆವರು, ಮಿಕ್ಕವರು, ಆಗದವರು, ನೆಂಟರು, ಬೇಕಾದವರು– ಎಂದು ಕಲ್ಪಿಸಿಕೊಳ್ಳುವದೂ ನಿನ್ನ ಈ ಹುಚ್ಚು ಪ್ರೇಮದ ಫಲವೇ. ಇಲ್ಲದ ಭೇದಗಳನ್ನು ಕಲ್ಪಿಸಿಕೊಂಡು ಸಂಕಟಪಡುವದರಲ್ಲಿಯೂ ನಿನಗೆ ಯಾವದೋ ಸುಖವು ಸಿಕ್ಕೀತೆಂಬ ಬಯಲು ಭ್ರಮೆ ನಿನಗಿದೆ!

70. ಎಲೆ ಮನಸ್ಸೆ, ಕಲ್ಪಿತವಸ್ತುಗಳೆಲ್ಲ ನಿನ್ನ ಆಕಾರಮಾತ್ರಗಳೇ; ಅವು ನಿನಗಿಂತ ಎಂದಿಗೂ ಬೇರೆಯಾಗಿರುವದಿಲ್ಲ. ಆದ್ದರಿಂದಲೇ ಅವುಗಳಿಂದ ನಿನಗೆ ತೃಪ್ತಿಯಾಗದೆ ಇರುತ್ತದೆ. ಮರಳುಕಾಡಿನಲ್ಲಿ ಮಕರಂದವನ್ನು ಹುಡುಕುವ ದುಂಬಿಯಂತೆ ನೀನು 'ಇನ್ನೊಂದು ಯಾವದಾದರೂ ಬೇಕು!' ಎನ್ನುತ್ತಲೇ ತಡಕಾಡುತ್ತಿರುವೆ!

71. ಹರಿದಾಡುವ ಮನವೆ, ಎಲ್ಲಿ ಹೋದರೂ ನೀನು ನಿನ್ನಿಂದ ಹೊರಕ್ಕೆ ಹೋಗಲಾರೆ. ನಿನ್ನ ಆಕಾರದಿಂದ ನಿನಗೆ ತೃಪ್ತಿ ಸಿಕ್ಕಲೊಲ್ಲದು. 'ನನ್ನ ಪ್ರೇಮಕ್ಕೆ ತಕ್ಕದ್ದು ಯಾವದು?' ಎಂದು ಅರಸುತ್ತಿದ್ದೀಯೆ; ಅಂಥ ವಸ್ತು ಈವರೆಗೆ ನಿನಗೆ ಯಾವದೊಂದೂ ದೊರೆತಿರುವದೇ ಇಲ್ಲ.

72. ಅಂತೂ, ಎಲೆ ಮನಸ್ಸೆ, ನಿನ್ನಲ್ಲಿ ಪ್ರೇಮವಿದೆ, ಪ್ರೇಮಕ್ಕೆ ವಿಷಯ ವಾದ ವಸ್ತು ಸಿಕ್ಕಲಿಲ್ಲ. ಇದರಿಂದಲಲ್ಲವೆ, ನಿನಗೆ ಉಂಟಾಗಿರುವ ಅತೃಪ್ತಿ? ಇದಕ್ಕೊಂದು ಪರಿಹಾರವನ್ನು ಹೇಳುವೆನು ಕೇಳು. ನಿನ್ನ ಮೂಲವಾಗಿ ಒಂದು ಆನಂದದ ಬುಗ್ಗೆಯಿದೆ. ಅದಕ್ಕೆ ಭಗವಂತನೆಂದೂ ಸಚ್ಚಿದಾನಂದನೆಂದೂ ಹೆಸರು. ಆ ಮೂಲದ ಕಡೆಗೆ ತಿರುಗು, ನಿನ್ನ ಪ್ರೇಮವು ಸಾರ್ಥಕವಾಗುವದು; ಶಾಶ್ವತವಾಗಿ ನಿಲ್ಲುವದು. ಏಕೆಂದರೆ ಆಗ ನೀನೇ ಆ ಆನಂದಮೂರ್ತಿಯಾಗಿಬಿಡುವೆ!

*****

ಸಭ್ಯಗೃಹಸ್ಥನ ಲೌಕಿಕ, ಧಾರ್ಮಿಕ ಕರ್ತವ್ಯಗಳೇನು, ದೇವಸ್ಥಾನಗಳಲ್ಲಿ ಹೇಗೆ ನಡೆದುಕೊಳ್ಳಬೇಕು, ಮನಃಶಾಂತಿಗೆ ಸುಲಭೋಪಾಯ, ನಮ್ಮ ಜೀವನದ ಸ್ವರೂಪ ಮತ್ತು ಹೆಗ್ಗುರಿ ಇತ್ಯಾತಿ ಸಾಮಾನ್ಯ ಜನರ ಪ್ರಶ್ನೆಗಳಿಗೆಲ್ಲಾ ಸರಳವಾಗಿಯೂ, ಶಾಸ್ತ್ರಯುಕ್ತಿಗಳಿಗೇ ಒಪ್ಪಾಗಿಯೂ ಇರುವ ಉತ್ತರಗಳಿವೆ. ದಿನಕ್ಕೊಂದು ಲೇಖನದಂತೆ ಪಠಿಸಿದರೂ ವರ್ಷವಿಡೀ ಓದಬಹುದಾದ ಉತ್ತಮ ಗ್ರಂಥ. ವೇದಾಂತದ ಆರಂಭದಲ್ಲಿರುವ ಮನುಷ್ಯರಿಂದ ಹಿಡಿದು ಜಿಜ್ಞಾಸುಗಳಿಗೆ ಅನ್ವಯಿಸುವ ಅತ್ಯುಪಯುಕ್ತವಾದ ವಿಷಯಗಳಿವೆ.

(ಎರಡನೆಯ ಮುದ್ರಣ, 2012, ಪು. 356, ಬೆಲೆ. 70 ರೂ.)

## 5. ವೇದಾಂತ ಸಂದೇಶಗಳು : ಸಂಪುಟ 4 (ಅಧ್ಯಾತ್ಮದ ಔನ್ನತ್ಯದೆಡೆಗೆ)

ಅ. ಪ್ರ. ಪತ್ರಿಕೆಯ 19, 20, 22, 23 ಸಂಪುಟಗಳಲ್ಲಿ ''ಈ ತಿಂಗಳ ಸಂದೇಶಗಳು'' ಎಂಬ ಶೀರ್ಷಿಕೆಯಲಿ ಕ್ರಮ ಕ್ರಮವಾಗಿ ಪ್ರಕಟಿಸಿದ್ದ 48 ಲೇಖನಗಳ ಸಂಗ್ರಹ. (1) ಮಾಯೆಯಿಂದ ಮಾಯಾತೀತನೆಡೆಗೆ (2) ಸತ್ಯಜ್ಞಾನಾನಂದರ ದರ್ಶನದ ದಾರಿ (3) ಅಧ್ಯಾತ್ಮ ಪ್ರಗತಿಯ ಮಾರ್ಗಗಳು (4) ಸಾಧನಗಳಿಂದ ಪರಮಾತ್ಮನ ಆನಂದ ಎಂಬ ನಾಲ್ಕು ಅಧ್ಯಾಯಗಳಲ್ಲಿ ಅಳವಡಿಸಿದೆ.

(ಎರಡನೆಯ ಮುದ್ರಣ, 2012, ಪು. 334, ಬೆಲೆ. 60 ರೂ.)

## 6. ವೇದಾಂತ ಸಂದೇಶಗಳು : ಸಂಪುಟ 5 (ಶ್ರೀ ಶ್ರೀಗಳವರ ಹಿತವಚನಗಳು)

ಅ. ಪ್ರ. ಪತ್ರಿಕೆಯಲ್ಲಿ ಸಂಪುಟ 14ರಿಂದ ಸಂ. 44ರ ವರೆಗೆ (ಜನವರಿ 1943–ಫೆಬ್ರವರಿ 1975) ಶಂಕರನ ಪತ್ರಗಳು ಎಂಬ ಶೀರ್ಷಿಕೆಯಲ್ಲಿ ಕೆಲವೊಮ್ಮೆ ಒಂದು ಮತ್ತು 2-3 ಪುಟಗಳಂತೆ ಪ್ರಶ್ನೋತ್ತರ ರೂಪದಲ್ಲಿ ಶ್ರೀ ಶ್ರೀಗಳವರೇ ಬರೆದು ಪ್ರಕಟಿಸಿದ್ದ 337 ಲೇಖನಗಳ (583 ಪು.) ಸಂಗ್ರಹ. ಲೇಖನಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು : 1) ಕುಟುಂಬ ಭಾವನೆ, ಹರಿಜನ ಪ್ರೇಮ, ಧನದ ಉಪಯೋಗ ಇತ್ಯಾದಿ ಸಾಮಾನ್ಯ ವಿಷಯಗಳನ್ನೂ 2) ಪಾರಿವ್ರಾಜ್ಯ, ವೇದಾಂತದ ವಿಚಾರವನ್ನು ಚರ್ಚಿಸುವ ಕ್ರಮ, ಸಂನ್ಯಾಸಧರ್ಮ, ಆಧ್ಯಾತ್ಮಿಕ ಸಾಧನಗಳು, ನಿಜವಾದ ವಿದ್ಯೆ ಇತ್ಯಾದಿ ಶಾಸ್ತ್ರೀಯವಾದ ಲೇಖನಗಳನ್ನೂ ಒಳಗೊಂಡಿದೆ. ಪರಮಪುರುಷಾರ್ಥಕ್ಕೆ ಸಾಧನವಾದ ವಿಚಾರವನ್ನು ತಿಳಿಸುವ ಲೇಖನಗಳಾದ್ದರಿಂದ ಎಲ್ಲರಿಗೂ ಉಪಯುಕ್ತವಾದ ಗ್ರಂಥ. (ಎರಡನೆಯ ಮುದ್ರಣ, 2012, ಪು. 583. ಬೆಲೆ. 120 ರೂ.)

## 7. ಶಾಂಕರವೇದಾಂತ ನಿಘಂಟು :-

ಶ್ರೀ ಶ್ರೀಗಳವರು 1947 ಅಕ್ಟೋಬರ್ (ಸಂಪುಟ 17) ನಿಂದ 1950 ಆಗಸ್ಟ್ (ಸಂ.20)ರವರೆಗೆ ಬರೆದು ಪ್ರಕಟಿಸಿದ್ದ 41 ಲೇಖನಗಳ ಸಂಗ್ರಹ ಗ್ರಂಥರೂಪದಲ್ಲಿ ಈಗ ಮೊದಲನೆಯ ಬಾರಿಗೆ ಹೊರತರಲಾಗಿದೆ. ಪ್ರಸ್ಥಾನತ್ರಯ ಭಾಷ್ಯಗಳಲ್ಲಿರುವ ಸುಮಾರು 400 ಶಬ್ದಗಳಿಗೆ ಅರ್ಥ, ವಿವರಣೆ -ಮುಂದೆ ಬಂದಿರುವ ಸಂದರ್ಭಗಳನ್ನು ಸಹ ಸೂಚಿಸಿದೆ. ಅಕ್ಷರಾನುಕ್ರಮಣಿಕೆಯಲ್ಲಿ ಜೋಡಿಸಲಾಗಿದೆ. ಶಂಕರಾಚಾರ್ಯರ ವೇದಾಂತ ಪ್ರಕ್ರಿಯೆಯ ಅಸಾಧಾರಣ ರೂಪವನ್ನು ತಿಳಿದುಕೊಳ್ಳಬೇಕೆನ್ನುವವರಿಗೆ ಬಹಳ ಉಪಯುಕ್ತವಾದ ಗ್ರಂಥ. (ಮೊದಲನೆಯ ಮುದ್ರಣ 2014, ಪು. 58, ಬೆಲೆ. 20 ರೂ.)

## 8. ಹೊಸ ಜಿಜ್ಞಾಸುಗಳ ಪ್ರಶ್ನೆಗಳಿಗೆ ಉತ್ತರಗಳು ಮತ್ತು ಮನಸ್ಸಿಗೆ ಉಪದೇಶ:-

ಅ. ಪ್ರ. ಪತ್ರಿಕೆಯಲ್ಲಿ ಶ್ರೀಶ್ರೀಗಳವರು 1950 ಸೆಪ್ಟಂಬರ್ (ಸಂಪುಟ 20) ರಿಂದ 1956 ಮೇ (ಸಂ. 25)ರ ವರೆಗೆ 54 ಲೇಖನಗಳು ಮತ್ತು 1956 ಸೆಪ್ಟಂಬರ್ ನಿಂದ 1957 ಆಗಸ್ಟ್ (ಸಂ. 26) ವರೆಗೆ ಪ್ರಕಟಿಸಿದ್ದ 12 ಲೇಖನಗಳನ್ನು ಸೇರಿಸಿ ಪ್ರಶ್ನೋತ್ತರ ರೂಪದಲ್ಲಿ ಗ್ರಂಥ ರೂಪವಾಗಿ ಮೊದಲನೆಯ ಬಾರಿಗೆ ಹೊರತರಲಾಗಿದೆ. ಸಾಮಾನ್ಯ ಜನರಿಗೂ ಬಹಳ ಉಪಯುಕ್ತವಾಗಿ ವೇದಾಂತದಲ್ಲಿ ಅಭಿರುಚಿಯನ್ನು ಉಂಟುಮಾಡುವ ಗ್ರಂಥ. (ಮೊದಲನೆಯ ಮುದ್ರಣ 2014, ಪು. 84, ಬೆಲೆ. 30ರೂ.)

ಇತರ ಇನ್ನೂ ಕೆಲವು ಸಂಪುಟಗಳು ಹೊರಬರಲಿವೆ.

# ಸಂಸ್ಥಾಪಕರ ಸ್ಮರಣೆ



ವೇದಧರ್ಮದ ಪುನರುತ್ಥಾನ ಮತ್ತು ವೇದಾಂತಕ್ಕೊಂದು ನವಚೇತನ ತುಂಬಿದ ಮಹತ್ಕಾರ್ಯದಿಂದ ಶ್ರೀ ಶಂಕರ ಭಗವತ್ಪಾದರು ಸರ್ವದಾ ಸ್ಮರಣೀಯರು. ಬ್ರಹ್ಮೀಭೂತ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು (ಪೂರ್ವಾಶ್ರಮದ ಶ್ರೀಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮರು -ವೈ. ಸುಬ್ಬರಾಯರು, ಜನನ 5.1.1880) ಶ್ರೀಶಂಕರವೇದಾಂತ ಸರಣಿಯಿಂದ ಆಕರ್ಷಿತರಾಗಿ, ಆಳವಾದ ಅಧ್ಯಯನ, ಚಿಂತನ-ಮಂಥನಗಳಿಂದ, ತಮ್ಮ ವಿಶಿಷ್ಟ ಸಂಶೋಧಾನಾಪ್ರವೃತ್ತಿಯನ್ನು ಬಳಸಿ, ಶಂಕರರ ಅಮೋಘವಾದ ಪ್ರಸ್ಥಾನತ್ರಯಭಾಷ್ಯಗಳಿಗೆ ಹತ್ತಿದ್ದ ಕೊಳೆಯನ್ನು, ಮುತ್ತಿದ್ದಧೂಳನ್ನು ತೊಡೆದು ಶಾಂಕರ ವೇದಾಂತದನೈಜತಿರುಳನ್ನು ಕಂಡುಕೊಂಡರು. ಶಾಂಕರವೇದಾಂತಕ್ಕೆ 20ನೇ ಶತಮಾನದ ಅಧಿಕೃತ ವಕ್ತಾರರಾದರು, ಅಭಿನವಶಂಕರರಾದರು.

'ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿನಿಂದ ಬದುಕಿರುವವರೆಗೂ ವೇದಾಂತ ಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀ ಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥ ಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದ ಪುರುಷ ಸರಸ್ವತೀ ಎಂಬ ಅನ್ವರ್ಥ ನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಸಂಸ್ಕೃತ ಬಾರದ ಅಧ್ಯಾತ್ಮ ವಿಚಾರದ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸುವಾಗಲೇ ಅಧ್ಯಾತ್ಮದ ಒಲವಿನಿಂದ ಸಂಸ್ಕೃತ ಕಲಿತು ಸಾಧಕರಾದರು. ಆ ಸಮಯದಲ್ಲಿ ಶ್ರೀ ಹೊಸಕೆರೆ ಚಿದಂಬರಯ್ಯನವರ, ಶ್ರೀ ಮಹಾಭಾಗವತರಸಂಪರ್ಕ, ಅಧ್ಯಾತ್ಮಬಾಂಧವ್ಯ, ಆತ್ಮೀಯತೆ, ಅನಂತರ ಶ್ರೀಗೋಂದಾವಳಿ ಮಹಾರಾಜರಲ್ಲಿ ಶ್ರೀರಾಮತಾರಕ ಮಂತ್ರೋಪದೇಶ, ಶೃಂಗೇರಿ ಜಗದ್ಗುರುಗಳಾದ ಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತಿ ಮಹಾಸ್ವಾಮಿಗಳವರಿಂದ ಭಾಷ್ಯಶಾಂತಿಪಾಠಗಳು ಅವರ ಶ್ರದ್ಧಾಕಾರ್ಯತತ್ಪರತೆಗೆ ಮೆರಗನ್ನು ನೀಡಿದವು.

1937ರಲ್ಲಿ ಹೊಳೆನರಸೀಪುರದಲ್ಲಿ ನೆಲೆಸಿದ ಮೇಲೆ ತಮ್ಮನ್ನು ಪೂರ್ಣವಾಗಿ ಶಾಂಕರವೇದಾಂತಕ್ಕೆ ಅರ್ಪಿಸಿಕೊಂಡರು. 1948ರಲ್ಲಿ ಸಂನ್ಯಾಸಸ್ವೀಕಾರ ಮಾಡಿದರು. ಶುದ್ಧತತ್ತ್ವಾನ್ವೇಷಣೆ, ನಿಖರವಾದ ಬರವಣಿಗೆ, ಆಚಾರನಿಷ್ಠೆ ಮತ್ತು ಕಠೋರನಿಯಮಪಾಲನೆಗೆ ಶ್ರೀ ಶ್ರೀಗಳವರು ಹೆಸರಾದವರು. ಅವರು ಸ್ಥಾಪಿಸಿರುವ (1920) ಅಧ್ಯಾತ್ಮಪ್ರಕಾಶಕಾರ್ಯಾಲಯವು ಈಗಲೂ ನಿಜವಾದ ಅಧ್ಯಾತ್ಮವಿದ್ಯಾಪ್ರಸಾರ ಕೇಂದ್ರವಾಗಿದೆ.

ಪೂಜ್ಯರು 1975ನೇ ಆಗಸ್ಟ್ 5ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ. ಇಂದಿಗೂ ಚೈತನ್ಯಸ್ವರೂಪಿಗಳಾಗಿ ಕಾರ್ಯಾಲಯದ ಮೂಲ ಶಕ್ತಿಯಾಗಿದ್ದಾರೆ.

ಈಚೆಗೆ 28.07.2008ರಂದು ಪ್ರತಿಷ್ಠೆಗೊಂಡ ಶ್ರೀ ಶ್ರೀಗಳವರ ಅಮೃತಶಿಲಾವಿಗ್ರಹವು ಹೊಳೆನರಸೀಪುರದ ಸಮಾಧಿಮಂದಿರದಲ್ಲಿ ರಾರಾಜಿಸುತ್ತಿದೆ.